ಶಿವಳ್ಳಿ ಕೆಂಪೇಗೌಡರ ಬದುಕು ಮತ್ತು ಬರಹ: ಒಂದು ಅಧ್ಯಯನ

(ಕನ್ನಡ ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಿರುವ ಸಂಶೋಧನಾ ನಿಬಂಧ)

ಸಂಶೋಧನಾ ವಿದ್ಯಾರ್ಥಿ

ನಾಗರಾಜು

ರಿ.ನಂ ೧೪೧೨೦೧೦೩೦೦೪೯

ಕರ್ನಾಟಕ ಸಂಘ (ರಿ)., ಮಂಡ್ಯ

ಮಾರ್ಗದರ್ಶಕರು

ಡಾ.ಎ.ಆರ್ ಮದನಕುಮಾರ್

ಕನ್ನಡ ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ

ಸರ್ಕಾರಿ ಮಹಿಳಾ ಕಾಲೇಜು ಮಂಡ್ಯ

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ ಮಾನ್ಯತಾ ಸಂಸ್ಥೆ)

2015

ಶಿವಳ್ಳಿ ಕೆಂಪೇಗೌಡರ ಬದುಕು ಮತ್ತು ಬರಹ: ಒಂದು ಅಧ್ಯಯನ

(ಕನ್ನಡ ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಿರುವ
ಸಂಶೋಧನಾ ನಿಬಂಧ)

ಸಂಶೋಧನಾ ವಿದ್ಯಾರ್ಥಿ

ನಾಗರಾಜು

ರಿ.ನಂ ೧೪೧೨೦೧೦೩೦೦೪

ಕರ್ನಾಟಕ ಸಂಘ (ರಿ)., ಮಂಡ್ಯ

ಮಾರ್ಗದರ್ಶಕರು

ಡಾ.ಎ.ಆರ್ ಮದನಕುಮಾರ್

ಕನ್ನಡ ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ

ಸರ್ಕಾರಿ ಮಹಿಳಾ ಕಾಲೇಜು ಮಂಡ್ಯ

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ ಮಾನ್ಯತಾ ಸಂಸ್ಥೆ)

2015

ಮಾರ್ಗದರ್ಶಕರ ದೃಢೀಕರಣ ಪತ್ರ

೨೦೧೪–೧೫ನೇ ಸಾಲಿನಲ್ಲಿ ನಾಗರಾಜು ಎಂ.ಫಿಲ್ ವಿದ್ಯಾರ್ಥಿಯು ಈ ಪರೀಕ್ಷೆಯ ಅಂಗವಾಗಿ **"ಶಿವಳ್ಳಿ ಕೆಂಪೇಗೌಡರ ಬದುಕು ಮತ್ತು ಬರಹ"** ಎಂಬ ವಿಷಯ ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನ ನಿಬಂಧವನ್ನು ಸಿದ್ಧಪಡಿಸಿರುತ್ತಾರೆ. ಇದನ್ನು ಇವರು ಮೊದಲು ಯಾವುದೇ ಪದವಿ, ಡಿಪ್ಲೋಮ ಅಧ್ಯಯನಕ್ಕಾಗಲಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿಲ್ಲ ಎಂದು ದೃಢೀಕರಿಸುತ್ತೇನೆ.

ಸ್ಥಳ : ಮಂಡ್ಯ.

ದಿನಾಂಕ : 30-7-2015

ಮಾರ್ಗದರ್ಶಕರು

ಡಾ. ಪಿ.ಆರ್. ಮದನಕುಮಾರ್
ಕನ್ನಡ ಸಹ ಪ್ರಾಧ್ಯಾಪಕ
ಮಹಿಳಾ ಸರ್ಕಾರಿ ಕಾಲೇಜು
ಮಂಡ್ಯ-೫೭೧೪೦೧

ಸಂಶೋಧಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘದ ಶ್ರೀಕಂಠೇಶಗೌಡ. ಸಂಶೋಧನಾ ಕೇಂದ್ರದಲ್ಲಿ ೨೦೧೪-೧೫ರ ಸಾಲಿಗೆ ಕನ್ನಡ ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **"ಶಿವಳ್ಳಿ ಕೆಂಪೇಗೌಡರ ಬದುಕು ಮತ್ತು ಬರಹ"** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ॥ ಎ.ಆರ್.ಮದನಕುಮಾರ್ ರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಯಾವುದೇ ಅಧ್ಯಾಯವನ್ನಾಗಲಿ, ಬೇರೆ ಯಾವ ಗ್ರಂಥ ಅಥವಾ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವವಿದ್ಯಾಲಯವು ನೀಡುವ ಎಂ.ಫಿಲ್ (ಕನ್ನಡ) ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಸ್ಥಳ : ಮಂಡ್ಯ

ದಿನಾಂಕ : 30/7/15

ಸಂಶೋಧನಾ ವಿದ್ಯಾರ್ಥಿ

ರಿ.ನಂ ೧೪೧೨೦೧೦೩೦೦೪೯

ಕರ್ನಾಟಕ ಸಂಘ (ರಿ). ಮಂಡ್ಯ

ಪರಿವಿಡಿ

ಪ್ರಸ್ತಾವನೆ

ಭಾರತವು ಬಹಳ ಪ್ರಾಚೀನ ಪರಂಪರೆಯನ್ನು ಹೊಂದಿದೆ. ಈ ಪರಂಪರೆಯ ಒಂದು ಭಾಗವಾದ ಕನ್ನಡ ಸಾಹಿತ್ಯವೂ ಕೂಡ ಸಾವಿರಾರು ವರ್ಷಗಳ ಪ್ರಾಚೀನತೆಯನ್ನು ಹೊಂದಿದೆ. ಅಂದಿನಿಂದ ಇಂದಿನವರೆಗೆ ಹಲವಾರು ಪ್ರಸಿದ್ದ ಸಾಹಿತಿಗಳನ್ನು ಹಾಗೆಯೇ ಸಾಹಿತ್ಯ ಕೃತಿಗಳನ್ನು ತನ್ನ ಒಡಲೊಳಗೆ ಇರಿಸಿಕೊಂಡಿದೆ. ಸಮೃದ್ದಿಯಿಂದ ಕೂಡಿದ ಕನ್ನಡ ಸಾಹಿತ್ಯವೂ ಹಲವಾರು ಚಾರಿತ್ರಿಕ ಘಟ್ಟಗಳಲ್ಲಿ ಬೆಳೆದುಬಂದಿದೆ. ಪ್ರಾಚೀನ ಸಾಹಿತ್ಯದಿಂದ ಅರ್ವಾಚೀನ ಸಾಹಿತ್ಯದವರೆಗೂ ಕನ್ನಡ ಸಾಹಿತ್ಯ ಹಲವಾರು ವೈಪರಿತ್ಯವನ್ನು ಕಂಡಿದೆ. ಪ್ರಾಚೀನ ಸಾಹಿತ್ಯದಲ್ಲಿ ರಾಜರ ಆಡಳಿತ, ಅರಮನೆಯ ಚಿತ್ರಣ, ಯುದ್ಧವರ್ಣನೆಗಳು ಪ್ರಧಾನವಾಗಿದ್ದವು. ಅಲ್ಲದೆ ಧಾರ್ಮಿಕ ಸಂಬಂಧಿತವಾದ ಸಾಹಿತ್ಯಕೃಷಿಯೂ ಹೇರಳವಾಗಿಯೇ ಆಗಿದೆ. ಆದರೆ ನಂತರದ ಸಂದರ್ಭದಲ್ಲಿ ಉಂಟಾದ ಕೆಲವು ಪ್ರೇರಣೆ ಪ್ರಭಾವಗಳಿಂದ ಸಾಹಿತ್ಯ ತನ್ನ ದಿಕ್ಕನ್ನು ಬದಲಾಯಿಸಿಕೊಂಡಿತು. ಹೊಸಗನ್ನಡ ಸಾಹಿತ್ಯವು ಪರಂಪರಾಗತ ಚೌಕಟ್ಟಿನಿಂದ ಬಿಡುಗಡೆಹೊಂದಿ ತನ್ನದೇ ಆದ ವಿಶಿಷ್ಟ ನೆಲೆಯನ್ನು ನಿರ್ಮಿಸಿಕೊಂಡಿತು. ಇದಕ್ಕೆ ಮುಖ್ಯವಾಗಿ ಪ್ರೇರಣೆಯಾದುದ್ದು ಆಂಗ್ಲ ಶಿಕ್ಷಣ.

ಆಂಗ್ಲ ಶಿಕ್ಷಣ ಮತ್ತು ಪಾಶ್ಚಾತ್ಯ ಸಾಹಿತ್ಯದ ಸ್ಪರ್ಶಪಡೆದ ಕನ್ನಡ ಸಾಹಿತ್ಯ ಆಧುನಿಕವಾಗಿ ಸಾಮಾನ್ಯ ಜನಜೀವನದ ಅಭಿವ್ಯಕ್ತಿಯಾಗಿ ಸಮಾಜಮುಖಿಯಾಗಿ ಜನಪರವಾಯಿತು. ಈ ಅವಧಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಕಾವ್ಯ, ಕಥೆ, ಕಾದಂಬರಿ, ನಾಟಕಗಳು, ಪ್ರವಾಸ ಕಥನ ಇನ್ನು ಮುಂತಾದ ಅನೇಕ ಪ್ರಕಾರಗಳು ರೂಪುಗೊಂಡವು. ಈ ಸಾಹಿತ್ಯ ಕೃಷಿಯ ಮೇಲೆ ಪಾಶ್ಚಿಮಾತ್ಯ ಶಿಕ್ಷಣ ಮತ್ತು ಸಾಹಿತ್ಯವಲ್ಲದೆ ಮಾರ್ಕ್ಸ್‌ವಾದ, ಅಂಬೇಡ್ಕರ್‌ವಾದ, ಗಾಂಧಿವಾದ, ಲೋಹಿಯಾವಾದ ಮೊದಲಾದವುಗಳ ಪ್ರಭಾವ ಉಂಟಾಯಿತು. ಈ ಹಿನ್ನೆಲೆಯಲ್ಲಿ ಬರಹಗಾರರು ತಮ್ಮ ಬರವಣಿಗೆಯ ಉದ್ದೇಶವನ್ನು ಸ್ಪಷ್ಟೀಕರಿಸಿಕೊಂಡರು. ಅವುಗಳ ಫಲವೇ ಅಸ್ಪೃಶ್ಯತೆ, ಜಾತಿಭೇದ, ಲಿಂಗಭೇದ, ವರ್ಗಭೇದ ಮೊದಲಾದ ಸಾಮಾಜಿಕ ಸಮಸ್ಯಗಳ ವಿರುದ್ದದ ಸಾಹಿತ್ಯ ರಚನೆಗಳಾದವು. ಇವುಗಳಲ್ಲಿ ರೈತಪರ ಧ್ವನಿಯುಳ್ಳ ಸಾಹಿತ್ಯವು ಕಾಲನುಕ್ರಮದಲ್ಲಿ ಹೇರಳವಾಗಿ ರಚನೆಗೊಂಡವು.

ಆಧುನಿಕ ಕನ್ನಡ ಸಾಹಿತ್ಯದ ಮೊದಲ ಘಟ್ಟವಾದ ನವೋದಯ ಸಂದರ್ಭದಲ್ಲೇ ವಿರಳವಾಗಿ ರೈತ ಪರವಾದ ದನಿಯುಳ್ಳ ಸಾಹಿತ್ಯಗಳು ರಚನೆಗೊಂಡವು. ಕುವೆಂಪು ರವರು ಈ ಸಾಲಿನ ಆದ್ಯರು. ನಂತರ ಮುಖ್ಯವಾಗಿ ರೈತ, ರೈತಕಾರ್ಮಿಕ, ದಲಿತ ಇನ್ನಿತರೆ ಶೋಷಿತರ ದನಿಯಾದದ್ದು ದಲಿತ ಮತ್ತು ಬಂಡಾಯ ಸಾಹಿತ್ಯ ಸಂದರ್ಭದಲ್ಲಿ. ಈ ಶೋಷಿತರನ್ನು ಸಾಹಿತ್ಯದ ವಸ್ತುವಾಗಿಸಿಕೊಂಡು ಅವರ ನೋವಿಗೆ ಸ್ಪಂದಿಸಿದ ಸಾಲಿನಲ್ಲಿ ಸಣ್ಣಕಥೆಗಳು ಮುಖ್ಯವಾಗುತ್ತವೆ. ಆದರಿಂದ ದೇಶದ ಶೇ೭೦ರಷ್ಟು ಜನರಿರುವ ರೈತರ ಸಮಸ್ಯೆಗಳು ಪರಿಹಾರವಾಗಬೇಕಾಗಿರುವುದು ಅತ್ಯಗತ್ಯ.

ರೈತರ ಸಮಸ್ಯೆಗಳನ್ನು ತಮ್ಮ ಬರಹಗಳ ಮುಖ್ಯ ನೆಲೆಯಾಗಿಸಿಕೊಂಡವರು ಮಂಡ್ಯಜಿಲ್ಲೆಯ ಅಲಕ್ಷಿತ ಸಾಹಿತಿ ಶಿವಳ್ಳಿ ಕೆಂಪೇಗೌಡ. ಇವರ ಬರಹಗಳಲ್ಲಿ ಶೇಖಡಾವಾರು ರೈತ ಸಂಸ್ಕೃತಿಯ ಸಮಸ್ಯೆಗಳಾಗಿವೆ. ಅಲ್ಲದೆ ಹಳ್ಳಿಗಳಲ್ಲಿ ತಾಂಡವವಾಡುತ್ತಿರುವ ಜಾತೀಯತೆ. ಲಿಂಗತಾರತಮ್ಯಗಳನ್ನು ತಮ್ಮ ಸಾಹಿತ್ಯದ ವಸ್ತುವಾಗಿಸಿಕೊಂಡಿದ್ದಾರೆ. ಇದರೊಂದಿಗೆ ಮುದ್ರಣ ಕ್ಷೇತ್ರದಲ್ಲಿ ದುಡಿಯುವವರ ಸಮಸ್ಯೆಗಳು ಮತ್ತು ವ್ಯಕ್ತಿಯಲ್ಲಿನ ದುಶ್ಚಟಗಳ ಪರಿಣಾಮಗಳು ಇವರ ಬರಹದ ವಸ್ತುವಾಗಿದೆ. ಈ ಅಂಶಗಳು ಸಾಮಾಜಿಕ ಸ್ವಾಸ್ಥ್ಯದ ದೃಷ್ಟಿಯಿಂದ ಅತ್ಯಂತ ಅಧ್ಯಯನಯೋಗ್ಯ ವಿಷಯವಾಗಿದೆ. ಈ ನಿಟ್ಟಿನಲ್ಲಿ ನಾನು **'ಶಿವಳ್ಳಿ ಕೆಂಪೇಗೌಡರ ಬದುಕು ಮತ್ತು ಬರಹ'**ವನ್ನು ಅಧ್ಯಯನಕ್ಕೆ ಒಳಪಡಿಸಿದ್ದೇನೆ. ರೈತನ, ದಲಿತನ, ಸ್ತ್ರೀಯರ ಸಂವೇದನೆಗಳನ್ನು ಈ ಪ್ರಬಂಧದಲ್ಲಿ ವಿಶ್ಲೇಷಿಸಿದ್ದೇನೆ. ಇದರೊಂದಿಗೆ ಮಂಡ್ಯ ಜಿಲ್ಲೆಯ ಗ್ರಾಮೀಣ ಸೊಗಡಿನ ಭಾಷೆ ಕುರಿತಂತೆ ವಿಶ್ಲೇಷಣೆಯು ಈ ಪ್ರಬಂಧದ ಉದ್ದೇಶವಾಗಿರುತ್ತದೆ.

ಅಧ್ಯಾಯ – ೧

೧.೧ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ.

ಕನ್ನಡ ಭಾಷೆ ಮತ್ತು ಸಾಹಿತ್ಯ ಪ್ರಾಚೀನ ಪರಂಪರೆಯನ್ನು ಹೊಂದಿದೆ. ಕಾಲಮಾನದ ಅಳತೆಯಲ್ಲಿ ಒಂದುವರೆ ಸಾವಿರ ವರ್ಷಗಳಷ್ಟು ಪ್ರಾಚೀನತೆ ಈ ಸಾಹಿತ್ಯಕ್ಕಿದೆ. ಜೊತೆಗೆ ಅಗಣಿತವಾದ ಪರಭಾಷೆಗಳಿಂದ ಪ್ರೇರಣೆಗೊಂಡಿದೆ. ವಸ್ತು, ತಂತ್ರ, ಸಾಹಿತ್ಯ ಪ್ರಕಾರಗಳ ರಚನೆಯ ಮೇಲೂ ಈ ಪ್ರೇರಣೆ ನಿರಂತರವಾಗಿ ಸಾಗುತ್ತಾ ಬಂದಿದೆ. ಸಾಹಿತ್ಯವೆಂದರೆ ಮಹಾಕಾವ್ಯಗಳು ಎಂಬ ಮಾತಿಗೆ ಇಂದು ತಿಲಾಂಜಲಿ ಇಡಲಾಗಿದೆ. ಬದುಕಿನಂತೆಯೇ ಸಾಹಿತ್ಯವೂ ವೈವಿಧ್ಯಮಯವಾದುದು. ನಿರಂತರ ಚಲನಶೀಲವಾದುದಾಗಿದೆ. ಆದ್ದರಿಂದಲೇ ಸಾಹಿತ್ಯದ ಅರ್ಥ ಇಂದು ವೈವಿಧ್ಯಮಯವಾದ ವ್ಯಾಖ್ಯಾನಕ್ಕೆ ಒಳಗಾಗುತ್ತಿದೆ. ಇಂದು ಸಾಹಿತ್ಯ ವಸ್ತು, ಶೈಲಿ, ಛಂದಸ್ಸು ಈ ನಿರ್ಬಂಧಗಳಿಂದ ಹೊರಬಂದಿದೆ. ಆದ್ದರಿಂದಲೇ ಕನ್ನಡದಲ್ಲಿ ಇಂದು ಮಹಾಕಾವ್ಯಗಳಲ್ಲದೆ ಅನೇಕ ಸಾಹಿತ್ಯ ಪ್ರಕಾರಗಳು ರಚನೆಯಾಗಿದೆ. ಮುಖ್ಯವಾಗಿ ಭಾವಗೀತೆ, ಕಾದಂಬರಿ, ಸಣ್ಣಕಥೆ, ಪ್ರಬಂಧ, ನಾಟಕ, ವಿಮರ್ಶೆ, ವೈಚಾರಿಕ ಬರಹಗಳನ್ನು ಗುರುತಿಸಬಹುದು.

ಅನುಭವವನ್ನು ಅಭಿವ್ಯಕ್ತಿಸಲು ಇರುವ ಮಾಧ್ಯಮಗಳಲ್ಲಿ ಸಾಹಿತ್ಯವೂ ಒಂದು. ತನ್ನ ಕಲ್ಪನೆ, ದುಃಖ ದುಮ್ಮಾನ, ಆತಂಕ, ತಲ್ಲಣಗಳನ್ನು ಈ ಮೂಲಕ ಲೋಕಾರ್ಪಣೆ ಮಾಡುವರು. ಆದರೆ ಎಲ್ಲರಿಗೂ ಕವಿತೆ ಕಟ್ಟಲು ಆಗದಿರಬಹುದು, ಆದರಿಂದಲೇ ಗದ್ಯ ಪ್ರಕಾರವಾದ ಕಥೆ, ಕಾದಂಬರಿಗಳನ್ನು ರಚಿಸಿ ತಮ್ಮ ಅಮೂರ್ತ ಅನುಭವಗಳಿಗೆ ಮೂರ್ತರೂಪವನ್ನು ನೀಡಿದರು. ಸಮಾಜ ಬೋಧೆ, ಸಮಾಜ ತಿದ್ದುವ, ಶೋಷಣೆ ವಿರುದ್ಧ ದನಿ ಎತ್ತುವ ಕಾರ್ಯಗಳಾದವು. ಕನ್ನಡದ ಆಧುನಿಕ ಬರಹಗಾರರ ಕೊಡುಗೆ ಈ ನಿಟ್ಟಿನಲ್ಲಿ ಬಹುದೊಡ್ಡದಾಗಿದೆ. ಈ ಸಾಲಿನಲ್ಲಿ ಅನೇಕರು ಅಲಕ್ಷಿತ ಬರಹಗಾರರೂ ಇದ್ದಾರೆ. ಅಂತಹ ಗುಂಪಿಗೆ ಸೇರಿದವರು ಶಿವಳ್ಳಿ ಕೆಂಪೇಗೌಡರು.

ಶ್ರೀಮಂತ ಸಾಹಿತ್ಯ ಪರಂಪರೆಯನ್ನು ಮಂಡ್ಯ ಜಿಲ್ಲೆ ಹೊಂದಿದೆ. ಶ್ರೀಕಂಠೇಶಗೌಡರು, ಬಿ.ಎಂ.ಶ್ರೀ, ತ್ರಿವೇಣಿ, ಪುತಿನ, ಬೆಸಗರಹಳ್ಳಿರಾಮಣ್ಣ, ಕೆ.ಎಸ್.ನ, ಸು.ಜ.ನಾರಾಯಣಶೆಟ್ಟರು, ಎ.ಎನ್.ಮೂರ್ತಿರಾಯರು, ಕರೀಮುದ್ದೀನ್, ಹೆಚ್.ಎಲ್.ನಾಗೇಗೌಡರು, ನಾಗತಿಹಳ್ಳಿ ಚಂದ್ರಶೇಖರ ಪ್ರಮುಖರು ಈ ಸಾಲಿನಲ್ಲಿ ಗುರುತಿಸ ಬಹುದಾದ ಸಾಹಿತಿ ಶಿವಳ್ಳಿ ಕೆಂಪೇಗೌಡರು. ದಲಿತರ, ಶೋಷಿತರ, ರೈತರ ಸ್ತ್ರೀ ಪರ ಕಾಳಜಿಯ ಇವರ ಬರಹಗಳು ಅಲಕ್ಷಿತವಾಗಿರುವುದು ದುಃಖಕರ ಸಂಗತಿ. ಇಂತಹ ಅಲಕ್ಷಿತ, ದಲಿತ ಸಂವೇದನೆಯುಳ್ಳ ದಲಿತೇತರ ಬರಹ ಗಾರರ ಸಾಹಿತ್ಯ ಸಂಪತ್ತನ್ನು ನಾಡಿಗೆ ಪರಿಚಯಿಸುವುದು ಮತ್ತು ಅಲ್ಲಿ ಅಡಕವಾಗಿರುವ ಸಂದೇಶಗಳನ್ನು, ಒಳತೋಟಗಳನ್ನು ವಿಶ್ಲೇಷಿಸುವುದು ಈ ಕಿರು ಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಬದುಕು ಮತ್ತು ಸಾಹಿತ್ಯ ಅವಿನಾಭಾವ ಸಂಬಂಧಗಳನ್ನು ಹೊಂದಿದೆ. ಆದ್ದರಿಂದಲೇ 'ಸಾಹಿತ್ಯ ಬದುಕಿನ ಪ್ರತಿಬಿಂಬ' ಎನ್ನುವ ಮಾತಿದೆ. ಮಾತ್ರವಲ್ಲದೆ 'ಸಾಹಿತ್ಯ ಬದುಕಿನ ಗತಿಬಿಂಬ' ಎಂದಿದ್ದಾರೆ ಜಿ.ಎಸ್.ಶಿವರುದ್ರಪ್ಪನವರು. ಈ ಮಾತುಗಳು ಇಂದು ಸಾರ್ವತ್ರಿಕ ಮನ್ನಣೆಗಳಿಸಿವೆ. ಬದುಕನ್ನು ಅನುಭವಿಸಿ ಬರವಣಿಗೆಯ ಮೂಲಕ ಕಲಾತ್ಮಕವಾಗಿ ಅಭಿವ್ಯಕ್ತಿಸಿರುವುದು ಕೆಂಪೇಗೌಡರ ಬರಹಗಳಲ್ಲಿನ ಪ್ರಮುಖ

ಅಂಶವಾಗಿದೆ. ಹಳ್ಳಿಯಲ್ಲಿ ಹುಟ್ಟಿ ಬೆಳೆದು ರೈತನಾಗಿ ಬಾಳಿ, ಸಾಲಿಗನಾಗಿ ನೊಂದು, ಶೋಷಿತನಾಗಿ, ರೈತಕಾಳಜಿ, ದಲಿತ ಕಾಳಜಿ ಮತ್ತು ಪ್ರಭುತ್ವ ವಿರೋಧಿ ನೆಲೆಯಲ್ಲಿ ಇವರ ಸಾಹಿತ್ಯ ನಿಂತಿವೆ. ಇವರು ಮೂರು ಕಥಾ ಸಂಕಲನವನ್ನು ಒಳಗೊಂಡಂತೆ ೩೪ ಭಾವಗೀತೆಗಳನ್ನು ರಚಿಸಿದ್ದಾರೆ. ಇವುಗಳು ನಾಡಿನ ಹಿರಿಯ ಬರಹಗಾರರಿಂದ, ಪತ್ರಿಕೆಗಳಿಂದ ಮೆಚ್ಚುಗೆ ಪಡೆದಿವೆ ಮತ್ತು ಬಹುಮಾನಗಳಿಗೆ ಭಾಜನವಾಗಿವೆ ಇವುಗಳನ್ನು ವಿಶ್ಲೇಷಿಸುವುದು ಇಲ್ಲಿನ ಉದ್ದೇಶವಾಗಿದೆ.

'ಹತಭಾಗಿನಿ ತಂಗಿಗೆ', 'ಬೆನ್ನುಮೂಳೆಯ ಹಾಡು'. 'ರೈತಗೀತೆ,' 'ಕೃಷಿಕ ಭಾರತ' ಹಾಗೂ 'ನಟ ಸಾರ್ವಭೌಮ' ಇವರ ಕವನ ಸಂಕಲನಗಳು. ಒಟ್ಟು ಮೂವತ್ತನಾಲ್ಕು (೩೪) ಕವನಗಳಿವೆ. ಈ ಕವನಗಳ ವಸ್ತು ವೈವಿಧ್ಯಮಯವಾಗಿದೆ. ಆದರೆ ಮುಖ್ಯವಾಗಿ ನಿಲ್ಲುವುದು ರೈತಪರವಾಗಿ. ಭಾರತದ ಬೆನ್ನುಮೂಳೆಯಾದ ರೈತನ ನೋವನ್ನು ಇವರು ಚಿತ್ರಿಸಿರುವ ಬಗೆ ಮಾರ್ಮಿಕವಾಗಿದೆ, ರಾಜಕಾರಣಿಗಳ ಪೊಳ್ಳು ಆಶ್ವಾಸನೆ, ವರ್ತಕರ ದರೋಡೆತನ ಮುಂತಾದ ವಸ್ತುಗಳಿಂದ ಕೂಡಿದ ಕವನಗಳಲ್ಲಿನ ಸಂದೇಶ-ಆಶಯಗಳನ್ನು ಪ್ರಸ್ತುತ ಪ್ರಬಂಧದಲ್ಲಿ ಶೋಧಿಸುವ ಪ್ರಯತ್ನವಿದೆ.

ಶಿವಳ್ಳಿ ಕೆಂಪೇಗೌಡರು ಮೂರು ಕಥಾಸಂಕಲನಗಳನ್ನು ಮಾತ್ರ ಬರೆದಿದ್ದಾರೆ. ಒಟ್ಟು ೨೨ ಕಥೆಗಳು ಕನ್ನಡ ಕಥಾಸಾಹಿತ್ಯಕ್ಕೆ ಅವರ ಕೊಡುಗೆಯಾಗಿದೆ. ಅವರು ಇಲ್ಲಿ ಮುಖ್ಯವಾಗಿ ನಿಲ್ಲುವುದು ದಲಿತ ಬರವಣಿಗೆಯ ಮೂಲಕ. ದಲಿತ ವಸ್ತುವನ್ನು ಹೊಂದಿರುವ 'ಚಮ್ಮಾವುಗೆ' ಮತ್ತು 'ನಾವು ಬರ್ತೀವಿ ನಿಲ್ಲಯ್ಯೋ' ಕಥೆಗಳು ಜನಪ್ರಿಯ ಕಥಗಳಾಗಿವೆ. ಇಂತಹ ಬರವಣಿಗೆಯನ್ನು ದಲಿತೇತರ ಬರಹಗಾರನೊಬ್ಬ ಬರದಿರುವುದು ಸಂತಸ ಹಾಗೂ ಸೋಜಿಗದ ಸಂಗತಿ. ದಲಿತ ಪಾತ್ರಗಳ ನಾಡಿಯನ್ನು ಅರಿತು ಚಿತ್ರಿಸಿರುವ ಬಗೆ ಆಕರ್ಷಕವಾಗಿದೆ. ಇವುಗಳಲ್ಲದೆ ಮನುಷ್ಯ ಮನುಷ್ಯನನ್ನೇ ವ್ಯಾಪಾರದ ಸರಕಾಗಿಸಿಕೊಳ್ಳುವ 'ಕಾಗೆ ಪುರದಲ್ಲಿ ಮೂರು ಮಕ್ಕಳ ಸಾವು'ಅತ್ಯಂತ ಜನಪ್ರಿಯ ಕಥೆಯಾಗಿದೆ. ಇವೇ ಮೊದಲಾದ ೨೨ ಕಥೆಗಳಲ್ಲಿನ ಆರ್ತನಾದವನ್ನು ಗುರುತಿಸುವುದು ಈ ಪ್ರಬಂಧದ ಉದ್ದೇಶವಾಗಿದೆ.

ಕೆಂಪೇಗೌಡರ ಬರಹವನ್ನು ಲೇಖಕನ ಹೆಸರಿಲ್ಲದಂತೆ ಪ್ರತಿಯಲ್ಲಿ ಓದಿದವರಿಗೆ ಇದೊಂದು ದಲಿತ ಬರಹಗಾರನ ನಿರ್ಮಿತಿ ಎಂದು ತೀರ್ಮಾನಿಸಿದರೆ ಆಶ್ಚರ್ಯವಿಲ್ಲ. ಆ ಮಟ್ಟಿಗೆ ಶಿವಳ್ಳಿಯವರ ಬರಹವಲ್ಲಿ ದಲಿತ ಸಂವೇದನೆಯನ್ನು ಕಾಣಬಹುದು. ಹೆಸರಿಸಬಹುದಾದ ಕಥೆಗಳು 'ದೀವಳಿಗೆ', 'ಚಮ್ಮಾವುಗೆ'. 'ನಾವು ಬರ್ತೀವಿ ನಿಲ್ಲಯ್ಯೋ' ಕಥೆಗಳು.

ಶಿವಳ್ಳಿಯವರ ಭಾಷಾ ಪ್ರಯೋಗದಲ್ಲಿ ಮಂಡ್ಯದ ಸೊಗಡು ಎದ್ದು ಕಾಣುತ್ತದೆ. ಈ ಜಿಲ್ಲೆಯ ಜನರ ಭಾಷಾ ಬಳಕೆಯ ಬಳುಕುಗಳು ಇಲ್ಲಿ ವಿಶ್ವರೂಪಿಯಾಗಿದೆ. ಈ ಮೂಲಕ ಮಂಡ್ಯ ಜಿಲ್ಲೆಯ ಮತ್ತೊಬ್ಬ ಬರಹಗಾರರಾದ ಬೆಸಗರಹಳ್ಳಿ ರಾಮಣ್ಣ ನವರೊಂದಿಗೆ ಮುಖಾಮುಖಿಯಾಗುತ್ತಾರೆ. ಅಲ್ಲದೆ ರಾಮಣ್ಣ ನವರಿಗಿಂತ ಮಂಡ್ಯದ ಸೊಗಡನ್ನು ಕಂಪಿಸುವಲ್ಲಿ ಒಂದು ಹೆಜ್ಜೆ ಶಿವಳ್ಳಿಯವರೇ ಮುಂದಿದ್ದಾರೆ. ಈ ಅಂಶಗಳನ್ನು ಈ ಅಧ್ಯಯನದಲ್ಲಿ ತೊಡಗಿಸಿಕೊಳ್ಳಲಾಗಿದೆ.

೧.೨ ವ್ಯಾಪ್ತಿ

ಕೆಂಪೇಗೌಡರು ಕವನಗಳು. ಕಥೆಗಳನ್ನು ಬರೆಯುವುದರೊಂದಿಗೆ ಇನ್ನಿತರ ಸಾಹಿತಿಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ನನ್ನ ಅಧ್ಯಯನದ ಪ್ರಧಾನ ಆಶಯಗಳಲ್ಲಿ ಅವರ ಕವಿತೆಗಳು ಮತ್ತು ಕಥಾ ಸಾಹಿತ್ಯದ ಕಡೆ ಹೆಚ್ಚು ಗಮನ ಹರಿಸುವುದು ಈ ಸಂಶೋಧನೆಯ ವ್ಯಾಪ್ತಿಯನ್ನು ಪ್ರಸ್ತಿಸುವ ಅಂಶವಾಗಿದೆ. ಶಿವಳ್ಳಿಯವರು ಪತ್ರಿಕಾ ರಂಗದಲ್ಲೂ ದುಡಿದಿದ್ದಾರೆ. 'ರೈತರಜ್ಯೋತಿ' ಎಂಬ ಮಾಸ ಪತ್ರಿಕೆಯನ್ನು ಹೊರತಂದು ಹತ್ತಾರು ವರ್ಷ ಪ್ರತಿಕೋದ್ಯಮದಲ್ಲಿ ದುಡಿದಿದ್ದಾರೆ. ಇದಲ್ಲದೆ 'ಗ್ರಾಮ ಬೆಳಕು' ಸಾಂಸ್ಕೃತಿಕ ವೇದಿಕೆಯನ್ನು ಸ್ಥಾಪಿಸಿ ಗ್ರಾಮಾಂತರ ಪ್ರದೇಶದಲ್ಲಿ ಹತ್ತು ಹಲವು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಅನುಭವಿಗಳು.

ಅವರ ಬದುಕನ್ನು ಪರಿಚಯಿಸುವ ಎರಡನೇ ಅಧ್ಯಾಯನದಲ್ಲಿ ಅವರ 'ಬದುಕು' ಕುರಿತ ಮಾಹಿತಿ ಗಳನ್ನು ಪ್ರಸ್ತುತ ಪಡಿಸಿದ್ದೇನೆ. ಆದರೆ ಅವರ ಪತ್ರಿಕಾ ರಂಗದ ವಿವಿಧ ಆಯಾಮಗಳ ಕುರಿತ ಚರ್ಚೆ ಮಾಡಲಾಗಿಲ್ಲ ಸಂಘಟಕರಾಗಿ, ಸಂಪಾದಕರಾಗಿ ದುಡಿದಿರುವ ಮಾಹಿತಿಗಳ ಉಲ್ಲೇಖ ಮಾತ್ರ ಪ್ರಸ್ತಾಪಿಸಿರುವುದು ಈ ಸಂಶೋಧನಾ ಪ್ರಬಂಧದ ವ್ಯಾಪ್ತಿ. ಆದರೆ ಕೆಂಪೇಗೌಡರ ಕಥೆ ಹಾಗೂ ಕವಿತೆಗಳ ಮಾರ್ಧನಿಯನ್ನು ಸೂಕ್ಷ್ಮವಾದ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅವರ ಸಾಹಿತ್ಯದ ಭಾಷೆಯನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ. ಈ ಮೂಲಕ ಅಲಕ್ಷಿತ ಸಾಹಿತಿಯನ್ನು ಗುರುತಿಸುವ ಪ್ರಯತ್ನ ಇಲ್ಲಿದೆ.

ಅಧ್ಯಾಯ – ೨

ಶಿವಳ್ಳಿ ಕೆಂಪೇಗೌಡರ ಬದುಕು ಮತ್ತು ಬರಹ

ಕೆಂಪೇಗೌಡರು ಹುಟ್ಟಿದ್ದು ಸಾಮಾನ್ಯ ರೈತ ಕುಟುಂಬದಲ್ಲಿ. ತಂದೆ-ತಾಯಿಗಳು ಅಲ್ಲದೆ ತನ್ನ ಸುತ್ತಲ ಪರಿಸರ ಕೃಷಿಯನ್ನೇ ಅವಲಂಬಿಸಿತ್ತು. ಆ ಕಾಲಕ್ಕೆ ಅಕ್ಷರದ ಮಹತ್ವದ ಅರಿವು ಜನರಿಗೆ ಇನ್ನೂ ಸರಿಯಾಗಿ ಉಂಟಾಗಿರಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದು ಕೇವಲ ಎರಡು ವರ್ಷವಾಗಿದ್ದಾಗ ಶಿವಳ್ಳಿಯವರು ಜನಿಸಿದರು. ದಿನಾಂಕ ೧೨-೧೨-೧೯೪೯ರಂದು ಮಂಡ್ಯ ನಗರದಿಂದ ಸುಮಾರು ೧೨ ಕಿ.ಮೀ ದೂರದಲ್ಲಿರುವ ಶಿವಳ್ಳಿಯಲ್ಲಿ ಸೋಮಣ್ಣ ಕೆಂಪಣ್ಣನ ಜವರಾಯಿಗೌಡ ಮತ್ತು ನಿಂಗಮ್ಮ ದಂಪತಿಗಳ ಮಗನಾಗಿ ಜನಿಸಿದರು. ಗ್ರಾಮ್ಯ ಪರಿಸರದಲ್ಲೇ ಹತ್ತನೆಯ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದರು. ಅಲ್ಲಿಗೆ ಅಧಿಕೃತ ವಿದ್ಯಾಭ್ಯಾಸ ಪೂರ್ಣ ವಿರಾಮವನ್ನು ಪಡೆಯಿತು. ಇನ್ನು ಮುಂದೆ ಬದುಕಿನ ಅಭ್ಯಾಸ . ಇದು ನಿರಂತರವಾಗಿ ಮುಂದುವರೆಯಿತು. ಕೊನೆಯ ಉಸಿರಿರುವವರೆಗೂ ಓದು, ಪತ್ರಿಕೋದ್ಯಮ. ಸಾಹಿತಿಕ, ಸಾಂಸ್ಕೃತಿಕ ಚಟುವಟಿಕೆಗಳ ಒಡನಾಟ ಮುಂದುವರೆಯಿತು.

ಮೈಸೂರು ದಿಗಂತ ಪತ್ರಿಕೆ ಕೆಂಪೇಗೌಡರನ್ನು ಕುರಿತು ಹೀಗೆ ಅಭಿಮತಿಸಿದೆ. "ಒಂದು ಹಳೇ ಸೈಕಲ್ ಏರಿ, ಒಂದು ಬಿಳಿ ಅಂಗಿ, ಪಂಚೆ, ಹೆಗಲ ಮೇಲೊಂದು ಟವಲ್ ಹಾಕಿಕೊಂಡು ಶಾಂತ ಚಿತ್ತರಾಗಿ ಓಡಾಡುವ ಶಿವಳ್ಳಿ ಕೆಂಪೇಗೌಡ ಮೇಲ್ನೋಟಕ್ಕೆ ಸಾಮಾನ್ಯ ವ್ಯಕ್ತಿ ಎನಿಸಿದರೂ ಅವರನ್ನು ಹತ್ತಿರದಿಂದ ಕಂಡಾಗ ಅವರೊಬ್ಬರು ಕೃಷಿಕರು. ಶ್ರಮಿಕರು. ಕೂಲಿಕಾರರು. ಬಡವರ ಬಗ್ಗೆ ಒಲವಿರಿಸಿಕೊಂಡಿರುವ ಚಿಂತಕ. ಗ್ರಾಮೀಣ ಸೊಗಡಿನ ಅಪರೂಪದ ಲೇಖಕ ಎಂಬುದು ಅರಿವಾಗುತ್ತದೆ. ವಾಸ್ತವಿಕತೆಯನ್ನು ಮೈಗೂಡಿಸಿಕೊಂಡು ಎಲ್ಲರಲ್ಲಿ ಒಂದಾಗಿ, ಸ್ವಂತಿಕೆಯನ್ನು ಉಳಿಸಿಕೊಂಡು ಸದಾ ಮೌನಿಯಾಗಿ ನಡೆದಾಡುವ ಸೃಜನಶೀಲ ಬರಹಗಾರರು ಶಿವಳ್ಳಿ ಕೆಂಪೇಗೌಡರು."[೧] ಎಂಬ ಮಾತು ಗೌಡರ ಬಾಹ್ಯ ಹಾಗೂ ಆಂತರಿಕ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ.

ಶಿವಳ್ಳಿ ಕೆಂಪೇಗೌಡರ ಶಾಲೆಯ ಓದು ಕಡಿಮೆ. ವೃತ್ತಿಯಾಗಿ ಕೃಷಿಯನ್ನೆ ಅವಲಂಬಿಸಿದರು. ಆದರೆ ಪ್ರವೃತ್ತಿಯಲ್ಲಿ ಬರಹಗಾರರಾಗಿ ಪ್ರಸಿದ್ಧರಾದರು. ಅವರ ಮಾತಿನಲ್ಲೇ ಹೇಳುವುದಾದರೆ "ಹಳ್ಳಿಗಾಡಿನಲ್ಲಿ ಹುಟ್ಟಿ ಬೆಳೆದು ಅಲ್ಲಿಯೇ ನರಳುತ್ತಾ ಹೇಗೋ ಶಿಲ ದಾಟಿ ಭಾರವಾದ ಹೆಜ್ಜೆ ಹಾಕುತ್ತಿರುವ ನನಗೆ ಸಾಹಿತ್ಯದ ಗೀಳು ಚಿಕ್ಕಂದಿನಲ್ಲೇ ಅಂಟಿಕೊಂಡಿತು. ಗ್ರಾಮೀಣ ಪರಿಸರದ ನೋವು. ನರಳಿಕೆ ಸಂಕಟ ಹೆಜ್ಜೆ ಹೆಜ್ಜೆಗೂ ಕಾಡುತ್ತಾ ವ್ಯವಸ್ಥೆಯ ಕೂಳಮುಖ ಅಷ್ಟಿಷ್ಟು ಪರಿಚಯವಾಗುತ್ತಾ ಹೋದಂತೆ ಸಾಮುದಾಯಿಕ ಹಿತ ಚಿಂತನೆ ನಡೆಸಿದ್ದರ ಫಸಲೇ ಇಲ್ಲಿನ ಕವಿತೆಗಳು. ಇವು ಖಂಡಿತ ಹಠಕ್ಕೆ ಬಿದ್ದು ಬರೆದ ಕವಿತೆಗಳಲ್ಲ. ಇಲ್ಲಿನ ಕೆಲವು ಕವಿತೆಗಳ ಅರ್ತಧ್ವನಿ ಸಹೃದಯಿಗಳಿಗೆ ಕೇಳಿಸುತ್ತದೆಂದು ನನ್ನ ಭಾವನೆ."[೨] (ಬೆನ್ನು ಮೂಳೆಯ ಹಾಡು – ಮೊದಲ ಮಾತು ೨೦೦೭) ಇದು ಕೆಂಪೇಗೌಡರು ತಮ್ಮ ಬದುಕು ಬರವಣಿಗೆಯನ್ನು ಕುರಿತು ಹೇಳಿರುವ ಮಾತು. ಅತ್ಯಂತ ಸಮರ್ಪಕ ಸತ್ಯವಿದು. ಹೆಸರಿಗಾಗಿ, ಹಣಕ್ಕಾಗಿ, ಬಲವಂತವಾಗಿ ಬರೆದವರಲ್ಲ. ತಾನು ನೋಡಿದ. ಅನುಭವಿಸಿದ ಘಟನೆಗಳನ್ನು, ವಸ್ತುಗಳನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ.

ಕೆಂಪೇಗೌಡರ ಕೃಷಿ ಮತ್ತು ಸಾಹಿತ್ಯ ಕೃಷಿಗಳು ಜೊತೆಜೊತೆಗೆ ಸಾಗಿದವು. ಶಿವಳ್ಳಿಯವರು ರಚಿಸಿದ ಕಥಾ ಸಂಕಲನಗಳು

೧. ಕಾಗೇಪುರದಲ್ಲಿ ಮೂರು ಮಕ್ಕಳ ಸಾವು,

೨. ಚಮ್ಮಾವುಗೆ

೩. ಸ್ವಾಗತ

'ಗೋಧೂಳಿ' ಎಂಬ ಚುಟುಕು ಸಾಹಿತ್ಯ ರಚನೆಯನ್ನು ಮಾಡಿದ್ದಾರೆ. ಇವರ ಕವನ ಸಂಕಲನಗಳು,

೧. ಹತಭಾಗಿನಿ ತಂಗಿಗೆ.

೨. ಜೆನ್ನುಮೂಳೆಯ ಹಾಡು

೩. ರೈತಗೀತೆ

೪. ಕೃಷಿಕ ಭಾರತ

೫. ನಟಸಾರ್ವಭೌಮ

ಇವುಗಳಲ್ಲದೆ 'ಮಂಡ್ಯಜಿಲ್ಲೆಯ ಲೇಖಕರ ಪರಿಚಯ'ದ ಕೃತಿಯೊಂದನ್ನು ಹೊರತಂದಿದ್ದಾರೆ. 'ಸೂಲಂಗಿ' ಎಂಬ ಕಥಾಸಂಕಲನದ ಸಂಪಾದಕರಾಗಿದ್ದಾರೆ. ಬೆಸಗರಹಳ್ಳಿ ರಾಮಣ್ಣನವರನ್ನು ಕುರಿತ ಜೀವನ ಚರಿತ್ರೆಯನ್ನು ರಚಿಸಿದ್ದಾರೆ. 'ಒಕ್ಕಲಿಗರ ಬದುಕುಬವಣೆ'. 'ಕಥಾಕಾರಂಜಿ' ಗೌಡರ ಕೃತಿಗಳು. ೨೨ ಇವರ ಸಮಗ್ರ ಕಥೆಗಳ ಸಂಖ್ಯೆ. ೩೪ ಇವರ ಸಮಗ್ರ ಕವಿತೆಗಳು. ಮಂಡ್ಯ ಜಿಲ್ಲೆಯ ಸಾಹಿತ್ಯ ಕ್ಷೇತ್ರದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದ್ದಾರೆ. 'ರೈತರ ಜ್ಯೋತಿ' ಮಾಸ ಪತ್ರಿಕೆಯನ್ನು ಹೊರತಂದು ಹತ್ತಾರು ವರ್ಷಗಳ ಕಾಲ ಪತ್ರಿಕೋದ್ಯಮದಲ್ಲಿ ದುಡಿದು ವರದಿಗಾರರಾಗಿ ಸೇವೆಸಲ್ಲಿಸಿ ಆ ಕ್ಷೇತ್ರದಲ್ಲೂ ಹೆಸರು ಮಾಡಿದ್ದಾರೆ. "ಗ್ರಾಮ ಬೆಳಕು" ಸಾಂಸ್ಕೃತಿಕ ವೇದಿಕೆಯನ್ನು ಸ್ಥಾಪಿಸಿ ಗ್ರಾಮಾಂತರ ಪ್ರದೇಶದಲ್ಲಿ ಹತ್ತು ಹಲವು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಸಂಘಟನಾ ಕ್ಷೇತ್ರದಲ್ಲೂ ದುಡಿದಿದ್ದಾರೆ.

೧೯೯೪ರಲ್ಲಿ ಮಂಡ್ಯದಲ್ಲಿ ನಡೆದ ೬೩ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಹಾಗೂ ೧೯೯೫ರಲ್ಲಿ ಮೈಸೂರು ದಸರಾ ಕವಿ ಸಮ್ಮೇಳನ ಅಲ್ಲದೆ ಹತ್ತು ಹಲವು ಕವಿಗೋಷ್ಠಿಗಳಲ್ಲಿ ಪಾಲ್ಗೊಂಡು ತಮ್ಮ ಕವನಗಳನ್ನು ವಾಚಿಸಿದ್ದಾರೆ.

ಬೆಂಗಳೂರಿನ ಕಲಾವೇದಿಕೆ ೨೦೦೨ರಲ್ಲಿ ಏರ್ಪಡಿಸಿದ್ದ ಕಥಾ ಸ್ಪರ್ಧೆಯಲ್ಲಿ ಇವರ 'ಕುಹೂ... ಕುಹೂ...' ಕಥೆಗೆ ತೃತೀಯ ಬಹುಮಾನ ಲಭಿಸಿದೆ. ಇವರ 'ಚಮ್ಮಾವುಗೆ' ಕಥಾಸಂಕಲನದ 'ನಾವು ಬತ್ತೀವಿ ನಿಲ್ಸಯ್ಯೋ' ಎಂಬ ಕಥೆ ಮರಾಠಿ ಭಾಷೆಗೆ ಅನುವಾದಗೊಂಡು ಸಾಧನಾ ಪತ್ರಿಕೆಯ ಅಂತರ ಭಾರತಿ ಕಥಾ ವಿಶೇಷಾಂಕದಲ್ಲಿ ಪ್ರಕಟವಾಗಿದೆ. ಇದೇ ಕಥೆ ಪ್ರಸ್ತುತ ಮಂಡ್ಯದ ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ) ಪದವಿ ತರಗತಿಯಲ್ಲಿ ಪಠ್ಯವಾಗಿದೆ. ಇದು ಗೌಡರ ಪ್ರತಿಭೆಯನ್ನು ಎತ್ತಿ ತೋರಿಸುತ್ತದೆ.ಅಲ್ಲದೆ ಚಮ್ಮಾವುಗೆ ಕಥಾಸಂಕಲನ ಕುರಿತು ಮೈಸೂರು ಮಾನಸ ಗಂಗೋತ್ರಿಯ ವಿಚಾರ ಗೋಷ್ಠಿಯಲ್ಲಿ ಖ್ಯಾತ ಸಾಹಿತಿ ದೇವನೂರು ಮಹಾದೇವು ರವರು ಪ್ರಬಂಧ ಮಂಡಿಸಿದ್ದಾರೆ. ಇವರ 'ಜೆನ್ನುಮೂಳೆಯ ಹಾಡು' ಕೃತಿಯನ್ನು ನಾಡಿನ ಪ್ರಸಿದ್ಧ ಪತ್ರಿಕೆಗಳು ಮುಕ್ತಕಂಠದಿಂದ ಪ್ರಶಂಸಿಸಿವೆ. ಗ್ರಾಮೀಣ ಕಥಾಕೋಶ ಎನಿಸಿಕೊಂಡಿರುವ

ಶಿವಳ್ಳಿ ಕೆಂಪೇಗೌಡರು ತಮ್ಮ ಮುರುಕಲು ಸೈಕಲ್‌ನಲ್ಲಿ ಹತ್ತಾರು ಕಿಲೋಮೀಟರ್ ದೂರಹೋಗಿ 'ಮಂಡ್ಯ ಜಿಲ್ಲೆಯ ರಮ್ಯತಾಣಗಳು ಹಾಗೂ ಆಯ್ದ ಗ್ರಾಮಗಳ ಇತಿಹಾಸ'ವನ್ನು ರಚಿಸಿದ್ದಾರೆ. ಅಂತರ ರಾಷ್ಟ್ರೀಯ ಖ್ಯಾತಿಯ ನಾಟಕ ನಿರ್ದೇಶಕ ಸಿಜಿಕೆ ಹೇಳುವಂತೆ "ಕೆಂಪೇಗೌಡರು ಅಪರೂಪದ ಗ್ರಾಮೀಣ ನೋವುಂಡ ಲೇಖಕರು."[೫] ಅವರ ಬರಹ ನಿತ್ಯ ಸ್ಮರಣೀಯ. ೨೦೦೨ರಲ್ಲಿ ಮಂಡ್ಯ ನಗರದಲ್ಲಿ ನಡೆದ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಜವಾಬ್ದಾರಿ ನಿರ್ವಹಿಸಿದ್ದಾರೆ.

ಶಿವಳ್ಳಿಯವರು ಬಡತನದಲ್ಲಿಯೇ ಬದುಕನ್ನು ಸವೆಸಿದರು. ಅವರೇ ಹೇಳುವಂತೆ ಅವರನ್ನು ಇಷ್ಟುಕಾಲ ಬದುಕಿಸಿದ್ದು ಸಾಹಿತ್ಯ. "ಹಳ್ಳಿಯ ಹುಡುಗನಾಗಿ ಹುಟ್ಟಿ ಬೆಳೆದು ಎಂದೂ ನಗರ ಸಂಸ್ಕೃತಿಗೆ ತನ್ನನ್ನು ಒಡ್ಡಿಕೊಳ್ಳದ ಗೌಡರು ಸದಾ ಹಳ್ಳಿಗನಂತೆ ಉಡುಪು ಧರಿಸುತ್ತಿದ್ದರು. ಗ್ರಾಮೀಣ ಬದುಕಿನ ವೈರುಧ್ಯಗಳ ಬಗೆಗೆ ಚಿಂತಿಸುತ್ತಿದ್ದರು. ಎಲ್ಲರ ಜೊತೆಯಲ್ಲಿ ಬೆರೆಯುತ್ತಿದ್ದರೂ ಅಧಿಕ ಸಮಯ ಮೌನಿಯಾಗಿರುತ್ತಿದ್ದರು. ಅವರ ಸಾಹಿತ್ಯವನ್ನು ವಿದ್ವತ್‌ವಲಯ ಮೆಚ್ಚಿತ್ತು, ಆದರೆ ಆರ್ಥಿಕವಾಗಿ ಅವರಿಗೆ ಅದು ಎಂದೂ ನೆರವಾಗಲಿಲ್ಲ"[೬] ಎನ್ನುತ್ತಾರೆ ಡಾ.ಕೆ.ಪುಟ್ಟಸ್ವಾಮಿಯವರು.

ತಮ್ಮ ಸಾಹಿತ್ಯ ರಚನೆಗೆ ಹಲವಾರು ಬಹುಮಾನಗಳನ್ನು ಪಡೆದಿರುವ ಶಿವಳ್ಳಿಯವರು ೨೭-೧೦-೨೦೧೦ರಲ್ಲಿ ಅನಿರೀಕ್ಷಿತವಾಗಿ ಸಾವನ್ನಪ್ಪಿದರು. ಅವರಿಗೆ ಅಪಾರವಾದ ಲೋಕಾನುಭವವಿತ್ತು. ಕಥೆಯನ್ನು ಹೇಳುವ ಕೌಶಲ ಸಿದ್ಧಿಸಿತ್ತು. ಇನ್ನು ಹೆಚ್ಚು ಮೌಲಿಕ ಕೃತಿಗಳನ್ನು ಅವರಿಗ ನೀಡುವುದು ಸಾಧ್ಯವಿತ್ತು ಆದರೆ ಬದುಕಿನಲ್ಲಿ ನಿರಾಶೆಯನ್ನ ಉಂಡ ಅವರು ಇಹಲೋಕದ ವ್ಯಾಪಾರ ಮುಗಿಸಿದರು.

ಕೆಂಪೇಗೌಡರ ಭಾಷಾ ಬಳಕೆಯು ವಿಭಿನ್ನವಾಗಿದೆ. ಸನ್ನಿವೇಶಗಳನ್ನು ಭಾವಗಳನ್ನು ಧುಮ್ಮಿಕ್ಕುವ ಜಲಧಾರೆಯಂತೆ ನಿಕಟವಾಗಿ ಪೋಣಿಸಿ ಕಥೆಯನ್ನು ಹೆಣೆಯುವ ವಿಧಾನ ವಿಶಿಷ್ಟವಾಗಿ ಕಾಣುತ್ತದೆ. ಓದುಗ ಹೆಕ್ಕತ್ತನ್ನ ಹಿಡಿದ ವಿದ್ದ, ದೃಶ್ಯಗಳ ಜೊತೆಗೆ ಮಾತುಗಳನ್ನು ರಾಚುತ್ತಾರೆ. ಪ್ರಜ್ಞಾಪ್ರವಾಹ ತಂತ್ರಕ್ಕೆ ಮಾದರಿಯೆನ್ನುವ ರೀತಿಯಲ್ಲಿ ಅನೇಕ ಸಂಗತಿಗಳನ್ನು ಒಟ್ಟಿಗೆ ನಿರೂಪಿಸುವ ಅವರ ಕ್ರಮ ಅನುಪಮವಾದುದ್ದು. ಅವರ ಸಣ್ಣ ಕಥೆಗಳು ಇಂಥ ತಂತ್ರಕ್ಕೆ ಸಾಕಷ್ಟು ಅವಕಾಶ ಕಲ್ಪಿಸಿವೆ. ಅವರ ಕಥೆಗಳಿಂದಲೇ ಇದಕ್ಕೆ ಹಲವಾರು ದೃಷ್ಟಾಂತಗಳನ್ನು ನೀಡಬಹುದು. ಒಂದು ಉದಾಹರಣೆಯೆಂದರೆ[೭] "ಗುರುವಾರ ಸಂತೆ. ರಸ್ತೆಯ ತುಂಬ ಗಿಜಿಗಿಜಿ ಜನ, ಯಾರ ಮುಖದ ಮೇಲೂ ಗೆಲುವಿಲ್ಲ. ಎಲ್ಲರೂ ಮೈಮುಖ ಗುದ್ದಿಸಿಕೊಂಡ ಹಾಗೆ, ಏನೋ ಆತುರ, ದಾಪುಗಾಲು, ಒಬ್ಬರ ನೆರಳು ತುಳಿದು ಮತ್ತೊಬ್ಬರು ನಡೆಯುತ್ತಾರೆ. ಯಾರೂ ಸಾಯುವುದಿಲ್ಲ. ರಸ್ತೆಯ ಪಕ್ಕದಲ್ಲಿ ಶನಿದೇವರ ನಾಲ್ಕು ಚಕ್ರದ ಸೈಕಲ್ ವಾಹನ ರಥಾರೂಢನಾದ ಶನಿ. ರಥ ಎಳೆಯಲು ಕಟ್ಟಿದ ಕಾಗೆ. ಪಕ್ಕದಲ್ಲಿ ಕೈಕಾಲು ಕತ್ತರಿಸಿ ರಕ್ತ ಸೋರುತ್ತಿರುವ ವಿಕ್ರಮಾರ್ಕರಾಯ. ಮುಂದಿರುವ ಮಂಗಳಾರತಿ ತಟ್ಟೆಗೆ ಕಾಸುಹಾಕಿ ಶನಿದೇವರ ಗುಡ್ಡನ ಕೈಯಲ್ಲಿ ಭಯಬಕ್ತಿಯಿಂದ ಕುಂಕುಮ ಹಚ್ಚಿಸಿಕೊಳ್ಳುತ್ತಿರುವ ಹಳ್ಳಿ ಹೆಂಗಸರು, ಗಂಡಸರು, ಆಗಾಗ್ಗೆ ಗುಡ್ಡನ ಬಾಯಿಂದ "ಶನಿದೇವರ ಪಾದಕ್ಕೆ ಗೋವಿಂದಾ..... ಗೋವಿಂದಾ....! ಉದ್ಗಾರ. ಒಬ್ಬ ಮನುಷ್ಯ ದೇವರ ಪೋಜಾರಿಯೋ ಗುಡ್ಡನೋ ಏಕಾಗುತ್ತಾನೆ. ಬೇರೆ ರೀತಿಯಲ್ಲಿ ದುಡಿದು ಬದುಕುವ ಮಾರ್ಗ ಅವನಿಗಿಷ್ಟವಿಲ್ಲವೇ? ಜನರಿಗೆ ಕಾಣದ ದೇವರ ಬಗ್ಗೆ ಇರುವ ಭಕ್ತಿ ಭಾವನೆಯನ್ನು ಬಂಡವಾಳ ಮಾಡಿಕೊಂಡು ಬದುಕುವ ಸುಲಭೋಪಯವೇ?

ದೇವರು ನಿಜವಾಗಿಯೂ ಇದ್ದಾನೆಯೇ? ಧರ್ಮಗುರುಗಳು ಹೇಳುವ ಹಾಗೆ ಎಲ್ಲರೂ ದೇವರ ಮಕ್ಕಳು ಎಂದಾದರೆ ಈ ಮೇಲು-ಕೀಳು ತಾರತಮ್ಯವೇಕೆ? ಬಡವ-ಬಲ್ಲಿದ ಅಂತರವೇಕೆ? ಏನು ಮಣ್ಣೋ ಒಂದು ಅರ್ಥವಾಗುವುದಿಲ್ಲ. ಈ ಜನಜಂಗುಳಿಯ ನಡುವೆ ಸರ್ಕಸ್ ಮಾಡುತ್ತಾ ಯಾರಿಗಾದರೂ ಸೈಕಲ್‌ನಲ್ಲಿ ಗುದ್ದಿದರೆ ಅನ್ನಿಸಿಕೊಳ್ಳುವುದು ಅನ್ನುವುದರಲ್ಲಿ ಅರ್ಥವಿಲ್ಲ ಎನ್ನಿಸುತ್ತದೆ. ಸೈಕಲ್ ಇಳಿದೇ ನಡೆಯುತ್ತೇನೆ"[೫]
(ಅವನು ಮತ್ತು ನಾನು ಮತ್ತು.......)

ಹೀಗೆ ಒಂದೇ ಸಮನೆ ಹತ್ತಾರು ಚಿತ್ರ ಮತ್ತು ನೂರಾರು ಭಾವವನ್ನು ಉದ್ದೀಪಿಸುವ ನಿರೂಪಣೆ ಶಿವಳ್ಳಿ ಕೆಂಪೇಗೌಡರಿಗೆ ದಕ್ಕಿದೆ. ಜೊತೆಗೆ ಅವರು ಮಂಡ್ಯದ ನೆಲದ ಭಾಷೆಯಲ್ಲಿ ಕಥನ ಕಟ್ಟುವ ರೀತಿ ಡಾ.ಬೆಸಗರಹಳ್ಳಿ ರಾಮಣ್ಣನವರ ಕಥನ ಕ್ರಮವನ್ನು ನೆನಪಿಸುತ್ತದೆ.

"ಗದ್ಯದಲ್ಲಿ ಕುರಿತು ಹಾಡಿದ ನೋವು ಅವಮಾನಗಳನ್ನು ಅವರು ಪದ್ಯದಲ್ಲಿ ಮಲುಕು ಹಾಕಿದ್ದಾರೆ. ತಮ್ಮ ಕವನಗಳಲ್ಲಿ ಅವರು ಗ್ರಾಮೀಣ ಬದುಕನ್ನು, ವಿಶೇಷವಾಗಿ ರೈತಾಪಿ ಜನರ ಮತ್ತು ಬೇಸಾಯದ ಬದುಕಿನ ಅವನತಿಯ ಬಗೆಗಿನ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಅವರ ನೋವುಗಳೇ ಸಮುದಾಯದ ಹಾಡುಗಳಾಗಿ ಅಭಿವ್ಯಕ್ತಿ ಪಡೆದಿವೆ."[೬] ಎಂದು ಡಾ.ಪುಟ್ಟಸ್ವಾಮಿ ರವರು ಅಭಿಪ್ರಾಯ ಪಟ್ಟಿದ್ದಾರೆ.

ಶಿವಳ್ಳಿ ಕೆಂಪೇಗೌಡರು ಹೇಗೆ ಎಲೆಮರ ಕಾಯಿಯಂತಾದರೋ ಅವರ ಸಾಹಿತ್ಯವೂ ಅಂತೆಯೇ ಆಯಿತು. ಅವರ ಸಾಹಿತ್ಯ ಕೃತಿಗಳು ಹೆಚ್ಚು ಚರ್ಚೆಗೆ ಒಳಗಾಗಲಿಲ್ಲ. ವಿಶೇಷವಾಗಿ ರೈತರ. ದಲಿತರ ಪರವಾಗಿ ಸಾಹಿತ್ಯವನ್ನು ರಚಿಸಿದ್ದಾರೆ. ದಲಿತ ಮತ್ತು ಬಂಡಾಯದ ನೆಲೆಯ ಸಾಹಿತ್ಯ ರಚಿಸಿದ ದಲಿತೇತರ ಬರಹಗಾರರು ಕೆಂಪೇಗೌಡರು. ವ್ಯವಸ್ಥೆ ಬಗೆಗಿನ ಸಿಟ್ಟು, ಆಕ್ರೋಶಗಳನ್ನು ಬರವಣಿಗೆಯ ಮೂಲಕ ವ್ಯಕ್ತ ಪಡಿಸಿದ್ದಾರೆ.

೨.೧ ಕೆಂಪೇಗೌಡರಿಗೆ ಸಂದ ಗೌರವಗಳು

ಕಾಡುಮಲ್ಲಿಗೆಯಾದ ಶಿವಳ್ಳಿಯವರ ಸಾಹಿತ್ಯ ರಾಷ್ಟ್ರ. ರಾಜ್ಯಮಟ್ಟದ ಪ್ರಶಸ್ತಿಗಳಿಗೆ ಭಾಜನವಾಗ ದಿದ್ದರೂ ಅನೇಕ ಹಿರಿ-ಕಿರಿಯ ಗೌರವಗಳು ಅವರಿಗೆ ಮತ್ತು ಅವರ ಸಾಹಿತ್ಯಕ್ಕೆ ಲಭಿಸಿದೆ.ಅವುಗಳೆಂದರೆ

೧. 'ನಾವು ಬತ್ತೀವಿ ನಿಲ್ಸಯ್ಯೋ' – ಕಥೆ ಮರಾಠಿ ಭಾಷೆಗೆ ಅನುವಾದವಾಗಿದೆ.

೨. 'ದೀವಳಿಗೆ' ಕಥೆಗೆ ಸಂಕ್ರಮಣ ಪತ್ರಿಕೆಯ ಕಥಾಸ್ಪರ್ದೆ(೨೦೦೪) ಪ್ರಥಮ ಬಹುಮಾನ.

೩. 'ಕುಹೂ.... ಕುಹೂ....' ಕಥೆಗೆ ಕಲಾಸಾಹಿತ್ಯ ವೇದಿಕೆ ಬೆಂಗಳೂರು (೨೦೦೨) ತೃತೀಯ ಬಹುಮಾನ.

೪. 'ಕುರುಡನೂ ಕನ್ನಡ ಬಾವುಟವೂ' ಕಥೆಗೆ ಕೀರ್ತಿ ಫಿಲಂ ಇನ್ಸ್ಟಿಟ್ಯೂಟ್ ಮೈಸೂರು(೨೦೦೦) ಇಲ್ಲಿಂದ ಸಮಾಧಾನಕರ ಬಹುಮಾನ.

೫. 'ಅಂಚೆ ಚೀಟಿ' ಕಥೆ ತೀರ್ಪುಗಾರರ ಮೆಚ್ಚುಗೆ – ಮೈಸೂರು ಮಿತ್ರ ಪತ್ರಿಕೆಯ ೨೦೦೪ರ ೨೪ನೇ ವಾರ್ಷಿಕ ಕಥಾ ಸ್ಪರ್ಧೆಯಲ್ಲಿ.

೬. ೨೦೦೨ ರ ಮಂಡ್ಯ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಗೌರವ.

೭. "ಚಮ್ಮಾವುಗೆ" ಕಥಾಸಂಕಲನ ಕುರಿತು ದೇವನೂರು ಮಹಾದೇವ ರವರು ವಿಚಾರ ಮಂಡನೆ.

೮. ೬೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ(೧೯೯೪) ಕವಿಗೋಷ್ಠಿಯಲ್ಲಿ ಭಾಗಿ.

೯. ೧೯೯೫ರ ದಸರಾ ಕವಿಗೋಷ್ಠಿಯಲ್ಲಿ ಭಾಗಿ.

೨.೨ ಕೆಂಪೇಗೌಡರ ಬರಹ ಕುರಿತು ನಾಡಿನ ವಿದ್ವಾಂಸರ ಅಭಿಪ್ರಾಯಗಳು

"ದಲಿತ ಸಾಹಿತ್ಯವನ್ನು ಬರೆಯಲು ದಲಿತರೇ ಆಗಬೇಕೆಂದಿಲ್ಲ. ಅವರ ನಾಡಿಮಿಡಿತ ಒಡನಾಟದ ಅನುಭವ ತಿಳಿದಿರುವವರು ಯಾರೇ ಬರೆಯಬಹುದು. ಇದಕ್ಕೆ ಶಿವಳ್ಳಿ ಕೆಂಪೇಗೌಡರ 'ಚಮ್ಮಾವುಗೆ' ಒಂದು ಉತ್ತಮ ನಿದರ್ಶನ."

ಡಾ॥ ಬೆಸಗರಹಳ್ಳಿ ರಾಮಣ್ಣ.

"ಮೊದಲನೆಯ ಸಂಕಲನವಾದ "ಕಾಗೇಪುರದಲ್ಲಿ ಮೂರು ಮಕ್ಕಳ ಸಾವು" ಎಂಬ ಸಂಕಲನದಲ್ಲಿ ದುಃಖವನ್ನು ಕಲಾಕೃತಿಯಾಗಿ ಮಾಡುವ ಪ್ರಯತ್ನವಿದೆ. 'ನಮ್ಮ ಕೈಯ ತೇದು ನಮ್ಮ ಬಾಯಿಗೆ ಬಿಡಬೇಕು' ಎನ್ನುವ ಸ್ಥಿತಿಯ ಜೀವನವಿದೆ. ಈ ಭಾವನೆಗಳು ಅತ್ಯಂತ ಸ್ಪಷ್ಟವಾಗಿ ಚಮ್ಮಾವುಗೆ ಸಂಕಲನದಲ್ಲಿ ಒಡಮೂಡುತ್ತವೆ". – ದೇವನೂರು ಮಹಾದೇವ

"ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ – ಅಬಚೂರಿನ ಪೋಸ್ಟಾಫೀಸು, ಮುಸ್ಸಂಜೆಯ ಕಥಾ ಪ್ರಸಂಗ, ಒಂದು ಊರಿನ ಕಥೆ, ದ್ಯಾವನೂರು, ಒಡಲಾಳ, ಒಂದು ಹುಡುಗನಿಗೆ ಬಿದ್ದ ಕನಸು, ಬೆಟ್ಟ ಸಾಲು ಮಳೆ, ಕರೀತಲೆ ಮಾನವನ ಜೀವದ, ಬೆಳ್ಳಿ ಹುತ್ತದ ಬಡಿದರೆ, ಪತ್ರೆ ಸಂಗಪ್ಪ, ಚಮ್ಮಾವುಗೆ ಮುಂತಾದ ಕೃತಿಗಳನ್ನು ಹೆಸರಿಸಬಹುದು".

ದೇವಯ್ಯ ಹರವೆ.

"ಕಾಗೇಪುರದಲ್ಲಿ ಮೂರು ಮಕ್ಕಳ ಸಾವು" ಕಥೆಯಲ್ಲಿರುವ ವ್ಯಂಗ್ಯ ಮತ್ತು ಒಟ್ಟು ಸಂಕಲನದ ಹಿಂದಿರುವ ಸಾಮಾಜಿಕ ಕಾಳಜಿ ಗಮನಾರ್ಹ"

ಬರಗೂರು ರಾಮಚಂದ್ರಪ್ಪ.

ಸಾಹಿತ್ಯ ವಾರ್ಷಿಕ, ೧೯೭೫ ಬೆಂಗಳೂರು ವಿಶ್ವವಿದ್ಯಾಲಯ.

ಮಂಡ್ಯ ಜಿಲ್ಲೆಯ ಜನ ಶ್ರಮ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬೆಳೆದು ಬಂದಿದ್ದು ಮಂಡ್ಯ ಜಿಲ್ಲೆ ಕಂಡ ಅತ್ಯುತ್ತಮ ಲೇಖಕರಾದ ಡಾ॥ ಬೆಸಗರಹಳ್ಳಿ ರಾಮಣ್ಣನವರ ಕೃತಿಗಳಲ್ಲಿ ಜನಪರ ಸಂಸ್ಕೃತಿಯ ಪ್ರತಿಬಿಂಬ ಕಂಡು ಬರುತ್ತದೆ. ಅವರ ಜೊತೆ ಜೊತೆಯಲ್ಲೇ ಬರುವ ಶಿವಳ್ಳಿ ಕೆಂಪೇಗೌಡರ ಕೃತಿಗಳು ಸಹ ಈ ಮಣ್ಣಿನ ಕಂಪನ್ನು ಸೂಸುತ್ತವೆ, ಈ ನೆಲದ ಜನರ ಬವಣೆ, ಮಾತ್ಸರ್ಯ ಅಂತರ್ಯಗಳು ಶಿವಳ್ಳಿ ಕೆಂಪೇಗೌಡರ ಲೇಖನಿಯಲ್ಲಿ ಅದ್ಭುತ ಕಥೆಗಳಾಗಿ ಹೊರಹೊಮ್ಮಿದೆ.

ಪ್ರೊ. ಶಿವರಾಮು ಕಾಡನಕುಪ್ಪೆ.

ಶ್ರೀ ಶಿವಳ್ಳಿ ಕೆಂಪೇಗೌಡರು, ಮಣ್ಣಿನ ಒಡನಾಟದಲ್ಲಿ ಬಂದಂಥ ಲೇಖಕರು, ರೈತರ ಮತ್ತು ದೀನ ದಲಿತರ ಬದುಕಿನೊಳಗೆ ಒಂದಾಗಿ ಬಾಳಿದವರು. ಅವರು ಕಷ್ಟ-ಸುಖ, ನೋವು-ನಲಿವು ಮುಂತಾದ

ವುಗಳನ್ನು ಉಂಡು ಕರುಳನ್ನು ಮೀಟಿ ಹೃದಯಾಂತರಾಳದಿಂದ ಚಿಮ್ಮಿದ ಕವನ ಸಂಕಲನ “ಬೆನ್ನು ಮೂಳೆಯ ಹಾಡು” ಅದರ ಸಾಲಿನಂತೆಯೇ ಕವನಗಳುದ್ದಕ್ಕೂ ಮಣ್ಣಿನ ಮಕ್ಕಳ ಬೆವರು ಹರಿದಿದೆ. ಶ್ರೀಯುತರ ಈ ಕವನ ಸಂಕಲನ ಭಾಷೆಯ ದೃಷ್ಟಿಯಿಂದಲೂ ಹೊಸ ಚೇತನವನ್ನು ಪುಟಿಯುತ್ತಿದೆ. ಓದುಗರ ಮನಮಿಡಿಯುತ್ತದೆ. ಇವರಿಂದ ಇನ್ನೂ ಹೆಚ್ಚಿನ ಸಾಹಿತ್ಯ ಸೃಷ್ಟಿಯಾಗಿ ಕನ್ನಡ ಸಾಹಿತ್ಯಲೋಕ ಶ್ರೀಮಂತವಾಗಲೆಂದು ಆಶಿಸುತ್ತೇನೆ.

ತೈಲೂರು ವೆಂಕಟಕೃಷ್ಣ.

ಹೀಗೆ ನಾಡಿನ ಗಣ್ಯ ಲೇಖಕರು ಶಿವಳ್ಳಿಯವರ ಬರವಣಿಗೆಯನ್ನು ಮುಕ್ತ ಕಂಠದಿಂದ ಮೆಚ್ಚಿದ್ದಾರೆ, ಆಶ್ಚರ್ಯ ಪಟ್ಟಿದ್ದಾರೆ. ಅತ್ಯಂತ ಸರಳ ಪದಗಳಲ್ಲಿ ಎಣೆದಿರುವ ಪದ್ಯಗಳು ವಚನ ಸಾಹಿತ್ಯವನ್ನು ನೆನಪಿಸುತ್ತದೆ. ನಾಡಿನ ಪ್ರಸಿದ್ಧ ದಿನ ಪತ್ರಿಕೆಗಳು ಇವರ ಕವನಗಳನ್ನು ಕುರಿತು ಅಭಿಪ್ರಾಯ ಪಟ್ಟಿವೆ.

“ಇಲ್ಲಿನ ಸಾಲುಗಳು ಹಲವಾರು ಕಡೆ ಬಲು ಪ್ರಖರವಾಗಿ ಓದುಗನ ಮುಖಕ್ಕೆರಾಚುತ್ತದೆ. ಹೇಳುವ ರೀತಿಯನ್ನು ‘ಶಹಭಾಸ್’ ಎನ್ನೋಣ ಎನಿಸುತ್ತದೆ”.

ಪ್ರಜಾವಾಣಿ, ೧೧-೦೫-೧೯೮೦.

ಒಟ್ಟಾರೆ ಶಿವಳ್ಳಿ ಕೆಂಪೇಗೌಡರ ಕಥೆಗಳು ಬರಗೂರರ ಅಭಿಪ್ರಾಯದಂತೆ ಸಾಮಾಜಿಕ ಕಾಳಜಿಯುಳ್ಳ ವ್ಯಂಗ್ಯ ರಚನೆಗಳು. ದೇವಯ್ಯ ಹರವೆ ಯವರ ಅಭಿಪ್ರಾಯದಂತೆ ಅತ್ಯುತ್ತಮ ದಲಿತ ಕಥೆ ಸಾಲಿಗೆ ಸೇರುವವು. ಭಾಷಾ ಬಳಕೆಯಲ್ಲಿ ಎಲ್ಲಿಯೂ ರಾಜಿಯಾಗದಂತೆ ಮಂಡ್ಯ ನೆಲದ ಸೊಗಡನ್ನು ಇಲ್ಲಿನ ಭಾಷೆಯ ವಿವಿಧ ಬಳುಕುಗಳನ್ನು ಸಹಜವಾಗಿ ಎಣೆದಿದ್ದಾರೆ. ಇಂತಹ ಬಹುಮುಖ ಪ್ರತಿಭೆಯು ನಾಡಿನಾದ್ಯಂತ ಸರಿಯಾದ ಚರ್ಚೆಗೆ ಒಳಗಾಗದಿರುವುದು ಬೇಸರದ ಸಂಗತಿ.

ಅಡಿ ಟಿಪ್ಪಣಿಗಳು :-

೧. ಗೀಜಗನಗೂಡು (ಶಿವಳ್ಳಿ ಕೆಂಪೇಗೌಡರ ಸಮಗ್ರ ಕಥೆ, ಕವನ ಸಂಪುಟ) ಪುಟ ೧೬೧.
೨. ಅಲ್ಲೇ ಪುಟ ೧೬೦
೩. ಅಲ್ಲೇ ಪುಟ ೧೬೨
೪. ಅಲ್ಲೇ ಪುಟ ೦೬
೫. ಅಲ್ಲೇ ಪುಟ ೦೫
೬. ಅಲ್ಲೇ ಪುಟ ೦೬

ಅಧ್ಯಾಯ – ೩

ಕೆಂಪೇಗೌಡರ ಕಾವ್ಯ

೩.೧ ಭಾವಗೀತೆಯ ಪರಿಚಯ

ಮನುಷ್ಯ ತನ್ನ ಭಾವನೆಗಳನ್ನು ಅಭಿವ್ಯಕ್ತಿಸಲು ಹಲವಾರು ಮಾಧ್ಯಮಗಳನ್ನು ಸೃಜಿಸಿಕೊಂಡನು. ಸಂಗೀತ. ಶಿಲ್ಪಕಲೆ, ಚಿತ್ರಕಲೆ, ಸಾಹಿತ್ಯ ಈ ಮೊದಲಾದವುಗಳು ಅವನ ಅಭಿವ್ಯಕ್ತಿಯ ಸಾಧನಗಳು. ಇವುಗಳಲ್ಲಿ ಸಾಹಿತ್ಯವೂ ಪ್ರಮುಖವಾದದು. ಭಾಷೆ ಅದರ ದೇಹ. "ಸಾಮಾನ್ಯವಾಗಿ ಯಾವುದೇ ಭಾಷೆಯ ಉದಯದೊಡನೆ ಒಂದು ಬಗೆಯ ಸಾಹಿತ್ಯದ ಉದಯವೂ ಆಗುತ್ತದೆ".[1] ಎಂಬ ಮಾತನ್ನು ಒಪ್ಪಬಹುದಾಗಿದೆ. ಭಾವನೆಗಳ ಅಭಿವ್ಯಕ್ತಿ ಭಾಷೆಯಾಗಿದ್ದು ಸಾಹಿತ್ಯವೂ ಅದೇ ನೆಲೆಯಲ್ಲಿ ವಿಭಿನ್ನ ವಾಚನದಲ್ಲಿ ತನ್ನ ಕೈಂಕರ್ಯವನ್ನು ನಿರ್ವಹಿಸುತ್ತದೆ. "ರಸಾನುಭವದ ಸುಂದರ ಅಭಿವ್ಯಕ್ತಿಯೇ ಸಾಹಿತ್ಯ"[2] ಎಂಬ ಮಾತನ್ನು ಗಮನಿಸಬಹುದು. ಈ ಅಭಿವ್ಯಕ್ತಿಯು ಕಾಲದಿಂದ ಕಾಲಕ್ಕೆ ಬೇರೆ ಬೇರೆ ರೂಪಗಳನ್ನು ಪಡೆದುಕೊಂಡಿದೆ. ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ಅವಲೋಕಿಸಿದಾಗ ಈ ವರೆಗಿನ ಸಾಹಿತ್ಯವನ್ನು ಗಮನಿಸಿದಾಗ ಅದರ ವೈವಿಧ್ಯತೆ ಸ್ಪಷ್ಟವಾಗುತ್ತದೆ. ಕ್ರಿ.ಶ ೭ನೇ ಶತಮಾನದ ಬಾದಾಮಿ ಶಾಸನದ ತ್ರಿಪದಿಯಿಂದ ಇಂದಿನವರೆಗಿನ ಸಾಹಿತ್ಯದ ನಡುವೆ ಹಲವಾರು ಹೊಸ ಹೊಸ ಸಾಹಿತ್ಯ ಪ್ರಕಾರಗಳು ರೂಪುಗೊಂಡಿವೆ. ಈ ರಚನೆಗಳಿಗೆ ಅನೇಕ ಪ್ರಭಾವ ಪ್ರೇರಣೆಗಳೂ ಇವೆ. ಈ ಸಾಲಿನಲ್ಲಿ ಸೇರುವ ಅತ್ಯಂತ ಜನಪ್ರಿಯವಾದ ಒಂದು ಸಾಹಿತ್ಯ ಪ್ರಕಾರ ಭಾವಗೀತೆ.

ಭಾವಗೀತೆ ಆಧುನಿಕ ಸಂದರ್ಭದಲ್ಲಿ ಅತ್ಯಂತ ಜನ ಪ್ರಿಯವಾದುದು. ಪ್ರಾಚೀನ ಕಾಲದಿಂದಲೂ ಗೀತೆರಚನೆ ನಡೆಯುತ್ತಿದೆ. ಮಹಾಕಾವ್ಯ. ಶತಕಗಳು, ವಚನಗಳು, ಕೀರ್ತನೆಗಳು ಮೊದಲಾದ ರಚನೆಗಳು ಭಾವಗೀತೆಯ ಸಮಾನ ಸ್ಥಾನವನ್ನು ಪಡೆದವುಗಳೇ ಆಗಿವೆ. ಆದ್ದರಿಂದಲೇ ಡಾ.ಪ್ರಭುಶಂಕರ ರವರು ತಮ್ಮ ಸಂಶೋಧನಾ ಪ್ರಬಂಧವಾದ 'ಕನ್ನಡದಲ್ಲಿ ಭಾವಗೀತೆ' ಯಲ್ಲಿ ಭಾವಗೀತೆಗಳನ್ನು ವೇದದಿಂದ ಹಿಡಿದು ಆಧುನಿಕ ಪಾಶ್ಚಿಮಾತ್ಯ ಪ್ರೇರಣೆಯ ರಚನೆಯವರೆಗಿನ ಗೀತೆಗಳನ್ನು ಗುರುತಿಸಿದ್ದಾರೆ. ಅವರು ವೇದ, ಉಪನಿಷತ್ತು, ಭಗವದ್ಗೀತೆ. ಪ್ರಾಚೀನ ಕೃತಿಗಳಲ್ಲಿ, ವಚನಗಳಲ್ಲಿನ ಭಾವಗೀತೆಗಳನ್ನು ಗುರುತಿಸಿದ್ದಾರೆ. ಅಂದರೆ ಭಾವಗೀತೆಯ ಅರ್ಥವ್ಯಾಪ್ತಿ ವಿಶಾಲವಾದುದು. ಅದು ಕೇವಲ ಭಾವಸಂಬಂಧಿ ಮಾತ್ರವಲ್ಲ ಬುದ್ಧಿಗಮ್ಯವಾದುದು ಹೌದು ಎನ್ನುತ್ತಾರೆ. ರಾಷ್ಟ್ರಕವಿ ಕುವೆಂಪು "ಅಕೆ ಬುದ್ಧಿಭಾವಗಳ ವಿದ್ಯುದಾಲಿಂಗನದಿಂದ ಆವಿರ್ಭವಿಸಿರುವ ಪ್ರತಿಭಾರೂಪಸಿ"[3] ಎಂದಿದ್ದಾರೆ. ಅಂದರೆ ಭಾವಗೀತೆಯು ಬುದ್ಧಿ ಮತ್ತು ಭಾವಗಳ ಮಿಲನದಿಂದಾದ ರಚನೆ. ಭಾವಗೀತೆಯ ಗಾತ್ರ ಕುರಿತಾದ ಸಂದಿಗ್ಧತೆಯೂ ಇದೆ. ಭಾವಗೀತೆ ಹ್ರಸ್ವವಾಗಿರಬೇಕು, ಆದರೆ ಎಷ್ಟು ಹ್ರಸ್ವವಾಗಿರಬೇಕೆಂದು ಹೇಳುವುದು ಕಷ್ಟ. ಅದು ಆಯಾಯ ಕವನದ ಭಾವಕ್ಕನುಗುಣವಾಗಿರುತ್ತದೆ ಎನ್ನಬಹುದು.

ಒಟ್ಟಾರೆ ಕಾವ್ಯದ ಚೇತನ ಬದಲಾಗುತ್ತಾ ಹೋದಂತೆ ಅದರ ರೂಪಗಳೂ ಬದಲಾಗುತ್ತಾ ಹೋಗುತ್ತದೆ. ಹಾಗೆಂದ ಮಾತ್ರಕ್ಕೆ ಹಳೆಯ ರೂಪಗಳನ್ನೆಲ್ಲ ಸಂಪೂರ್ಣವಾಗಿ ನುಚ್ಚುನೂರು ಮಾಡಬೇಕೆಂದಿಲ್ಲ. ಹಳೆಯ ಉಪಕರಣಗಳಲ್ಲಿ ಹೊಸ ಚೇತನವನ್ನು ತುಂಬುವ, ಅವುಗಳ ಸ್ವಭಾವದ

ಅಂತರಾಳದಲ್ಲಿ ಸೂಕ್ಷ್ಮವಾದ ಬದಲಾವಣೆಗಳನ್ನು ಮಾಡುವ ಪ್ರಯತ್ನ ನಡೆಯಬೇಕಾಗಿದೆ. ಅದು ಸಾಮಾಜಿಕ ಬದುಕಿನ ಸ್ವರೂಪಕ್ಕನುಗುಣವಾಗಿ ಬದಲಾಗುತ್ತದೆ. ಆಧುನಿಕ ಮಾನವ ನಿರಂತರ ಯಾಂತ್ರಿಕ ಬದುಕಿಗೆ ತನ್ನನ್ನು ಒಡ್ಡಿಕೊಂಡಿದ್ದಾನೆ. ಆತನಿಗೆ ಬಿಡುವು ಕಡಿಮೆ ಇದ್ದುದರಿಂದಲೇ ಹ್ರಸ್ವ ಸಾಹಿತ್ಯವನ್ನು ಓದುವ ಅಭಿರುಚಿ ಬಂದಿತೇನೋ, ಮಹಾಕಾವ್ಯಗಳಂತಹ ದೀರ್ಘಸಾಹಿತ್ಯವನ್ನು ಓದಿ ಆನಂದಿಸಲು ಅಪಾರ ಸಮಯ. ತಾಳ್ಮೆ ಪಾಂಡಿತ್ಯಗಳು ಬೇಕು. ಭಾವಗೀತೆಗಳ ವಿಷಯದಲ್ಲಿ ಇವೆಲ್ಲವೂ ರಾಜಿಯಾಗುತ್ತವೆ.

೩.೨ ಕನ್ನಡದಲ್ಲಿ ಭಾವಗೀತೆ

ಇಂದು ಭಾವಗೀತೆ ಎಂದು ಕರೆಯುವ ಸಾಹಿತ್ಯ ರಚನೆ ೨೦ನೇ ಶತಮಾನದ ಆಜುಬಾಜಿನಿಂದಾದ ರಚನೆಗಳು. ನೂರಾರು ವರ್ಷಗಳಿಂದ ನಿಂತಿದ್ದ ಸಾಹಿತ್ಯ ಒಮ್ಮಿಂದೊಮ್ಮೆ ಹಲವು ಹೊಸ ರೂಪಗಳಲ್ಲಿ ಹರಿಯ ತೊಡಗಿತು. ಕಾದಂಬರಿ ಸಣ್ಣಕಥೆ. ಪ್ರಬಂಧ. ಭಾವಗೀತೆ ಈ ಸಾಲಿನಲ್ಲಿ ಬರುತ್ತವೆ. ಆಧುನಿಕ ಕನ್ನಡ ಸಾಹಿತ್ಯದ ಘಟ್ಟಗಳಲ್ಲಿ ನವೋದಯ ಕಾಲ ಮೊದಲನೆಯ ಘಟ್ಟ. ಇಲ್ಲಿಂದಲೇ ನಿಜವಾದ ಭಾವಗೀತೆಗಳ ಯುಗ ಕನ್ನಡದಲ್ಲಿ ಆರಂಭವಾಯಿತು. ಇದರ ನಿಜವಾದ ಗೌರವ ಬಿ.ಎಂ.ಶ್ರೀ ಯವರಿಗೆ ಸಲ್ಲುತ್ತದೆ. 'ಇವರ ಇಂಗ್ಲಿಷ್ ಗೀತೆಗಳು' ಈ ಐತಿಹಾಸಿಕ ಮಹತ್ವಕ್ಕೆ ಪಾತ್ರವಾದ ಕೃತಿ. ಶ್ರೀಯವರಿಗಿಂತ ಮೊದಲೆ ಇಂತಹ ರಚನೆಗಳನ್ನು ತೊಡಗಿಸಿರುವುದನ್ನು ಕಾಣಬಹುದು.

ಎಸ್.ಜಿ ನರಸಿಂಹಶಾಸ್ತ್ರಿಗಳು ಹಾಗೂ ಹಟ್ಟಿ ಅಂಗಡಿ ನಾರಾಯಣರಾಯರು ಇಂಗ್ಲೀಷ್ ಕವಿತೆಗಳನ್ನು ಭಾಷಾಂತರಿಸಿದರು. ಆದರೆ ಇವರ ಬರವಣಿಗೆಯಲ್ಲಿ ಹೊಸ ಸಾಹಿತ್ಯ ಪ್ರಕಾರವೊಂದನ್ನು ನಿರ್ಮಿಸಲೆಬೇಕೆಂಬ ಉತ್ಕಟವಾದ ಆಸೆ ಇಲ್ಲ. ಬಿ.ಎಂ.ಶ್ರೀಯವರಲ್ಲಿ ಮಾತ್ರ ಈ ಲವಲವಿಕೆ ಕಂಡು ಬರುತ್ತದೆ. ೧೯ನೇ ಶತಮಾನದ ಕೊನೆಯ ಭಾಗದಲ್ಲಿ ಜೀವಿಸಿದ್ದ ಶಾಂತಕವಿಗಳ ಕಾವ್ಯ, ಹಳೆಯ ಪರಂಪರೆಯಿಂದ ಬಿಡುಗಡೆಯನ್ನು ಪಡೆಯದಿದ್ದರೂ ಕನ್ನಡ ನಾಡು-ನುಡಿಗಳ ಅಭಿಮಾನದ ಆವೇಶದಲ್ಲಿ ಅವರ ಕಾವ್ಯ ಹೊಸ ಜನ್ಮವನ್ನು ಪಡೆಯಿತು. 'ಕನ್ನಡ ದಾಸಯ್ಯ', ರಕ್ಷಿಸು ಕರ್ನಾಟಕ ದೇವಿ' ಇಂಥ ಅವರ ಕವನಗಳಲ್ಲಿ ಆಧುನಿಕ ಭಾವಗೀತೆಯ ಜೀವಸ್ವರಗಳು ಸ್ಪಷ್ಟವಾಗಿ ಕೇಳುತ್ತವೆ. ಕಾವ್ಯಾನಂದರ ವಿನೋದಪರ ಕವಿತೆಗಳಲ್ಲಿ ಕಂಡುಬರುವ ಸಾಮಾಜಿಕತೆಯ ಅರಿವು, ವಿಡಂಬನ ದೃಷ್ಟಿ, ಬಳಕೆ ಮಾತಿನ ಪ್ರೀತಿ ಈ ಗುಣಗಳು ಆಧುನಿಕತೆಯನ್ನು ಬರಮಾಡಿಕೊಳ್ಳುವಂತಿವೆ.

ಕನ್ನಡವಲ್ಲಿ ಭಾವಗೀತೆಯ ಮಾದರಿಯ ರಚನೆಗಳು ಈ ಮೊದಲು ಇಲ್ಲ ಎನ್ನಲಾಗದು. ಈ ಮೊದಲೇ ಉಲ್ಲೇಖಿಸಿದಂತೆ ಭಾರತೀಯ ಮತ್ತು ಕನ್ನಡದ ಸಾಹಿತ್ಯ ರಚನೆಗಳಲ್ಲಿನ ಭಾವಗೀತೆ ಸ್ವರೂಪದ ರಚನೆಗಳನ್ನು ಪ್ರಭುಶಂಕರರು ಗುರುತಿಸಿದ್ದಾರೆ. ವೇದೋಪನಿಷತ್ತಿನಿಂದ ಹಿಡಿದು ಜನಪದ ಗೀತೆಗಳ ರಚನೆಗಳೆಲ್ಲ ಈ ಸಾಲಿಗೆ ಸೇರುತ್ತವೆ. ಖಂಡಕಾವ್ಯಗಳು, ದಾಸರ ಗೀತೆಗಳು ಸರ್ವಜ್ಞನ ತ್ರಿಪದಿಗಳು, ವಚನಗಳು ಇವೆಲ್ಲ ಭಾವಗೀತೆಗೆ ತೀರಾ ಸಮೀಪದ ಪ್ರಕಾರಗಳಾಗಿವೆ. ಕೇವಲ ಸಹಜವಾದ ಭಾವ ಸಂಪತ್ತಿನಿಂದಲೇ ತುಂಬಿಕೊಂಡ ಜಾನಪದ ಕಾವ್ಯವೂ ಈ ಸಾಲಿಗೆ ಸೇರುತ್ತದೆ. ಆದರೆ ಮಹಾಕಾವ್ಯದಂತೆ

ಇಲ್ಲಿಯೂ ವಸ್ತುನಿಷ್ಠತೆಯೇ ಪ್ರಧಾನವಾಗಿದೆ. ಅಲ್ಲದೆ ಈ ಮಾದರಿಯ ಕಾವ್ಯ ನಮ್ಮ ಕಾವ್ಯದ ಮುಖ್ಯ ಪ್ರವಾಹವಾಗಿ ಹರಿದು ಬರಲಿಲ್ಲ. ಈ ಕಾವ್ಯ ಆಧುನಿಕ ಕಾಲದಲ್ಲಿಯೇ ಹೆಚ್ಚು ಲೋಕಪ್ರಿಯವಾಯಿತು.

'ಇಂಗ್ಲಿಷ್ ಗೀತೆಗಳ' ನಂತರ ಕೆಲಕಾಲ ಭಾವಗೀತೆ 'ಶ್ರೀ'ಯವರ ಕವನಗಳಲ್ಲಿ ಕಾಣದ ಗತಕಾಲದ ಬಾಂಧವ್ಯವನ್ನು ಉಳಿಸಿಕೊಂಡಿತು. ಮಾಸ್ತಿವೆಂಕಟೇಶ ಅಯ್ಯಂಗಾರರು 'ಶ್ರೀನಿವಾಸ' ಎಂಬ ಕಾವ್ಯನಾಮದಿಂದ ಸಾಹಿತ್ಯ ರಚನೆ ಮಾಡಿದರು. ನವೋದಯದ ಪ್ರಾರಂಭದ ವರ್ಷಗಳಲ್ಲಿ ಕಾವ್ಯರಚನೆ ಮಾಡಿದವರು ಶ್ರೀನಿವಾಸರು. ಡಿ.ವಿ.ಜಿರವರು, ಮಂಜೇಶ್ವರ ಗೋವಿಂದಪೈ ರವರು ನಂತರದ ಪ್ರಮುಖರು. ಇದೇ ಮಾರ್ಗದಲ್ಲಿ ಶ್ರೀಯವರ ಶಿಷ್ಯಂದಿರು ಭಾವಗೀತೆಗಳ ಯುಗವನ್ನು ಸೃಷ್ಟಿಸಿದರು. ಭಾವಗೀತೆಯ ವಿವಿಧ ಪ್ರಯೋಗಗಳು ಮುಂದೆ ನಡೆದವು. ಬೇಂದ್ರೆ, ಕುವೆಂಪು, ಪು.ತಿ.ನ, ತೀ.ನಂ.ಶ್ರೀ, ಕೆ.ಎಸ್.ನರಸಿಂಹಸ್ವಾಮಿ ಮೊದಲಾದವರು ಗಂಡು ಹೆಣ್ಣಿನ ಒಲವನ್ನು ನಿರೂಪಿಸಲು ಭಾವಗೀತೆಯನ್ನು ರಚಿಸಿದರು. ಸಹಜವಾದ ಗಂಡು ಹೆಣ್ಣಿನ ಅನುರಾಗದಿಂದ ಹಿಡಿದು ಚಿಂತನೆ, ಅನುಭಾವದವರೆಗೆ ಕವಿಚೇತನ ನೂರು ಅನುಭವಗಳಿಗೆ ನೂರು ರೀತಿಯಲ್ಲಿ ಸ್ಪಂದಿಸಿರುವುದನ್ನು ಈ ಕಾಲದ ಭಾವಗೀತೆಗಳಲ್ಲಿ ಕಾಣಬಹುದು.

ನವೋದಯ ಕಾಲಘಟ್ಟದಲ್ಲಿ ಸಮೃದ್ಧಿಯಿಂದ ಭಾವಗೀತೆಗಳ ರಚನೆಯಾಯಿತು. ಶ್ರೀ ಯವರ ನಂತರ ಶ್ರೀನಿವಾಸ. ಡಿ.ವಿ.ಜಿ, ಕೆ.ಎಸ್.ನ, ರಂ.ಶ್ರೀ.ಮುಗಳಿ. ಎಂ.ವಿ.ಸಿ. ಕರ್ಕಿ ಮೊದಲಾದವರ ರಚನೆಗಳು ಶ್ರೇಷ್ಠವೆನಿಸಿವೆ. ಅಂತೆಯೇ ಪ್ರಗತಿಶೀಲ ಕಾಲದಲ್ಲಿ ಕಾದಂಬರಿ ಸಾಹಿತ್ಯ ಮುಖ್ಯವಾದರೂ ಭಾವಗೀತೆಯ ರಚನೆಗಳು ಇದ್ದೇ ಇವೆ. ನಂತರ ನವ್ಯರಲ್ಲಿ ಅತ್ಯುತ್ತಮವಾದ ಗಾಢ ಸಂಕೀರ್ಣ ಭಾವಗೀತೆಗಳ ರಚನೆಗಳಾದವು. ಗೋಪಾಲಕೃಷ್ಣ ಅಡಿಗ. ವಿ.ಕೃ.ಗೋಕಾಕ್, ಕೆ.ಎಸ್.ನ, ಜಿ.ಎಸ್.ಶಿವರುದ್ರಪ್ಪ. ಚನ್ನವೀರಕಣವಿ. ಶರ್ಮಾರ ರಚನೆಗಳನ್ನು ಇಲ್ಲಿ ಕಾಣಬಹುದು. ಅಂತೆಯೇ ನವ್ಯೋತ್ತರ ಕಾಲಘಟ್ಟದಲ್ಲಿ ಸ್ತ್ರೀಯರು, ದಲಿತರು. ಬಂಡಾಯ ಬರಹಗಾರರು ಅನೇಕ ಭಾವಗೀತೆಗಳನ್ನ ರಚಿಸಿದ್ದಾರೆ. ವೈದೇಹಿ, ಕಮಲಾಹಂಪನಾ. ಅನುಪಮ ನಿರಂಜನ ಮೊದಲಾದ ಮಹಿಳಾ ಬರಹಗಾರ್ತಿಯರು. ದೇವನೂರು ಮಹಾದೇವ, ಸಿದ್ದಲಿಂಗಯ್ಯ, ಮ.ನ.ಜ. ಮೊದಲಾದ ದಲಿತ ಬರಹಗಾರರು. ಬರಗೂರು ರಾಮಚಂದ್ರಪ್ಪ. ಕಾಳೇಗೌಡ ನಾಗವಾರ, ಮೊಗಳ್ಳಿ ಗಣೇಶ್ ಮೊದಲಾದ ಬಂಡಾಯ ಬರಹಗಾರರನ್ನು ಭಾವಗೀತೆಗಳ ರಚಕರ ಸಾಲಿನಲ್ಲಿ ಗುರುತಿಸಬಹುದು.

ಕನ್ನಡದಲ್ಲಿ ಭಾವಗೀತೆಯ ರಚನೆಗೆ ಒಂದು ಗೆರೆ ಎಳೆದು ಇಲ್ಲಿಂದ ಎಂದು ಹೇಳಲು ಕೊಂಚ ಕಷ್ಟವಾದರು. ಅವರ ಮುಖ್ಯ ಪ್ರೇರಣೆ ಮತ್ತು ಪ್ರಭಾವ ಇಂಗ್ಲಿಷ್‌ನ ರೊಮ್ಯಾಂಟಿಕ್ ಕವಿಗಳೆಂದೂ, 'ಶ್ರೀ'ಯವರೇ ಆದ್ಯರೆಂದು ಹೇಳಲು ಅನುಮಾನಗಳಿಲ್ಲ. ಇಂದು ಹಲವು ಛಂದಸ್ಸುಗಳಲ್ಲಿ, ಹಲವಾರು ರೀತಿಗಳಲ್ಲಿ ವಿಭಿನ್ನ ವಸ್ತುವನ್ನು ಒಳಗೊಂಡಂತಹ ಭಾವಗೀತೆಗಳು ಕನ್ನಡದಲ್ಲಿ ರಚನೆಯಾಗುತ್ತಿವೆ.

೩.೩ ಮಂಡ್ಯ ಜಿಲ್ಲೆ ಮತ್ತು ಭಾವಗೀತೆ

ನಾಟಕ, ಕಾದಂಬಲ, ಸಣ್ಣಕಥೆಗಳಲ್ಲದೆ ಭಾವಗೀತೆಗೂ ಜಿಲ್ಲೆ ಕೊಡುಗೆ ಅನನ್ಯವಾದುದು. ಅತ್ಯಂತ ಪ್ರಮುಖರನ್ನು ಇಲ್ಲಿ ಪ್ರಸ್ತಾಪಿದ್ದೇನೆ. ಅವರಲ್ಲಿ ಮೇಲುಕೋಟೆಯ ಕವಿ ಎಂದೇ ಪ್ರಸಿದ್ಧರಾದ ಪುರೋಹಿತ ತಿರುನಾರಾಯಣಅಯ್ಯಂಗಾರ್ ನರಸಿಂಹಚಾರ್ಯ ಪ್ರಮುಖರು, ಇವರು ಸಾಹಿತ್ಯದ ಹಲವು ಪ್ರಕಾರಗಳ ರಚನೆ ಮಾಡಿದ್ದಾರೆ. ಎಂಟು ಕವನ ಸಂಕಲನಗಳನ್ನು ರಚನೆ ಮಾಡಿದ್ದಾರೆ. ಹಣತೆ, ಮಾಂದಳಿರು. ಶಾರದಾ ಯಾಮಿನಿ, ಗಣೇಶದರ್ಶನ, ರಸ ಸರಸ್ವತಿ. ಮಲೆದೇಗುಲ ಮುಂತಾದವು ಸೊಗಸಾದ ಪ್ರಕೃತಿ. ಪ್ರೇಮ, ಭಕ್ತಿ ಮತ್ತು ಆಧ್ಯಾತ್ಮ ವಸ್ತುಗಳನ್ನ ಒಳಗೊಂಡ ರಚನೆಯಾಗಿದೆ. ಇವರು ನವೋದಯದ ಮುಖ್ಯ ಕವಿಗಳಲ್ಲಿ ಒಬ್ಬರು. ಇವರ ಕವನಗಳು ನವೋದಯ ಸಾಹಿತ್ಯದ ಲಕ್ಷಣಗಳನ್ನು ಮೈಗೂಡಿಸಿಕೊಂಡಿವೆ. ಮಂಡ್ಯ ಜಿಲ್ಲೆಯ ಮೇಲುಕೋಟೆ ಇವರ ಜನ್ಮಸ್ಥಳ. ಭಾವಗೀತೆಗೆ ಇವರ ಕಾಣಿಕೆ ಗಮನಾರ್ಹವಾದುದಾಗಿದೆ.

‘ಮೈಸೂರು ಮಲ್ಲಿಗೆ’ ಕವಿ, ‘ಶೃಂಗಾರ ಕವಿ’ ಎಂದು ಖ್ಯಾತಿ ಪಡೆದ ಕೆ.ಎಸ್.ನ. ಮಂಡ್ಯ ಜಿಲ್ಲೆಯ ಮತ್ತೊಬ್ಬ ಮುಖ್ಯ ಭಾವಗೀತೆಕಾರರು. ೨೦ನೇ ಶತಮಾನದ ಕನ್ನಡ ಕಾವ್ಯ ಸಂದರ್ಭದಲ್ಲಿ ನರಸಿಂಹಸ್ವಾಮಿ ಯವರ ಹೆಸರು ಮುಖ್ಯವಾದುದು. ಇವರ ‘ಮೈಸೂರು ಮಲ್ಲಿಗೆ’ ೧೮ ಮುದ್ರಣಗಳನ್ನು ಕಂಡಿದೆ. ನವೋದಯದಲ್ಲಿ ಹೆಸರು ಗಳಿಸಿದ್ದ ಕವಿ ತಮ್ಮ ಸುಕುಮಾರ ಜಗತ್ತಿನಿಂದ ಅನೇಕ ಕವಿತೆಗಳನ್ನು ರಚಿಸಿದ್ದಾರೆ. ‘ಶಿಲಾಲತೆ’. ‘ಐರಾವತ’. ‘ದೀಪದಮಲ್ಲಿ’, ‘ಉಂಗುರ’ ‘ಇರುವಂತಿಗೆ’, ‘ತೆರೆದಬಾಗಿಲು’, ‘ಮನೆಯಿಂದ ಮನೆಗೆ’ ಮೊದಲಾದವು ಇವರ ಕವನ ಸಂಕಲನಗಳು.

ಮಂಡ್ಯ ಜಿಲ್ಲೆಯ ಜನಪದ ರತ್ನ ಜೀ.ಶಂ.ಪರಮಶಿವಯ್ಯ. ಇವರು ಮುಖ್ಯವಾಗಿ ಜನಪದ ಕ್ಷೇತ್ರದಲ್ಲಿ ಗುರುತಿಸಿಕೊಂಡರೂ ಎರಡು ಕವನ ಸಂಕಲನಗಳನ್ನು ರಚಿಸಿದ್ದಾರೆ. ಅವುಗಳೆಂದರೆ ‘ಜೀವನಗೀತೆ’. ‘ದಿಬ್ಬದಾಚೆ’, ಸುಮಾರು ೫೦ಕೃತಿಗಳು ಇವರ ಒಟ್ಟು ರಚನೆ. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಅಂಬಲ ಜೀರಳ್ಳಿಯವರು.

ಕನ್ನಡ ಸಣ್ಣಕಥಾ ಕ್ಷೇತ್ರದ ಬಹುಮುಖ್ಯರಲ್ಲಿ ಬೆಸಗರಹಳ್ಳಿ ರಾಮಣ್ಣ ಒಬ್ಬರು. ವೃತ್ತಿಯಲ್ಲಿ ವೈದ್ಯ. ಪ್ರವೃತ್ತಿಯಲ್ಲಿ ಅತ್ಯುತ್ತಮ ಸಣ್ಣ ಕಥೆಗಾರರು, ಇವರು ‘ಶೋಕಗೀತೆ’ ಎಂಬ ಒಂದು ಕವನ ಸಂಕಲನವನ್ನು ರಚಿಸಿದ್ದಾರೆ.

ಇವರಲ್ಲದೆ ನಾಗತಿಹಳ್ಳಿ ಚಂದ್ರಶೇಖರ್. ಡಾ.ರಾಮೇಗೌಡರು ಈ ಸಾಲಿನಲ್ಲಿ ನಂತರ ಗುರಿತಿಸ ಬಹುದಾದ ಹೆಸರು ಶಿವಳ್ಳಿ ಕೆಂಪೇಗೌಡರದು. ಮಂಡ್ಯ ಜಿಲ್ಲೆಯ ಕವಿಗಳ ಸಾಲಿನಲ್ಲಿ ನಿಲ್ಲುವ ಸಾಮರ್ಥ್ಯ ವಿರುವ ಬರಹಗಾರ. ಇವರ ಕವನ ಸಂಕಲನಗಳು ಮತ್ತು ಅವುಗಳಲ್ಲಿನ ವಸ್ತುವನ್ನು ಈ ಮುಂದೆ ವಿಶ್ಲೇಷಿಸಲಾಗಿದೆ.

೩.೪ ಕೆಂಪೇಗೌಡರ ಕವನಗಳು.

ಕನ್ನಡ ಸಾಹಿತ್ಯದ ಯಾವ ಘಟ್ಟದಲ್ಲೂ ಗುರುತಿಸದಿರುವ, ಎಲ್ಲ ಘಟ್ಟಗಳ ಸ್ವರೂಪ ಲಕ್ಷಣಗಳಿರುವ ಬರವಣಿಗೆ ಕೆಂಪೇಗೌಡರದು. ಮಂಡ್ಯ ಜಿಲ್ಲೆಯ ಈ ಬರಹಗಾರರ ಒಟ್ಟು ಕವನಗಳು ಸಂಖ್ಯೆಯಲ್ಲಿ ಮೂವತ್ತ ನಾಲ್ಕು. ಈ ಕವನಗಳಲ್ಲಿ ಬಹುಮುಖ್ಯವಾದ ವಸ್ತು ರೈತ ಸಂವೇದನೆ. ಶೋಷಣೆ, ದಲಿತಪರ ನಿಲುವು, ಕ್ರೌರ್ಯ, ಆಕ್ರೋಶಗಳು. ಇವರ ಭಾವಗೀತೆಗಳು ವಚನ ಸಾಹಿತ್ಯದಂತೆ ನಿರ್ಬಂಧ ರಹಿತವಾದವು. ಛಂದಸ್ಸಿನ ನಿರ್ಬಂಧ. ವಸ್ತುನಿರ್ಬಂಧ ಯಾವುವೂ ಇಲ್ಲದ ರಚನೆಗಳು. ಪ್ರಭುಶಂಕರ ರವರು 'ಕನ್ನಡದಲ್ಲಿ ಭಾವಗೀತೆ' ಕೃತಿಯ ಸಮಾರೋಪದಲ್ಲಿ ಹೇಳಿರುವ ಮಾತುಗಳು ಗೌಡರ ಗೀತೆಗಳಿಗೆ ಅತ್ಯಂತ ಆತ್ಮೀಯವಾಗಿ ಒಪ್ಪುತ್ತವೆ. ಅದೆಂದರೆ "ಪ್ರಾರಂಭದಲ್ಲಿ ಭಾವಗೀತೆ ಸರಳವಾದ ಮಧುರಗೀತೆ, ಈ ಶಿಳಿಯಾದ ಬುಗ್ಗೆಯಲ್ಲೇ ಸಂತೃಪ್ತಿ ಪಡೆದು ಅದು ವಿರಮಿಸಬಹುದು; ಇಲ್ಲವೇ ಚಿಂತನೆಯಿಂದ ಭಾರವಾದ ಹೆಜ್ಜೆಗಳನ್ನಿಡುತ್ತಾ ನಡೆಯಬಹುದು, ಧ್ಯಾನ ಪೂರ್ಣವಾಗಬಹುದು, ಮತ್ತೆ ಕೆಲವು ಸಲ ತನ್ನ ರೆಕ್ಕೆಗಳನ್ನ ಕೆದರಿ ಮಹಾಕಾವ್ಯದ ವಿಸ್ತಾರದಲ್ಲಿ ಜಾರಬಹುದು ಅಥವಾ ಪ್ರತಿಕ್ರಿಯೆ ಒಂದಾದ ಮೇಲೊಂದರಂತೆ ಬರುವ ಕ್ಷಣಗಳನ್ನ ಭಾವಗೀತಾತ್ಮಕವಾಗಿ ಮಾಡಿ ಹೃದಯ ಹೃದಯದೊಂದಿಗೆ, ಬುದ್ಧಿ ಬುದ್ಧಿಯೊಂದಿಗೆ, ಆತ್ಮ ಆತ್ಮದೊಂದಿಗೆ ನಡೆಯುವಂತೆ ಮಾಡಿ, ಭಾವನೆ–ಅನುಭವಗಳ ನಡುವೆ ಸಂಚರಿಸಿ, ಅವುಗಳಿಗೆ ಧ್ವನಿತುಂಬಿ ನಾಟಕಗಳನ್ನು ರಚಿಸಬಹುದು. ಅದರ ವ್ಯಾಪ್ತಿ ಹಿರಿಯದು ಏಕೆಂದರೆ ಎಷ್ಟು ಬೇಕಾದರೂ ಹಿಗ್ಗುವ ಶಕ್ತಿ ಅದಕ್ಕುಂಟು. ಆದರಿಂದ ಮೂಡಿ ಬೆಳೆದು ತಂತ್ರವನ್ನು ಸಿದ್ಧಪಡಿಸಿಕೊಂಡು ಉಳಿದ ಸಾಹಿತ್ಯ ಪ್ರಕಾರಗಳು ರೂಪ ತಳೆದಿವೆ. ಆದುದರಿಂದಲೇ ಭಾವಗೀತೆಯಲ್ಲಿ ಕಾವ್ಯದ ಹೊಸ ಚೈತನ್ಯ ತನ್ನಷ್ಟಕ್ಕೆ ತಾನು ಅರಿಯುವ ವಿಶೇಷ ಸಾಧ್ಯತೆ ಇದೆ ಭವಿಷ್ಯದಲ್ಲಿ"[೪] ಎಂದಿದ್ದಾರೆ.

ಶಿವಳ್ಳಿ ಕೆಂಪೇಗೌಡರು ಭಾವಗೀತೆಯನ್ನು ಬರೆಯಬೇಕೆಂದು ಹಟಕ್ಕೆ ಬಿದ್ದು ಬರೆದವರಲ್ಲ. ಕವನಗಳನ್ನು ಬರೆಯಲು ಓದು ಗಳಿಸಿದವರಲ್ಲ. ಛಂದಸ್ಸನ್ನು ವ್ಯಾಕರಣವನ್ನು ಅಭ್ಯಾಸಿಸಿದವರಲ್ಲ. ತನ್ನ ಅನುಭವಗಳನ್ನು, ಪರಿಸರದಲ್ಲಿ ಕಂಡ ಸಂವೇದನೆಗಳನ್ನು ಪಾಡುಗಳನ್ನು ಹಾಡಾಗಿಸಿದ್ದಾರೆ. ಅವರ ಒಟ್ಟು ಕವನಗಳಲ್ಲಿ ಶೇಕಡಾವಾರು ರೈತ ಸಂಬಂಧಿ ಗೀತೆಗಳು. ಉಳಿದಂತೆ ವ್ಯವಸ್ಥೆಯ ಕೂಳುಮುಖ, ಭ್ರಷ್ಟತೆ ವಿರುದ್ಧದ ಬಂಡಾಯ ಗೀತೆಗಳಾಗಿವೆ. ವಿರಳವಾಗಿ ಅಕ್ಷರದ ಮತ್ತು ಪುಸ್ತಕದ ಮಹತ್ವವನ್ನು ಕುರಿತ ಗೀತೆಗಳಿರುವುದನ್ನು ಕಾಣಬಹುದು. ಅತ್ಯಂತ ಸರಳ ರಚನೆಗಳಾಗಿವೆ ಅಂದ ಮಾತ್ರಕ್ಕೆ ಪೇಲಾಗಿವೆ ಎಂದಲ್ಲ. ಬದಲಾಗಿ ಅತ್ಯುತ್ತಮ ಭಾವಗೀತೆಗಳ ಪಂಕ್ತಿಯಲ್ಲಿ ಪವಡಿಸಬಲ್ಲವು. ಇಲ್ಲಿನ ಸರಳತೆಯ ನಡುವೆಯೇ ಅಪಾರವಾದ ಸಂಕೇತಗಳನ್ನು ಗುರುತಿಸಬಹುದಾಗಿದೆ. ಧ್ವನಿಪೂರ್ಣವಾದ ಈ ಸರಳ ಕವಿತೆಗಳಲ್ಲಿ ಅಪಾರವಾದ ಜೀವನ ಮೌಲ್ಯಗಳು ಮಡುಗಟ್ಟಿ ನಿಂತಿದೆ. ಇವರ ಎಲ್ಲ ಕವಿತೆಗಳನ್ನು ಗಮನಿಸಿದಾಗ ಇವರ ಮೊದಲ ಆದ್ಯತೆ ರೈತರ ನೋವಿಗೆ ಸಂಬಂಧಿಸಿದ ದನಿಯಾಗಿವೆ. ಮೊದಲಿಗೆ ಶಿವಳ್ಳಿ ಕೆಂಪೇಗೌಡರ ಕವಿತೆಗಳಲ್ಲಿನ ರೈತಗೀತೆಗಳನ್ನು ಈ ಮುಂದೆ ವಿಶ್ಲೇಷಿಸಲಾಗಿದೆ.

೩.೫ ರೈತ ಸಂಬಂಧಿ ಗೀತೆಗಳು / ಕವನಗಳು

ಭಾರತ ಕೃಷಿ ಪ್ರಧಾನ ದೇಶ. ಬಹುಶಃ ಜಾತಿ ಬೇಧವಿಲ್ಲದೆ ಸರಿಸುಮಾರು ಎಲ್ಲರೂ ದುಡಿಯುವ ಕ್ಷೇತ್ರ ಈ ಕೃಷಿ ಕ್ಷೇತ್ರ. ಕೃಷಿ ಭೂಮಿಯ ಮಾಲೀಕನಾಗಿಯೋ ಕೂಲಿಕಾರ್ಮಿಕನಾಗಿಯೋ ದುಡಿಯುವ ಈ ಎಲ್ಲರ ಸ್ಥಿತಿ ಕರುಣಾಜನಕ. ತಮ್ಮ 'ಚೆನ್ನು ಮೂಳೆಯ ಹಾಡು' ಎಂಬ ಶಿಚಿತ್ರ್ಯಪೂರ್ಣ ಶೀರ್ಷಿಕೆಯ ಕವನ ಸಂಕಲನದ ಬಹುತೇಕ ಗೀತೆಗಳು ರೈತಸಂವೇದನೆ ಉಳ್ಳವಾಗಿವೆ. ಅವರಲ್ಲಿ 'ರೈತ' ಎಂಬ ಶೀರ್ಷಿಕೆಯ ಕವನದಲ್ಲಿ ರೈತನ ಕುಟುಂಬದಲ್ಲಿ ಜನಿಸುವ ಮಗುವಿನ ಹಣೆಯ ಬರಹ ಜನಿಸಿದ ದಿನವೇ ನಿರ್ಧಾರ ವಾಗುತ್ತದೆ ಎಂದಿದ್ದಾರೆ ಲೇಖಕರು. ಮುರಿದ ಮನೆ, ಬಡಕಲು ಎತ್ತು, ಅಪ್ಪನ ಹೊಲ ಇವುಗಳ ಒಡನಾಟ ದಲ್ಲಿಯೇ ಬದುಕಿನ ಕೊನೆಗಾಣುವವ ರೈತ. ನಿರಂತರ ದುಡಿಮೆಯಿಂದ ಕಂಗಾಲಾದ ಆತನಿಗೆ ರವೆಯಷ್ಟು ನೆಮ್ಮದಿ ಇಲ್ಲ. ಕಣ್ಣು ಮುಚ್ಚಿದರೂ ನಿದ್ದೆಯಿಲ್ಲ, ನಿದ್ದೆ ಬಂದರೂ ಅದೇ ಕನವರಿಕೆ.

"ಸಿಡಿದು ಚೂರಾಗುವ ತಲೆಗೆ 'ಕಡೆನೀರಿನ ಬಯಕೆ" ಎಂಬ ಪಾದವು ಅತ್ಯಂತ ಕರುಣಾಜನಕ ಸ್ಥಿತಿಯನ್ನು ಬಿಂಬಿಸುತ್ತಿದೆ. ನೂರಾರು ಚಿಂತೆಗಳಿಂದ ಮುಕ್ತರಾಗಲು ರೈತನಿಗಿರುವ ಏಕೈಕ ಮಾರ್ಗ ಕಡೆನೀರು. ಅಥವಾ ಸಾವಿನ ನಂತರ ಶವಕ್ಕೆ ಮಾಡುವ ಸ್ನಾನ. ಇಲ್ಲಿಗೆ ತಲೆ ತೊಳೆದಂತೆ. ಅತ್ಯಂತ ಮಾರ್ಮಿಕವಾಗಿ ಧ್ವನಿಪೂರ್ಣವಾಗಿ ರೈತನ ಬವಣೆಯನ್ನು ಈ ಸಾಲುಗಳು ಚಿತ್ರಿಸಿವೆ. ಪದ್ಯದ ಉತ್ತರಾರ್ಧದಲ್ಲಿ ಏನೆಲ್ಲಾ ಎಷ್ಟೆಲ್ಲಾ ಕಷ್ಟಗಳ ಸಹಿಸಿಯೂ ಮಾನವ ಕುಲಕ್ಕೆ ಸಿಹಿಯನ್ನೇ ಕೊಡುವವ ರೈತ ಎನ್ನುವುದರೊಂದಿಗೆ ಪದ್ಯ ಶಿಚಿತ್ರ್ಯಪೂರ್ಣ ಮುಕ್ತಾಯ ಪಡೆದಿದೆ. ಇದೇ ಪದ್ಯದಲ್ಲಿ ರೈತನ ಈ ಸಮಸ್ಯೆಗೆ ಕಾರಣವನ್ನು 'ಕರಭಾರ' ಎಂದು ತಿಳಿಸಿರುವ ಬರಹಗಾರ, ಈ ಕಷ್ಟ ನಿವಾರಣೆಗೆ ಮಾತ್ರ ಭಗವಂತನಲ್ಲಿ ಮೊರೆಯಿಡಿಸುತ್ತಾರೆ.

ಮತ್ತೊಂದು ಕವಿತೆ ಸಂಕಲನದ ಶೀರ್ಷಿಕೆ ಕವನ 'ಚೆನ್ನುಮೂಳೆಯ ಹಾಡು.' ಇದು ಶಿವಳ್ಳಿಯವರ ಜನಪ್ರಿಯ ಕವಿತೆ. ರೈತನ ಮನವಿಯ ಶೈಲಿಯಲ್ಲಿ ರಚಿತವಾಗಿರುವ ಈ ಕವನ ಬಂಡಾಯ ಸ್ವರೂಪದ್ದಾಗಿದೆ. ಇಲ್ಲಿ ವ್ಯವಸಾಯಗಾರನ ಬದುಕಿನ ವಿಶ್ವರೂಪವನ್ನು ಲೇಖಕರು ಚಿತ್ರಿಸಿದ್ದಾರೆ. ಈಗಾಗಲೇ ನೊಂದು, ಬಾಗಿರುವ ನನಗೆ ಮತ್ತಷ್ಟು ಬಡಿದು ಬಗ್ಗಿಸದಿರಿ, ಅಲ್ಲದೆ ಅಧಿಕಾರಿಗಳು, ರಾಜಕಾರಣಿಗಳೇ ನೀವು ಕಾನೂನುಗಳನ್ನ ಮಾಡುವವರು. ತಣ್ಣನೆಯ ನೆರಳಿನಲ್ಲಿ ಕುಳಿತು ಕಾಗದದ ಮೇಲೆ ಅಕ್ಷರಗಳಲ್ಲಿ ಬರೆದು ಕರಭಾರವೆಂಬ ಹೊಸಕಾನೂನನ್ನು ಮಾಡುವಿರಲ್ಲ, ಈ ಭಾರದಿಂದ ಈಗಾಗಲೇ ನಾನು ಕುಗ್ಗಿದ್ದೇನೆ. ಹೊರ ಲಾರದ ಹೊರೆ ಹೊತ್ತಿದ್ದೇನೆ. ಮತ್ತೇಕೆ ಹೊಸ ಕರಭಾರ! ಎಂದಿದೆ. ರೈತನನ್ನು ವೇದಿಕೆಯಲ್ಲಿ ಹೊಗಳುವ ಜನ, ಹೊನ್ನಶೂಲಕ್ಕೇರಿಸುತ್ತಿದ್ದಾರೆ. ಬೆಳೆದ ಬೆಳೆಗೆ ಬೆಲೆಯಿಲ್ಲದೆ ಕಂಗಲಾಗಿ, ಹೆಂಡತಿ ಮಕ್ಕಳಿಗೆ ಬಟ್ಟೆಯೂ ಇಲ್ಲದ ಸ್ಥಿತಿ ತನ್ನದೆಂದು ರೈತನ ಗೋಳಿಡುವಿಕೆ. ಐದು ವರ್ಷಗಳಿಗೊಮ್ಮೆ ಮುಖತೋರಿಸುವ ರಾಜಕಾರಣಿ ಗಳನ್ನು ಈ ಕವನದ ಮುಖೇನ ಲೇಖಕರು ನೇರವಾಗಿ ಹರಿತಮಾತುಗಳಿಂದ ಟೀಕಿಸುತ್ತಿದ್ದಾರೆ.

"ಐದು ವರ್ಷಗಳಿಗೊಮ್ಮೆ ನಿಮ್ಮ ಅನಿಷ್ಟ ಮುಖ ತೋರಿಸಿ
ಹಲ್ಲು ಗಿಂಜಿ ಮತಯಾಚಿಸುವ ಕೊಲೆಗಡುಕ ರಾಜಕಾರಣಿಗಳೇ

ಜಿಗಣೆಗಳಂತೆ ನನ್ನ ರಕ್ತ ಹೀರಿ
ಹಿಂಡಿ ಹಿಪ್ಪೆ ಮಾಡುವ ಮನೆಹಾಳ ವರ್ತಕರೇ, ದಲ್ಲಾಳಿಗಳೇ,
ಕಂಬ ಕಂಬಕ್ಕೂ ಕೈ ಮುಗಿಸಿ ಗೋಳಟ್ಟ ಉಣಿಸಿ
ಹಣ ಕಸಿದು ಹೆಣ ಮಾಡಿ ಕಿತ್ತು ತಿನ್ನುವ ಹದ್ದು ಕಾಗೆ ಅಧಿಕಾರಿಗಳೇ,"

(ಬೆನ್ನು ಮೂಳೆಯ ಹಾಡು)

ರಾಜಕಾರಣಿಗಳಿಂದ, ವರ್ತಕರಿಂದ, ಅಧಿಕಾರಿಗಳಿಂದ ನಿಜವಾದ ಶೋಷಣೆ ರೈತನಿಗಾಗುತ್ತಿದೆ. ದುಡಿಯುವ ತನಗೆ ಅದರ ಫಲವಿಲ್ಲ. ಕಾನೂನಿಸುವವರಿಗೆ ದುಡಿಯುವವನ ಶ್ರಮದ ಅರಿವಿಲ್ಲ ಈ ನೆಲೆಯಲ್ಲಿ ಸಾಗುವ ಕವನ ಅಂತಿಮವಾಗಿ ಅತ್ಯುತ್ತಮ ಧ್ವನಿಪೂರ್ಣತೆಯನ್ನೊಂದಿದೆ. ಒಂದೆಡೆ ಬಡತನದ ರೈತ ಕುಟುಂಬ. ಇಲ್ಲಿ ದುಡಿಮೆ ಇದೆ, ಆಹಾರ, ಬಟ್ಟೆ, ವಸತಿ, ನೆಮ್ಮದಿ ಇಲ್ಲ. ಮತ್ತೊಂದೆಡೆ ರಾಜಕಾರಣಿಗಳು, ವರ್ತಕರು, ಅಧಿಕಾರಿಗಳು ಇವರು ದುಡಿಯುವವರಲ್ಲ ಆದರೆ ಮನೆ, ಆಹಾರ, ಬಟ್ಟೆ ಮತ್ತು ವಿಲಾಸಿ ಬದುಕಿದೆ. ಈ ಸಾಮಾಜಿಕ ಅಸಮಾನತೆಯನ್ನು ಬದಲಾವಣೆಗೆ ಕ್ರಾಂತಿಯ ಅಪೇಕ್ಷೆಯನ್ನು ಕವನ ಸಂದೇಶಿಸುತ್ತದೆ. ಕವನದ ಉತ್ತರಾರ್ಧದಲ್ಲಿನ ಈ ಪಾದಗಳು ಎರಡು ಸಮುದಾಯಗಳಾದ ಶೋಷಕ–ಶೋಷಿತ ವರ್ಗಗಳ ಸ್ಪಷ್ಟವಾದ ಚಿತ್ರಣವನ್ನು ನಮ್ಮ ಕಣ್ಣ ಮುಂದೆ ಕಟ್ಟುತ್ತದೆ.

"ನಿಮ್ಮ ಕಾರು, ಬಂಗಲೆ, ಸೂಟು ಬೂಟು
ನೀವು ಉಣ್ಣುವ ಸಣ್ಣಕ್ಕಿ ಅನ್ನ,
ಗುಟುಕರಿಸುವ ವಿಸ್ಕಿ, ಬೀರು
ನಿಮ್ಮ ಮಕ್ಕಳ ಹೊಳೆಯುವ ಬಟ್ಟೆ
ನಿಮ್ಮ ಹೆಂಡತಿಯ ಮೈಮೇಲಿನ ಬಂಗಾರ
ಉಟ್ಟ ಗರಿಗರಿ ರೇಷ್ಮೆ ಸೀರೆಯಲ್ಲಿ ನನ್ನ ಬೆವರಿನ ಹನಿಗಳಿಲ್ಲವೇ?

(ಬೆನ್ನು ಮೂಳೆಯ ಹಾಡು)

ಎಂಬಲ್ಲಿ ಉಳ್ಳವನ ಬದುಕಿನ ಸಮೃದ್ಧ ವಿಲಾಸಿ ಜೀವನ ಚಿತ್ರಣವಿದೆ. ಈ ವಿಲಾಸಿ ಬದುಕಿಗೆ ರೈತನ ದುಡಿಮೆಯ ಫಲವೇ ಕಾರಣ ಎಂಬುದು ಜೀರ್ಣಿಸಿಕೊಳ್ಳಲಾಗದ ಮುಕ್ತ ಸತ್ಯವಾಗಿದೆ. ಅಂತಿಮವಾಗಿ ಬದಲಾವಣೆಗಾಗಿ ಕ್ರಾಂತಿಯ ಅನಿವಾರ್ಯವನ್ನು ಈ ಸಾಲು ಬಿಂಬಿಸುತ್ತದೆ.

"ನಿಮ್ಮೆದೆಗೆ ಗುಳಹಾಕಿ ಮೀಟುವ ದಿನ ದೂರವಿಲ್ಲ ಕಾದಿರಿ"

(ಬೆನ್ನು ಮೂಳೆಯ ಹಾಡು)

ಮಾನವ ಕುಲಕ್ಕೆ ಅನ್ನಕೊಡುವ ರೈತರ ವಂಶ ಅಥವಾ ರೈತಮಕ್ಕಳನ್ನ ಕುರಿತು ಇವರ 'ಹಾರೈಕೆ' ಮನ ಮಿಡಿಯುವಂತಿದೆ. 'ಹಾರೈಕೆ' ಕವನದ ಮೂಲಕ ಮಕ್ಕಳ ಸಂತಸದ ಆಟಗಳನ್ನು ಉಲ್ಲೇಖಿಸಿ, ಗ್ರಾಮೀಣ ಕ್ರೀಡೆಗಳು ಮಕ್ಕಳಿಗೆ ಅದೆಷ್ಟು ಆನಂದ ಕೊಡುತ್ತವೆಂದೂ ಸೂಚಿಸಿದ್ದಾರೆ. ಹೂಮನಸ್ಸಿನ ಕಂದಮ್ಮಗಳು ಆಕಾಶದಲ್ಲಿ ಹಾರಿ ಹೋಗುವ ಪಕ್ಷಿಗಳನ್ನು ನೋಡಿ ಅವು ನನ್ನವು! ನನ್ನವು! ಎಂದು ಸಂಭ್ರಮಿ

ಸುವ ಪರಿ ಹೃದಯ ತುಂಬುತ್ತದೆ. ಇಂತಹ ಮಕ್ಕಳನ್ನು ನೇಗಿಲ ಕಾಯಕದ ಪರಂಪರೆಯನ್ನು ಮುಂದುವರೆ ಸುವ ಯುವರಾಜ ರಾಗಲೆಂಬುದೇ ಕೆಂಪೇಗೌಡರ ಹಂಬಲ.

“ಇಂದು ಅನ್ನದ ಮಕ್ಕಳು

ನಾಳೆ ನೇಗಿಲು ಹಿಡಿದು ಉತ್ತು

ಲೋಕದ ಹೊಟ್ಟೆ ತುಂಬಿಸುವ ಚಿನ್ನದ ಮಕ್ಕಳು”

(ಹಾರೈಕೆ)

ತನ್ನ ಕಂದಗಳು ಓದಿ ವಿದ್ಯಾವಂತರಾಗಿ ಬೇರೆ ಬೇರೆ ಉದ್ಯೋಗವನ್ನು ಹೊಂದಲಿ ಎನ್ನುವ ಮಂದಿಯ ನಡುವೆ, ಓದಲಿ, ವಿದ್ಯಾವಂತರಾಗಲಿ ಆದರೆ ‘ಲೋಕದ ಹೊಟ್ಟೆ ತುಂಬಿಸುವ ಚಿನ್ನದ ಮಕ್ಕಳಾಗಲಿ’ ಎಂಬ ಕವಿಯ ಆಶಯ ಎಲ್ಲ ರೈತ ಕುಟುಂಬಕ್ಕು ಮಾರ್ಗದರ್ಶಿ ಚಿಂತನೆಯಂತಿದೆ. ಇದೇ ಕವನದ ಕೊನೆಕೊನೆಯಲ್ಲಿ ತನ್ನ ಈ ಬೇಸಾಯದ ಕುಡಿಗಳು ನೂರಾಗಲಿ, ಸಾವಿರವಾಗಲಿ ಹಾಲುಕರೆವ ಹಸುಗಳು ಇಂತೆಯೇ ಅಗಣಿತವಾಗಲೆಂದು ಹಾರೈಸುವರು. ಮಣ್ಣಿನ ಮಕ್ಕಳ ಒಕ್ಕಲು ಹೊನ್ನಿನ ಒಕ್ಕಲಾಗ ಲೆಂಬ ಆಶಯ ಕವಿಯದು.

ಕಾಲಾತೀತವಾಗಿ ನಿಂತಿರುವ ರೈತ ಮಕ್ಕಳ ಸಮಸ್ಯೆಗಳನ್ನು ಚಿತ್ರಿಸಿ ಆಗಬೇಕಾದ ಬದಲಾವಣೆಯನ್ನು ಈ ಪದ್ಯದ ಮೂಲಕ ಸಂದೇಶಿಸಿದ್ದಾರೆ. ರೈತ ಕುಟುಂಬಗಳು ಈ ಕಸುಬುಗಳನ್ನು ಬಿಟ್ಟರೆ ಇನ್ಯಾವ ಉದ್ಯೋಗವೂ ಲೋಕಕ್ಕೆ ಅನ್ನ ನೀಡಲಾರದು. ವ್ಯವಸಾಯದ ಅತ್ಯಗತ್ಯತೆ ಈ ಮಕ್ಕಳ ಸುಧಾರಣೆಯನ್ನು ಆಗಬೇಕಾದ ಒಳ್ಳೆಯದನ್ನು ಹಾರೈಸ ಹೊರಟಿದ್ದಾರೆ.

ಶಿವಳ್ಳಿಯವರ ಎಲ್ಲ ಕವನಗಳು ರೈತ, ಗ್ರಾಮೀಣ, ಕೃಷಿ ಸಂಪ್ರದಾಯದ ಸುತ್ತಲೇ ಗಿರಕಿಹೊಡೆಯುತ್ತವೆ. ಲೇಖಕರಿಗೆ ಕವನಗಳ ರಚನೆಗೆ ವಸ್ತುಗಳ ಬರವೇನು ಇರಲಾರದು. ಆದರೆ ತನ್ನ ಬದುಕಿನ ಪರಿಸರದ ನೈಜವಾದ ಅನುಭವಗಳನ್ನು ಕವನದ ವಸ್ತುವಾಗಿಸಿ, ನೈಜತೆಯನ್ನು ವಾಸ್ತವತೆಯನ್ನು ತಮ್ಮ ಕವನಗಳ ಮೂಲಕ ಚಿತ್ರಿಸಿದ್ದಾರೆ, ಇದು ಅತ್ಯಂತ ಅನಿವಾರ್ಯವಾಗಿದೆ.

ಕನ್ನಡ ಶ್ರೇಷ್ಠ ಬರಹಗಾರರು ತಮ್ಮ ಕವನಗಳಲ್ಲಿ ಪರಿಸರ, ಪ್ರೇಮ. ವರ್ಗ, ವರ್ಣ. ಜಾತಿ, ಹಸಿವುಗಳನ್ನು ವಸ್ತುವನ್ನಾಗಿಸಿ ಕೊಂಡಿದ್ದಾರೆ. ತಮ್ಮ ನೂರಾರು ಕವಿತೆಗಳಲ್ಲಿ ರೈತನಿಗೆ ವಿರಳ ಸ್ಥಾನ ನೀಡಿದ್ದಾರೆ. ಆದರೆ ಶಿವಳ್ಳಿಯವರು ತಾವು ರಚಿಸಿರುವ ಕವನಗಳಲ್ಲಿ ಶೇಖಡ ೯೦ಕ್ಕಿಂತ ಹೆಚ್ಚು ನೇರವಾಗಿ ಅಥವಾ ಅತೀ ಸಮೀಪವಾಗಿ ಕೃಷಿಕನ ಅಥವಾ ಕೃಷಿಯ ಸಂಬಂಧಿತ ಕವನಗಳಾಗಿವೆ. ಈ ಮೂಲಕ ಕವಿ ಕುವೆಂಪುರವರು ರೈತನನ್ನು ‘ನೇಗಿಲಯೋಗಿ’ ಎಂದಿದ್ದರೆ. ಶಿವಳ್ಳಿಯವರು ‘ಮಣ್ಣೊಕ್ಕಲು’ ಎಂದು ಬಹು ಸಾಂಕೇತಿಕವಾಗಿ ಸಂಕೇತಿಸಿದ್ದಾರೆ.

ಹಳ್ಳಿ ಮಕ್ಕಳ ಬಗೆಗಿನ ಅವರ ಕಳಕಳಿ ‘ಬರ’ ಕವನದಲ್ಲಿಯೂ ಸಾಗುತ್ತದೆ. ‘ಬರ’ ಶಬ್ದ ರೈತನಿಗೆ ಭಯತರುವ ಪದವಾಗಿದೆ. ಕಾಲಕಾಲಕ್ಕೆ ವರುಣನ ಕೃಪೆಯಾದರೆ ಸಂತೋಷ. ಅವಕೃಪೆ ಅಥವಾ ಅತಿ ಯಾದರೆ ತೊಂದರೆ ತಪ್ಪಿದ್ದಲ್ಲ. ಈ ಕವನದಲ್ಲಿ ಸಕಾಲಕ್ಕೆ ಮಳೆಯಾದರೆ ರೈತರಿಗೆ ಬದುಕ್ಕೆಲ್ಲಾ ಬಹುತೇಕ

ಹಸನು (ಜೇಲಿ ಪಿಚಾರ ಜಿಟ್ಟು) ಜೇಳೆ ಜೊತೆಗೆ ಹುಳ್ಳಿ ಹುಲ್ಲು ಬೆಳೆದು ಜಾನುವಾರುಗಳಿಗೂ ಆಹಾರ ಸಿಕ್ಕುವುದು, ಮನೆಯಲ್ಲಿ ಹಾಲು, ಮೊಸರು, ಮಜ್ಜಿಗೆ, ತುಪ್ಪದ ಘಮಘಮ ಪರಿಮಳ ಎಂದು ಓದುಗನಿಗೆ ತುಪ್ಪದ ಸುವಾಸನೆಯನ್ನು ಪರಿಮಳಿಸಿದ್ದಾರೆ. ಇದೇ ಕವನದ ಉತ್ತರಾರ್ಧದಲ್ಲಿ ಮಳೆ ಬರದಿದ್ದರೆ 'ಬರ' ಇದರಿಂದ ರೈತ ಮಕ್ಕಳ ಬದುಕು ದುಃಖಭರಿತವಾಗುತ್ತದೆ ಎಂದು ವಾಸ್ತವವನ್ನು ಕವನದಲ್ಲಿ ಎಣೆದಿದ್ದಾರೆ.

> **"ಮಳೆರಾಯ ಮರೆಯಾಗಿ ಹೋದಾಗಿನ ಕಥೆ**
> **ಹೇಳಲೇನಿದೆ – ಬರೀವ್ಯಥೆ"**
>
> (ಬರ)

ಎಂದು ಮುಂದಿನ ಏನೆಲ್ಲಾ ಸಮಸ್ಯೆಗಳನ್ನು ಓದುಗನ ಕಲ್ಪನೆಗೆ ಬಿಟ್ಟಿದ್ದಾರೆ. ಆ ಮೂಲಕ ರೈತ-ರೈತೇತರ ಸಮಾಜದಲ್ಲಿನ ಸಮಸ್ಯೆಗಳು ಊಹಿತವಾಗುತ್ತದೆ. ಸಮಾಜದ ಪ್ರತಿ ಸದಸ್ಯನ ಮೇಲೆ ಬರದ ಪರಿಣಾಮ ಉಂಟಾಗೇ ತೀರುತ್ತದೆ. ಹೀಗಾಗಿ ಮಳೆಯ ಅನಿವಾರ್ಯ, ಮಳೆ ನಿಲ್ಲಲು, ಕಡಿಮೆಯಾಗಲು ಕಾರಣ ಮಾನವನ ದುರಾಸೆ, ಕೈಗೊಳ್ಳಬೇಕಾದ ಕ್ರಮ, ಎಚ್ಚರಿಕೆಗಳನ್ನು ಲೇಖಕರು ನಮ್ಮ ಊಹೆಗೆ ಬಿಡುವರು.

'ಬರ' ಕವನದಲ್ಲಿ ಬಾರದ ಮಳೆಯ ಆತಂಕದ ಚಿತ್ರಣ. ಬರುವ ಮಳೆಯಿಂದ ಉಂಟಾಗುವ ಸಂತಸದ ತೌಲನಿಕ ಚಿತ್ರಣವಿದೆ. 'ಕೆರೆ ಹೊಡೆಯಿತು – ಎದೆ ಬಿರಿಯಿತು' ಕವನದಲ್ಲಿ ಬಂದ ಮಳೆಯ ನೀರಿನ ಸಂಗ್ರಹ ಮಾಡಿಕೊಂಡಿರುವ ರೈತ, ಆ ಕೆರೆ ಹೊಡೆದು ಹೋದಾಗ ಉಂಟಾಗಲಿರುವ ಮತ್ತೊಂದು ಬರ್ಬರ ಬದುಕನ್ನು ಬಿಡಿಸಿದ್ದಾರೆ.

ನೀರು ಮತ್ತು ರೈತನ ನಡುವಿನ ಸಂಬಂಧ, ದೇಹ ಮತ್ತು ಉಸಿರಿನಂತೆ. ಉಸಿರಿಲ್ಲದ ದೇಹ ಹೆಣವಾಗುತ್ತದೆ, ದೇಹವಿಲ್ಲದ ಉಸಿರಿಗೆ ಅಸ್ತಿತ್ವವೇ ಇಲ್ಲ. ಅಂತೆಯೇ ನೀರು ಮತ್ತು ಕೃಷಿ ಸಂಬಂಧ. ಹಾಗಾಗಿ ಕೆಂಪೇಗೌಡರು ಕೃಷಿಯ ಉಸಿರಾಗಿರುವ ನೀರಿನ ವಿವಿಧ ರೂಪಗಳನ್ನು ಚಿತ್ರಿಸುವ ಪ್ರಯತ್ನ ಮಾಡುತ್ತಿದ್ದಾರೆ. 'ಕೆರೆ ಒಡೆಯಿತು-ಎದೆ ಬಿರಿಯಿತು' ಕವನ ಕೆರೆ ಒಡೆದು ಸಂಗ್ರಹಿಸಿದ ನೀರು ಪೋಲಾಗುವುದರ ಪರಿಣಾಮವನ್ನು ಕುರಿತಾದ್ದಾಗಿದೆ.

ಕೆರೆಯ ನೀರು ಹರಿಯುವಂತೆಯೇ ಹಾಳಾಗುತ್ತಿರುವ ಆ ನೀರನ್ನು ಕಂಡ ರೈತನ ಕಣ್ಣಲ್ಲೂ ನೀರು ಚಿಮ್ಮುತ್ತದೆ, ಎದೆ ಬಿರಿಯುವುದರಿಂದ ಕಣ್ಣೀರು ಹರಿದರೆ, ಕೆರೆಯ ಬಿರುಕಿನಿಂದ ಕೆರೆ ನೀರು ಎಂಬ ಸಂತುಲಿತತೆ ಮನೋಜ್ಞವಾಗಿದೆ. ಹಾಳಾದ ನೀರಿನ ಪರಿಣಾಮ ಈ ಕಣ್ಣೀರಲ್ಲೆ ಕೈತೊಳೆಯಬೇಕಾಗಿದೆ ಎಂದಿದ್ದಾರೆ. ಮುಂದೆ ಉರಿಯ ಧಗೆಯಿಂದ ಪಶು ಆಹಾರವೂ ಕರಕಲಾಗಿ ಅಂಬಾ ಎನ್ನುವ ದನಗಳ ಧ್ವನಿ ಎದೆಯನ್ನು ಹಿಂಡುತ್ತದೆ. ಹಳ್ಳಿಯಲ್ಲಿ ಈ ಕಠಿಣ ಸಂದರ್ಭದಲ್ಲಿ ಬದುಕನ್ನು ಸವೆಸುವುದು ಕಠಿಣವಾಗಿದೆ. ಎಂದು ಹೊತ್ತು ಮುಳುಗುವುದೋ, ನಾಳೆ ಬರುವುದೋ ಎಂಬ ಭಾರದ ಬದುಕು ಹಳ್ಳಿಗ ರೈತನದಾಗಿದೆ.

ಈ ಕವನ ನಾಲ್ಕು ಸಾಲುಗಳ ನಾಲ್ಕು ಪದ್ಯಭಾಗಗಳಲ್ಲಿ. ಅತ್ಯಂತ ಸರಳ ಪದಗಳಲ್ಲಿ ರಚನೆಗೊಂಡಿದೆ. ರೈತ, ರೈತನ ಜಾನುವಾರು, ಮಳೆ, ಕೆರೆಗಳಿಂದ ಹೇಗೆ ಆಶ್ರಿತವಾಗಿದೆ ಎಂಬುದನ್ನು ಈ ಪದ್ಯ ಬಿಂಬಿಸಿದೆ. ಎರಡು ಪಾದಗಳ ಅಂತ್ಯದಲ್ಲಿ ಉಚಿತವಾದ ಅಂತ್ಯಪ್ರಾಸ ಸಹಜವಾಗಿ ಮೂಡಿಬಂದಿದೆ. ಈ ಪ್ರಾಸವು ಪೇಲವವಾದ ಕವನಕ್ಕೆ ಹೊಸ ಕಾಂತಿಯನ್ನು ತಂದಿದೆ.

'ಕೃಷಿಕ ಭಾರತ' ಇವರ ಮತ್ತೊಂದು ರೈತಪರ ಗೀತೆಯಾಗಿದೆ. ಈ ಕವನ ರೈತ ಬದುಕಿನ ರೂಪಕದಂತಿದೆ. ಲೋಕದ ಜಂಜಡಗಳಿಂದ ದೂರವಿರುವ ಈತ ತನ್ನ ಪಾಡಿಗೆ ತಾನು ಉಳುಮೆಯಲ್ಲಿ ತೊಡಗಿರುತ್ತಾನೆ. ಹಗಲಿರುಳೆನ್ನದೆ ಎತ್ತುಗಳ ಹಿಂದೆ ನೇಗಿಲು ಹಿಡಿದು ದುಡಿಯುವ ಈತನಿಗೆ ಎತ್ತುಗಳ ಸಂಗಾತಿಗಳು. ಸಂತಸದಲ್ಲಿ, ಕೋಪದಲ್ಲಿ ಅವುಗಳಿಗೆ ಬಯ್ಯುತ್ತಾ, ಹುರಿದುಂಬಿಸುತ್ತಾನೆ. ಈ ಕರ್ಮಯೋಗಿಯ ತಪೋಫಲ ಮನುಕುಲಕ್ಕೆ ಅನ್ನ. ಇವನು ಫಲವನ್ನು ಭಗವಂತನ ಕೃಪೆ ಎಂದು ನಿರಪೇಕ್ಷೆಯಂತೆ ದುಡಿಯುತ್ತಾನೆ.

"ಮಾಧವನೆಮ್ಮನು ಕೈಬಿಡದೆ ಪೊರೆ

ಉಳುತ್ತಾ ಹಾಡುತ್ತಾನೆ'

(ಕೃಷಿಕ ಭಾರತ)

ಈತನು ಹಾಡು ಸಂತಸಕ್ಕು, ದುಃಖಕ್ಕೂ ಸಮಾನವಾಗಿದೆ. ಹೊಲದಲ್ಲಿ ಉಳುವಾಗಿನ ಇವನ ಪಾಡಿನ ಹಾಡನ್ನು ಕೇಳುವವರ್‍ಯಾರು, ಬೆಟ್ಟದ ಮೇಗಳ ಕಲ್ಲದೇವರು ಕೇಳಬಹುದೇನೋ ಎಂಬ ಮಾರ್ಮಿಕತೆ ಕವನ ಕಾರನದಾಗಿದೆ.

ವೈವಿಧ್ಯಮಯವಾದ ಬೆಳೆಗಳನ್ನು ಬೆಳೆಯುವ. ಈ ಫಸಲು ಭೂಮಾತೆಗೆ ಆತ ಮಾಡಿದ ಅಲಂಕಾರ. ರಾಗಿ, ಜೋಳ, ಭತ್ತ, ಕಬ್ಬು. ಹೂಗಳಿಂದ ಭೂತಾಯಿ ಕಂಗೊಳಿಸುವಳು, ವಿವಿಧ ಹಣ್ಣುಗಳ ಫಸಲು ಆಕೆಗೆ ಮಾಡಿದ ನೈವೇದ್ಯ. ಬೆಳೆದ ಬೆಳೆಗಳ ರಾಶಿಯನ್ನು ನೋಡಿ ಹಿರಿಹಿರಿ ಹಿಗ್ಗುತ್ತಾನೆ. ಈ ಆನಂದ ಕ್ಷಣಕಾಲ ಮಾತ್ರ, ತನ್ನ ಬೆಳೆಯನ್ನು ಮಾರುವಾಗ ಮತ್ತದೇ ಭೂಕಂಪ. ರೈತನಿಗೆ ವೇದಿಕೆಯಲ್ಲಿ ನಿಂತು ಹೊಗಳುವ ಜನ ಆತನ ಕಷ್ಟಗಳಿಗೆ ಸ್ಪಂದಿಸರು. ಮಾರಾಟಗಾರರ, ಮಧ್ಯವರ್ತಿಗಳ ನಿರಂತರ ಶೋಷಣೆ ಇದರ ಪರಿಣಾಮ ಮತ್ತದೇ ಸಾಲಭಾರ. ಇದನ್ನೇ ಕವಿ ಮಾರ್ಮಿಕವಾಗಿ ಹೀಗೆ ಹೇಳಿದ್ದಾರೆ.

"ಇವನ ಬೆವರಿಗೆ,

ಬೆಲೆ ಕಟ್ಟುವವರು ಯಾರೋ.................

ಭಾಗ್ಯವಂತರಾಗುವವರು ಯಾರೋ.................

(ಕೃಷಿಕ ಭಾರತ)

ಒಟ್ಟಾರೆ ಕವನ ಒಂದು ರಗಳೆಯ ಕಾವ್ಯದಂತೆ ರಚಿತವಾಗಿದೆ. ಔಚಿತ್ಯಪೂರ್ಣಸಾಂಕೇತಿಕ ಶೀರ್ಷಿಕೆಯನ್ನೊದಿದೆ. 'ಅಂತೂ ಇಂತೂ ಕುಂತಿ ಮಕ್ಕಳಿಗೆ ವನವಾಸ' ಎಂಬ ಗಾದೆ ಮಾತಿನಂತೆ ಕೃಷಿಕನಿಗೆ ಎಂದೂ ಸಂತೋಷ ದಿನಗಳು ಬರಲಿಲ್ಲ. ಉಳುವಾಗಿನ, ಬಿತ್ತುವಾಗಿನ ಬೆಳೆ ಕಂಡಾಗಿನ, ರಾಶಿನೋಡಿದಾಗಿನ

ಸಂತೋಷ ಬೆಲೆಕಟ್ಟುವಾಗ ಇರದಾಯಿತು. ಇದು ಕೃಷಿಕ ಭಾರತ. ಒಂದು ರೀತಿ ಮಹಾಭಾರತಕ್ಕಿಂತ ನೋವಿನ ಭಾರತದ ರೈತನ ಕಥೆ.

ಭೂಮಿಯನ್ನು ತಾಯಿ, ಕರುಣಾಮಯಿ, ಕ್ಷಮಯಾ ಧರಿತ್ರಿ ಎಂದೆಲ್ಲ ಕರೆಯುವ ಭಾರತ ಮಾತೆಯ ಮಕ್ಕಳಲ್ಲಿ. ರೈತ ಹಿರಿಯ ಮಗ. ಆಕೆಯ ಸಾನಿಧ್ಯ ಹಿತ. ಆಕೆಯ ಒಡನಾಟ ಹಿಂಬಿರಿ ಹಿಗ್ಗು. ಆಕೆಯು ನೀಡುವ ಫಲ ಅಮೃತಕ್ಕೆ ಸಮ ಆದ್ದರಿಂದಲೇ ಜನಪದ ಬೆಳಗೆದ್ದು ಈಕೆಯನ್ನು ನೆನೆದಿರುವುದು. 'ಹೊತ್ತಾರೆ ನಾನೆದ್ದು ಯಾರ್ಯಾರ ನೆನೆಯಾಲಿ. ಎಳ್ಳು ಜೀರಿಗೆ ಬೆಳೆಯೋಳ' ಎಂಬ ರೈತನ ಮಕ್ಕಳ ನಾಡಿಮಿಡಿತದ ಮಾರ್ದನಿಯೇ 'ಭೂಮಾತೆಯ ಕರುಣೆ' ಕವನವಾಗಿದೆ.

ಹದಿನೆಂಟು ಸಾಲಿನ ಈ ಕವನ ಹದಿನೆಂಟು ಪರ್ವದ ಮಹಾಕಾವ್ಯದಂತೆ. ರೈತ ಬದುಕಿನ ಕೃಷಿ ಚಟುವಟಿಕೆಯ ಸಮಗ್ರ ಚಿತ್ರಣ. ಶೈಶವದಿಂದ ಮುದಿತನದ ಬದುಕಿನ ಆದಿ ಅಂತ್ಯಗಳು ಅವರ ನಡುವಿನ ಹಂತಗಳಂತೆ ಉತ್ತು ಬಿತ್ತುವುದರಿಂದ ಬೆಳೆದು ರಾಶಿ ಮಾಡುವವರೆಗಿನ ವಿವಿಧ ಹಂತಗಳನ್ನು ಈ ಕವನದಲ್ಲಿ ಎಣೆದಿದ್ದಾರೆ. ಹಸಮಾಡಿ, ಹದಮಾಡಿದ ಭೂಮಿಗೆ ಬಂಗಾರದ ಬೀಜ ಬಿತ್ತುವುದೇ ಒಂದು ಚಂದ. ಅದು ನೋಡು ನೋಡುತ್ತಿದ್ದಂತೆ ಚಿಗುರೊಡೆದು ಹಳದಿ ಹಸಿರಾಗಿ ತಂಪೆರಚುವ ಪೈರಾಗುವುದು ಮೊದಲ ಹಂತ. ಈ ಬೀಜ ಪೈರಾಗುವಲ್ಲಿ ಭೂತಾಯಿಯ ಕರುಣಾಫಲವಿದ್ದೇ ಇದೆ. ಬೆಳೆದು ಹಾಲ್ದುಂಬಿದ ಬೆಳೆ ಕಾಯುವುದು. ಬರುವ ಹಕ್ಕಿ ಹಿಂಡುಗಳನ್ನು ಸಂತೋಷದಿಂದ ಹಾ.... ಹೋ ಎಂದು ಓಡಿಸುವುದು ಮತ್ತಷ್ಟು ಚಂದ. ಈ ಹಂತದಲ್ಲಿ ಬೆಳೆದ ಮಕ್ಕಳನ್ನು ನೋಡಿ ಸಂತೋಷಪಡುವ ತಂದೆ-ತಾಯಿಗಳಂತೆ. ಬೆಳೆಯನ್ನು ನೋಡಿದ ರೈತನಿಗೆ ಉಲ್ಲಾಸ. ಬೆಳೆದ ಬೆಳೆಯನ್ನು ಕುಯ್ದು, ಮದೆಹಾಕಿ, ಒಕ್ಕಲುಮಾಡಿ ರಾಶಿಮಾಡುದಾಗ ಮಹದಾನಂದ. ಈ ಆನಂದವನ್ನು ಆತ ಭೂತಾಯಿಗೆ ನಮಿಸುವುದರ ಮೂಲಕ ಸುಖಿಸುತ್ತಾನೆ. ಈ ಎಲ್ಲಕ್ಕೂ ಭೂತಾಯಿಯ ಕರುಣೆಯೇ ಕಾರಣ ಎನ್ನುತ್ತಾರೆ.

'ಮುರಲಿಗಾನ' ಕವನ ಮತ್ತೊಂದು ವಿಭಿನ್ನ ಶೈಲನಿಕತೆಯ ಕವನವಾಗಿದೆ. ರಾಧೆಯು ಸದಾ ಚಿತ್ತಚೋರನ ಗುಂಗಿನಲ್ಲಿರುವುದು. ಈ ನಿಮಿತ್ತವಾಗಿ ರಾಧೆಗೆ ರಮಣನ ಸಾನಿಧ್ಯ ದೊರತೇ ದೊರೆಯುತ್ತದೆ. ಅಂದರೆ ಕಾಯ-ವಾಚಾ-ಮನಸಾ ಒಂದು ಕ್ರಿಯೆಯಲ್ಲಿ ತೊಡಗಿದವರಿಗೆ ಅವರ ಬಯಕೆಯ ಫಲ ಸಿದ್ಧಿಸುತ್ತದೆ. ರಾಧೆಗೆ-ಮಾಧವ ದೊರೆತಂತೆ. ಇದಿಷ್ಟು ಪದ್ಯದ ಪೂರ್ವಾರ್ಧ. ಉತ್ತರಾರ್ಧವು ಮತ್ತದೇ ಕೆಂಪೇಗೌಡರ ವಿಶೇಷವಾದ ರೈತ ಬದುಕಿನ ಚಿತ್ರಣವಿದೆ. ಆದರೆ ರೈತರ ನೇರ ಚಿತ್ರಣದ ಬದಲು, ರೈತರ ಶೋಷಣೆಗೆ, ಸಂಕಷ್ಟಕ್ಕೆ ಕಾರಣರಾದವರನ್ನ ಟೀಕಿಸಿದೆ. ಕೆ.ಎಸ್.ನರಸಿಂಹಸ್ವಾಮಿಯವರ 'ಬರಿಗೊಡಗಳಿಗೆ ಸಮಾಧಾನ' ಕವಿತೆಯಂತೆ ರಚಿತವಾಗಿದೆ. ಇಲ್ಲಿ ನೇರವಾಗಿ ರಾಜಕಾರಣಿಗಳನ್ನೇ ಉಲ್ಲೇಖಿಸಿದ್ದಾರೆ. ಅವರ ಬರಿಯ ಆಶ್ವಾಸನೆಗಳನ್ನು ಖಂಡಿಸಿದ್ದಾರೆ.

"ಪೊಳ್ಳು ಆಶ್ವಾಸನೆಗಳ ಬೀಜ ಬಿತ್ತಿ

ಮೊಸಳೆ ಕಣ್ಣೀರ ಮಳೆ ಸುರಿಸಿ

ಬೆಳೆ ಬಂತು ಬೆಳೆ

ಎಂದು ಕೂಗಿದರು

ಒಣಭೂಮಿಯ ಸಮೃದ್ಧ ಕಳೆ

ನಮ್ಮ ನಾಯಕರು"

(ಮುರಲಿ ಗಾನ)

ಹೃದಯಾಂತರಾಳದ ಕಣ್ಣೀರಾಗದ ಮೊಸಳೆ ಕಣ್ಣೀರು ಹಾಕುವ ನಾಯಕರು. ಇವರು ಬೆಳೆಯ ನಡುವಿನ ಕಳೆಯಂತೆ ನಿಷ್ಪ್ರಯೋಜಕರು, ನಯವಂಚಕರು. ಎಂಬ ನೇರ ನುಡಿ ಲೇಖಕರದು.

ಕೆಂಪೇಗೌಡರ ಕವನಗಳಲ್ಲಿ ಕೆಲವು ಕವನಗಳು ವಿಶೇಷ ರೀತಿಯ ರಚನೆಗಳಾಗಿವೆ. ಎರಡು ಚಿತ್ರಣವನ್ನ ರೂಪಿಸುವುದು, ಅವೆರಡರಲ್ಲಿನ ಸಾದೃಶ್ಯ ವೈದೃಶ್ಯಗಳನ್ನ ತೌಲನಿಕರಿಸುವುದು. ಈ ತಂತ್ರದಲ್ಲಿ ರಚನೆಗೊಂಡಿರುವ ಕವನ. 'ನಿರಂತರ' ಇದೊಂದು ಶೋಷಿತರ ದನಿಯಾಗಿ ರಚನೆಗೊಂಡಿರುವ ಕವನ. ಶೋಷಣೆ ನಿರಂತರ ಎಂಬುದು ಇಲ್ಲಿಯ ಸಂದೇಶ. ತಲತಲಾಂತರದಿಂದ ನಿರಂತರವಾಗಿ ದುಡಿಯುವ ವರ್ಗ ದುಡಿಯುತ್ತಲೇ ಇದ್ದರೆ, ವಿಲಾಸಿ ಜೀವನವನ್ನು ನಿರಂತರವಾಗಿ ಒಂದು ವರ್ಗ ಅನುಭವಿಸುತ್ತಿದೆ. ಈ ಕವನದಲ್ಲಿ ಕೂಲಿಕಾರ್ಮಿಕ ಮತ್ತು ಕೃಷಿಕರ ದುಡಿಮೆಯ ಜೀವನವನ್ನ ಚಿತ್ರಿಸಿದೆ.

ಕಷ್ಟಗಳು 'ನಿರಂತರ' ಎಂಬುದು ಇಲ್ಲಿಯ ವಸ್ತು. ಒಡವ ತನ್ನ ಮಗುವನ್ನ ಬಟ್ಟೆಯ ತೊಟ್ಟಿಲಲ್ಲಿ ಕಟ್ಟಿ ಮಲಗಿಸಿದರೆ, ಕಲ್ಲುಕುಟಿಕರಂತ ಕೂಲಿಯವನು ಮನೆಯೂ ಇಲ್ಲದೆ ಮರದ ಟೊಂಗೆಗೆ ಸೀರೆಯ ತೊಟ್ಟಿಲು ಕಟ್ಟಿ ಮಗುವನ್ನು ಮಲಗಿಸುವನು. ನಂತರ ತನ್ನ ಕೆಲಸದಲ್ಲಿ ತೊಡಗುವನು. ಕವಿ ಈ ಚಿತ್ರಣವನ್ನು ಕಂಡು ಮಮ್ಮಲ ಮರಗಿ 'ಮಲಗಿರುವ ಮಗುವ ನೋಡಲ್ಲಿ' ಎಂದಿದ್ದಾರೆ. ಬಿಸಿಲು ಮಳೆ ಎನ್ನದೆ, ಮಣ್ಣು ಕಲ್ಲೆನದೆ, ಬೀದಿಯ ಕಂದಮ್ಮಗಳ ಕಥೆ ಇದು. ಮೂರು ಭಾಗದ ಈ ಪುಟ್ಟ ಕವನದ ನಂತರದ ಪಾದ ನಿರ್ಗತಿಕ ಜನರ ಮುಂದಿನ ತಲಮಾರಿನ ಕಥೆಯನ್ನು ತಿಳಿಸುತ್ತದೆ.

"ರಸ್ತೆಯಂಚಿನಲಿ

ಜಲ್ಲಿ ಕಲ್ಲು ಒಡೆವ ತಾಯಿ-ತಂದೆಯ

ಕೈಸೋಲುವ ವೇಳೆಗೆ,

ಬಟ್ಟೆ ತೊಟ್ಟಿಲು ಮಗು ಬೆಳೆದು

ದೊಡ್ಡದಾಗುತ್ತದೆ

ಹಿಡಿಯಲು ಸುತ್ತಿಗೆ"

(ನಿರಂತರ)

ಉಡಲು ಬಾರದ ಸವೆದ ಬಟ್ಟೆಯೇ ಇಲ್ಲಿನ ತೊಟ್ಟಲು. ಶ್ರೀಮಂತರ ಮನೆಯ ಬಂಗಾರ, ಬೆಳ್ಳಿ, ಕಬ್ಬಿಣ, ಮರದ ಚಂದದ ತೊಟ್ಟಿಲುಗಳಿಲ್ಲ, ತಾಯಿ-ತಂದೆಯ ಸೀರೆಯೋ, ಪಂಚೆಯೋ ಆ ಮಕ್ಕಳಿಗೆ ತೊಟ್ಟಿಲಾಗಿದೆ. ಎಚ್ಚರಾದಾಗ ತಂದೆ-ತಾಯಿಯ ಕೆಲಸಗಳನ್ನು ಗಮನಿಸುತ್ತಾ ತಾನು ಹೊಟ್ಟೆಯಲ್ಲಿಯೇ ಅಭಿಮಾನ್ಯು ವಿದ್ಯೆಕಲಿತಂತೆ ತೊಟ್ಟಿಲಲ್ಲೇ ಕೆಲಸ ಕಲಿಯುತ್ತದೆ.

ಪದ್ಯದ ಕೊನೆಯದು ಮೂರನೇ ಭಾಗ. ಇಲ್ಲಿ ರೈತ ತಲೆಗೆ ಕೈಕೊಟ್ಟು ಭಗವಂತನಲ್ಲಿ ಮೊರೆಯಿಡುವನು. ಆಕಾಶವನ್ನು ನೋಡಿ. ನಿಟ್ಟುಸಿರು ಬಿಡುವನು. ಕಾಲಕಾಲಕ್ಕೆ ಮಳೆಯಾಗುವಂತೆ ಮೊರೆಯಿಡುವನು. ಕಾಲಕಾಲಕ್ಕಾಗುವ ಮಳೆಯಿಂದ ಬೆಳೆಬಂದು. 'ಅನ್ನದೇವರು' ಸಿಗಲಿ ಎಂದು ವರುಣನನ್ನು ಬೇಡುತ್ತಿದ್ದಾನೆ. ಇಲ್ಲಿ ಕೂಲಿಕಾರ್ಮಿಕ ಮತ್ತು ರೈತರು ಸಮಾನ ದುಃಖಿಗಳು. ಅವರಿಬ್ಬರ ಮಕ್ಕಳು ತಮ್ಮಂತೆಯೇ ನಿರಂತರ ಶೋಷಿತರಾಗುವರೆಂಬ ಚಿತ್ರಣವಿದೆ.

'ರಾಜಕಾರಣಿಗಳು' ಎಂಬ ಪದ್ಯವು ಕಿರುಗವನ. ೮ ಸಾಲುಗಳ ಈ ಕವಿತೆ ಹನಿಗವನದಂತಿದೆ. ರೈತನನ್ನು ಹಲವು ವಿಶೇಷಣಗಳಿಂದ ಬಣ್ಣಿಸುವ ರಾಜಕಾರಣಿ, ಛತ್ತ. ರಾಗಿ ಬೆಳೆದು ಅನ್ನಹಾಕುವವನಿಗೆ ಧೂಳು ಮಣ್ಣು ಹಾಕುವವರು ಇವರು 'ಖದೀಮರು' ಎಂಬ ಪದ ಬಳಸುವುದರೊಂದಿಗೆ ಈ ಕವಿತೆ ಕೊನೆಗಾಣುವುದು. ಕೆಂಪೇಗೌಡರ ರೈತಪರ ವಾಗ್ಝರಿ ಮುಂದುವರೆದಿದೆ. ಹೀಗೆ ಮುಂದೆ 'ಕೂಗು' ಕವನದಲ್ಲಿ ಮೂಕ ಪ್ರಾಣಿಗಳ ಮೌನಕೂಗು ಮನಕರಗಿಸುತ್ತದೆ. ಹಗಲೆಲ್ಲಾ ತನ್ನ ಒಡೆಯನಿಗಾಗಿ ಎತ್ತುಗಳು ದುಡಿಯುತ್ತವೆ. ಗೇದು ಸುಸ್ತಾಗಿ ಬಂದಾಗ ಗೊಂತಿನಲ್ಲಿ ಸರಿಯಾದ ಹುಲ್ಲಿಲ್ಲದೆ ಕಂಗಾಲಾಗುತ್ತವೆ. ಕುಡಿಯಲು ನೀರೂಸಹ ಇಲ್ಲ. ಆಹಾರ ನೀರಿಲ್ಲದೆ ಪ್ರೀತಿಯಿಂದ ಮೈಸವರುವವರೂ ಇಲ್ಲ. ತನ್ನ ಕೊಟ್ಟಿಗೆಯಲ್ಲಿ ಎಲ್ಲೆಲ್ಲೂ ಸಗಣಿ, ಗಂಜಳ, ಕಸಗಳ ರಾಶಿ. ಕಸಗಳ ಮೇಲೆ ನೊಣಗಳ ದಾಳಿ. ಕುದುರೆ ನೊಣಗಳ ಕಡಿತವನ್ನು ಸಹಿಸಲಾರದೆ ಅಂಬಾ ಎನ್ನುವ ಕೂಗು. ಕಣ್ಣಿನಿಂದ ಧಾರಾಕಾರ ಕಣ್ಣೀರು. ಮೂಕ ಪ್ರಾಣಿಯ ತಲ್ಲಣಗಳನ್ನು ಈ ಭಾಗದಲ್ಲಿ ಲೇಖಕರು ಚಿತ್ರಿಸಿದ್ದಾರೆ.

ಬೇಸಾಯ ಬಗೆಗೆ ಗಾದೆ ಮಾತಿಂದಿದೆ 'ನಾನು ಸಾಯ, ನೀನು ಸಾಯ, ಮನೆಮಂದಿಯೆಲ್ಲಾ ಸಾಯ' ಎಂಬುದು ವ್ಯವಸಾಯದ ಅರ್ಥ. ಬೇಸಾಯಕ್ಕಾಗಿ ಇಡೀ ಕುಟುಂಬ, ಅವನು ಸಾಕಿದ ಪ್ರಾಣಿಗಳಾದಿಯಾಗಿ ದುಡಿದರು ಸರಿಯಾಗಿ ಸಾಗದ ಬದುಕಿನ ಬಂಡಿ. ಶಿವಳ್ಳಿ ಕೆಂಪೇಗೌಡರು ತಮ್ಮ ಅನ್ನದಾತ ಕವನದ ಮೂಲಕ ರೈತನ ಪರಿಪಾಟಲು. ಆರ್ಥಿಕ ಸಂಕಷ್ಟ, ಸದಾ ಚಿಂತೆ. ಇಂತಹ ಚಿತ್ರಣವೊಂದನ್ನು ಈ ಕವನದಲ್ಲಿ ಬಿಡಿಸಿದ್ದಾರೆ. ಇಡೀ ಮಾನವ ಕುಲದ ಹಸಿವನ್ನು ನೀಗುವವನಿಗೆ ಹಸಿವು ಮಾನವ ಕುಲಕ್ಕೆ ಬಟ್ಟೆಗೆ ಬೇಕಾದ ಕಚ್ಚಾವಸ್ತು ಕೊಡುವವ ಬೆತ್ತಲೆ ನಿಂತಿದ್ದಾನೆ. ಎಲ್ಲರ ಪ್ರಾಣ ಕಾಪಾಡುವವನ ಪ್ರಾಣತ್ಯಾಗವಾಗಿದೆ. ಇಂತಹ ವಸ್ತುವನ್ನು ಈ ಕವನವೊಂದಿದೆ.

ರೈತ ಸಲಕರಣೆಗಳು ಹಾರೆ, ಗುದ್ದಲಿ. ಕುಡುಗೋಲು ಇವೇ ಆತನ ಒಡನಾಡಿಗಳು. ಶ್ರೀಮಂತನಂತೆ ಕಾರು ಬಂಗಲೆಗಳಲ್ಲ. ವಿಲಾಸಿ ವಸ್ತುಗಳಲ್ಲ. ಇವನು ಸಾಕಿದ ಪಶು, ಪಕ್ಷಿಗಳೇ ರೈತನ ಸ್ನೇಹಿತರು. ಆಡು, ಕುರಿ, ಹಸು, ಎಮ್ಮೆ ಕೋಳಿಗಳೇ ಸ್ನೇಹಿತರು, ಈ ಮೂಕ ಜೀವಿಗಳೊಂದಿಗೆ ಅದೆಷ್ಟೋ ಸಲ ತನ್ನ ಭಾವನೆಯನ್ನು ಹಂಚಿಕೊಂಡಿರುವುದುಂಟು. ಜಮೀನಿನ ಬೆಳೆನೋಡಿ ಎದೆಯಲ್ಲಿ ಒಂದು ರೀತಿಯ ಬೇನೆ. ಅವು ಒಣಗಿವೆ ತಾನು ಬಿತ್ತಿ ಬೆಳೆದ ಫಸಲು. ಸ್ವಂತ ಮಕ್ಕಳಂತೆ ರೈತನಿಗೆ ಅವುಗಳು ಒಣಗಿದರೆ ತನ್ನ ಮಕ್ಕಳು ಸೊರಗಿದಂತೆ. ಆದ್ದರಿಂದ ಸೊರಗಿದ ಬೆಳೆನೋಡಿ ನೊಂದನು. ಸಂಸಾರ, ವ್ಯವಸಾಯಕ್ಕಾಗಿ ಮಾಡಿದ ಸಾಲಗಳು ನಿರಂತರವಾಗಿ ಬೆಳೆಯುತ್ತಿದೆ. ಬಡ್ಡಿ, ಚಕ್ರಬಡ್ಡಿಯಾಗಿ ಬೆಳೆಯುತ್ತಿರುವ ಸಾಲದ ಋಣ

ತೀರಿಸಲಾಗದ ದುಸ್ಥಿತಿ ರೈತನದು. ರೈತನ ಮನೆಯ ಬಾಗಿಲ ಮೇಲೆ ಬರೆದಿರುವ 'ನಾಳೆ ಬಾ' ಬರಹವು ಆತನನ್ನೇ ಅಣಕಿಸುತ್ತಿದೆ.

"ಮುಂಬಾಗಿಲ ಮೇಲೆ ಬರೆದ
ನಾಳೆ ಬಾ ವಿನಂತಿ
ಅನಿಷ್ಟ ಪರಂಪರೆಗೋ?
ಕೈಸಾಲ ಕೊಟ್ಟವರಿಗೋ?

(ಅನ್ನದಾತ)

ಬಾಗಿಲ ಬರಹ ಅಣಕಿಸುತ್ತದೆ. ಹಾಗೇ ಸ್ಮೃತಿ ಪಟಲದಿಂದ ಮೇಲಿನ ಸಾಲುಗಳು ರೈತನಲ್ಲಿ ಮೂಡಿ ಬಂದಂತಿದೆ. ಪ್ರಕೃತಿಗೆ ಕನಿಷ್ಠ ಮಳೆಗಾಲ, ಚಳಿಗಾಲ, ಬೇಸಿಗೆಗಳಿವೆ. ಆದರೆ ರೈತನಿಗೆ ಮಾತ್ರ ಎಂದಿಗೂ ಉರಿಯ ಬೇಸಿಗೆಯಾಗಿದೆ. ತಂಪಾದ ಮಳೆಯ ಹನಿಗಳ ಹಿತದ ದಿನವನ್ನು ಅನುಭವಿಸಲೇ ಇಲ್ಲ. ಹಿತವಾದ ಬೆಚ್ಚಗಿನ ಚಳಿಗಾಲವು ಬಾಳಿನಲ್ಲಿ ಬರದೆ. ಬಾಳೆಲ್ಲ ಬೆಂಕಿಯ ಬಿಸಿಲಿನಂತಾಗಿದೆ. ಒಂದೆಡೆ ಬೆಳೆದ ಬೆಳೆ ಬಾಡಿಹೋಗಿದೆ, ಸಾಲಕ್ಕೆ ಬಡ್ಡಿ ಬೆಳೆಯುತ್ತಿದೆ. ಈ ನಡುವೆ ಸಾಲಗಾರರ ಕಾಟ, ಬ್ಯಾಂಕಿನ ನೋಟೀಸು ಮತ್ತೊಂದು ಕಾಟವಾಗಿದೆ. ಈ ಒತ್ತಡಗಳಿಂದ ನಿರಂತರ ಜಾಟ ಏಟು ಬೀಳುತ್ತಲಿದೆ. ಚಂಚಲವಾದ ಮನಸ್ಸು ಅಸ್ವಸ್ಥತೆಯಿಂದ ಕೂಡಿದೆ. ಬೆಳಿಗ್ಗೆ ಎದ್ದರೆ ಸಾಕು, ಆಕಾಶವನ್ನು ನೋಡಿ ಮನದಲ್ಲಿ ಮಳೆಯ ಆಹ್ವಾನ.

"ನೆಲ ಮುಗಿಲು ಒಂದು ಮಾಡುವಂತೆ
ಸುರಿವ ಮಳೆಗಾಗಿ ಹಂಬಲ" –

(ಅನ್ನದಾತ)

ಸಮಸ್ಯೆಗಳು ಸರಣಿಯೋಪಾದಿ ಪುಂಖಾನು ಪುಂಖವಾಗಿ ಆವರ್ತವಾಗುತ್ತಿದೆ ವಿನಃ ಅವು ಕೊನೆ ಗಾಣು ತ್ತಿಲ್ಲವಾಗಿವೆ. ಬೆಳೆದ ಬೆಳೆಗೆ ಮಳೆ ಇಲ್ಲದೆ ಒಣಗಿದರೆ. ಸಾಲಬಾದೆ ಇನ್ನೊಂದೆಡೆ, ಸಾಲಿಗನ. ಬ್ಯಾಂಕಿನ, ಕಾಟಗಳ ನಡುವೆ ಬೆಳೆಹಾನಿಯ ಭಯ. ಈ ಎಲ್ಲ ತೊಂದರೆಗಳಿಂದ ರೈತ ಜರ್ಝರಿತನಾಗಿ ದ್ದಾನೆ. ಹೀಗಿರುವಾಗ ಪ್ರತಿದಿನದ ದಿನ ಪತ್ರಿಕೆಗಳಲ್ಲಿ ರೈತನ ಆತ್ಮಹತ್ಯೆಯ ವರದಿಗಳು. ರೈತನ ಮಡದಿ ಮಕ್ಕಳ ಆಕ್ರಂದನ ಮುಗಿಲು ಮುಟ್ಟುತ್ತಿದೆ. ಆತನ ಹೃದಯ ಒಡೆದ ಮಡಕೆಯಂತಾಗಿದೆ.

"ಮಾನಕ್ಕಂಜುವನು – ಮರಣಕ್ಕಲ್ಲ
ಆತ್ಮಹತ್ಯೆಯಲ್ಲ ಇದು – ಬಲಿದಾನ"

(ಅನ್ನದಾತ)

ಎಂಬ ಪಾದಗಳೊಂದಿಗೆ ಕವನ ಮುಕ್ತಾಯವಾಗುತ್ತದೆ. ಈ ಸಾಲುಗಳು ರೈತನು ಬರೆದಿಟ್ಟ ಮರಣ ಶಾಸನದಂತಿದೆ. ರೈತ ಸಾಲಗಾರರಿಂದ, ಬ್ಯಾಂಕಿನಿಂದ ಆದ ಅವಮಾನವನ್ನು ಸಹಿಸದಾದವನು, ಮರಣವನ್ನು ಸಹಿಸಿದ್ದಾನೆ, ವ್ಯವಸ್ಥೆಯೇ ಹೀನಾಯ ಸ್ಥಿತಿಗೆ ಕಾರಣವಾದಂತಿದೆ.

ಒಟ್ಟಾರೆ ಅನ್ನದಾತನ ಅನಂತ ಸಮಸ್ಯೆಗಳು, ಸಮಸ್ಯೆಗೆ ಕಿವಿಗೊಡದ ವ್ಯವಸ್ಥೆ, ನಿರಂತರ ಸಾವುಗಳು, ನಾಡಿಗೆ ಅನ್ನಕೊಡುವವಗೆ ನಾಡುಕೊಟ್ಟ ಬಿರುದು-ಸನ್ಮಾನಗಳು ಆತನ ಬಲಿದಾನ ಹೀಗೆ ಕವನ ವ್ಯಂಜಕವಾಗಿ ಮೂಡಿಬಂದಿದೆ. ಶಿವಳ್ಳಿ ಕೆಂಪೇಗೌಡರ ಕವನಗಳಲ್ಲಿ ದೊಡ್ಡದನ್ನು ಬಹುದಾದ ವಿರಳ ಕವನಗಳಲ್ಲಿ ಇದು ಒಂದು. ಯಾವುದೇ ಛಂದಸ್ಸಿನ ನಿಯಮಕ್ಕೊಳಗಾಗದೆ ಮೂಡಿ ಬಂದಿರುವ ಸರಳ ಕವಿತೆಯಾಗಿದೆ. ಆದರೆ ಸಂದೇಶದ ದೃಷ್ಟಿಯಿಂದ ಇದೊಂದು ಅತ್ಯಂತ ಸಂಕೀರ್ಣ ಕವನವಾಗಿದೆ. ಇಲ್ಲಿಯೂ ಶಿವಳ್ಳಿಯವರ ರೈತಪರ ನಿಲುವು, ಶೋಷಣೆ ವಿರುದ್ಧದ ರಣನೀತಿಯನ್ನು ಕಾಣಬಹುದು. "ಮನಸ್ಸು ದಡ್ಡೊಡೆದ ಕೆರೆಯಂಗಳ" ಎಂಬ ಪಾದದ ಮೂಲಕ ರೈತನ ಸಂಕಷ್ಟದ ತಲ್ಲಣಗಳನ್ನು ಆಕರ್ಷಕವಾಗಿ ಸೆರೆಹಿಡಿದಿದ್ದಾರೆ. ಇಲ್ಲಿ ಯಥೋಚಿತವಾದ ಕನ್ನಡ ದೇಶೀಯ ಪದ ಬಳಕೆ ಇದೆ. ಇದು ಕವನಕ್ಕೆ ಸಹಜತೆಯನ್ನೆ ತಂದೊದಗಿಸಿದೆ.

'ಮಣ್ಣಿನ ಮಗ' ಕೆಂಪೇಗೌಡರ ಮತ್ತೊಂದು ಉತ್ತಮ ಕವಿತೆ. ಅವರ ಒಟ್ಟು ಮುವತ್ತನಾಲ್ಕು ಕವಿತೆಗಳನ್ನು ಗಮನಿಸಿದರೆ ಗಾತ್ರದಲ್ಲಿ ಹಿರಿಗವನ ಇದು. 'ಮಣ್ಣೊಕ್ಕಲು', 'ಭೂಮಿಪುತ್ರ' ಮೊದಲಾದ ವಿಶೇಷಣಗಳಿಂದ ರೈತನನ್ನು ಧ್ವನಿಪೂರ್ಣವಾಗಿ ಕರೆದಿರುವ ಕವಿಕೆಂಪೇಗೌಡರು ಈ ಕವನದಲ್ಲಿ 'ಮಣ್ಣಿನ ಮಗ' ಎಂದಿದ್ದಾರೆ. ಮಣ್ಣಿನ ನಡುವೆಯೇ ಹುಟ್ಟಿ-ಬೆಳೆದು-ಬಾಳಿ-ಬದುಕು ಮುಗಿಸುವ ರೈತನಲ್ಲದೆ ಮತ್ತಾರು ಮಣ್ಣಿನ ಮಗ. ಸೊಗಸಾದ ಶೀರ್ಷಿಕೆಯಾಗಿದೆ. ರೈತನ ಪರಂಪರೆಯನ್ನು ಪುರಾಣದೊಂದಿಗೆ ಪೋಣಿಸಿರುವುದು ವಿಶೇಷವಾಗಿದೆ.

"ಭೂಮಿತಾಯಿಯ ಚೊಚ್ಚಲ ಮಗ
ಜನಕ ಮಹಾರಾಜನ ಪ್ರಜೆ
ಧರಣಿಸುತೆ ಸೀತಾಮಾತೆಯ ಒಕ್ಕಲು
ಹಲಧರ ಬಲರಾಮ ಗೋಪಾಲಕೃಷ್ಣ
ಇವನ ಅಣ್ಣಂದಿರು"

(ಮಣ್ಣಿನ ಮಗ)

ರೈತ ವಂಶಜರ ಮೂಲವನ್ನು ರಾಮಾಯಣದ ಜನಕಮಹಾರಾಜನ ವಂಶಜರು ಅಲ್ಲದೆ ಬಲರಾಮನ ಆಯುಧವೇ ನೇಗಿಲು ಈ ವಂಶಜರೆಂದು ಸೂಚಿಸಿರುವುದು ಔಚಿತ್ಯವಾಗಿದೆ. ಆದರೆ ಮುಂದಿನ ಪಂಕ್ತಿಗಳು ವ್ಯಂಗ್ಯವಾಗಿ ಈತನ ಸಮಸ್ಯೆಗಳತ್ತ ದಾಪುಗಾಲಿಡುತ್ತದೆ. 'ಅನ್ನದಾತ' ಎಂದು ಕರೆಯುವುದು ಕರೆಯಲು ಚಂದ ವಿನಃ ಅವನ ಬದುಕೆಲ್ಲ ಕಷ್ಟ ಕಾರ್ಪಣ್ಯದಿಂದಲೇ ತುಂಬಿರುತ್ತದೆ ಎನ್ನುವರು. ಅಲ್ಲದೆ ಈ ವೃತ್ತಿಯಲ್ಲಿ ತೊಡಗಿ ದುಡಿಯುವೆನೆಂದು ಅದ್ಯಾರಿಗೆ ಮುಚ್ಚಳಿಕೆ ಬರೆದು ಕೊಟ್ಟನೋ ಈ ರೈತ ಎಂದು ಕೊಂಕಿಸಿದ್ದಾರೆ.

"ಎಂದು ಯಾರಿಗೆ ಬರೆದು ಕೊಟ್ಟನೋ ಮುಚ್ಚಳಿಕೆ
ಭೂಭಾರ ಹೊರಲು"

(ಮಣ್ಣಿನ ಮಗ)

ಕುವೆಂಪುರವರ 'ಧನ್ವಂತರಿ ಚಿಕಿತ್ಸೆ ' ಸಣ್ಣ ಕಥೆಯಲ್ಲಿ ರೈತನ ಬವಣೆಯನ್ನು ಚಿತ್ರಿಸಿರುವಂತೆ ಈ ಕವಿತೆ ಇಡೀ ಭೂಭಾರವನ್ನು ಹೊರುವವನು ರೈತ ಎಂದಿದೆ. ವಾಸ್ತವವಾದ ಕಟು ಸತ್ಯವಿದು. ಕವನದ ಮುಂದಿನ ಭಾಗ ರೈತನನ್ನು ಶೋಷಿಸುವವರನ್ನು ಕಲಾತ್ಮಕವಾಗಿ, ಕ್ರಮವಾಗಿ ಪಟ್ಟಿಮಾಡಿದ್ದಾರೆ. ವ್ಯಾಪಾರಗಾರರಿಂದ ರೈತರಿಗೆ ತೂಕದಲ್ಲಿ, ಬೆಲೆಯಲ್ಲಿ ಮೋಸವಾಗುತ್ತಿದೆ. ಮಧ್ಯವರ್ತಿಗಳಿಂದ ಮತ್ತದೇ ಮೋಸ. ಉಳಿದಂತೆ ಅಧಿಕಾರಿಗಳು ರೈತರ ರಕ್ತವನ್ನು ಹೀರುವ ತಿಗಣೆಗಳು. ಇವುಗಳನ್ನೇ ಕಲಾತ್ಮಕವಾಗಿ ಚಿತ್ರಿಸುತ್ತ ಹೋಗುತ್ತಾರೆ.

"ಯಾವ ರಾವುಕಣ್ಣು ಬಿತ್ತೋ ಇವನ ಮೇಲೆ?

ಯಾವ ಬಾಕ್ಸರ್‌ನ ಹೊಡೆತವೋ

ತಳಾತಳಕ ಬಿದ್ದವನು ಮೇಲೆದ್ದೇ ಇಲ್ಲ"

(ಮಣ್ಣಿನ ಮಗ)

ಗ್ರಾಮೀಣ ಹಿನ್ನೆಲೆಯಲ್ಲಿ ಬದುಕಿದವನಿಗೆ ಗ್ರಾಮೀಣ ನಂಬಿಕೆಗಳ ಬಗೆಗೆ ಹೆಚ್ಚು ವಿಶ್ವಾಸ ಇರುತ್ತದೆ. ತನಗಾದ ಈ ದುಸ್ಥಿತಿಗೆ ರಾಹುಕೇತುಗಳ ವಕ್ರ ದೃಷ್ಟಿ ಕಾರಣವೆಂಬ ನಂಬಿಕೆಯ ಅಭಿವ್ಯಕ್ತಿ ಮೇಲಿನ ಉಲ್ಲೇಖಿತ ಪಾದಗಳಲ್ಲಿದೆ. ಅಲ್ಲದೆ ಅತ್ಯುತ್ತಮ 'ಪಂಚ್' ಕೊಡುವ ಬಾಕ್ಸರ್‌ನ ಹೊಡೆತ ಪದವು ತೀವ್ರ ಆಘಾತವನ್ನ ಸೂಚಿಸುತ್ತದೆ. ಈ ಆಘಾತದಿಂದ ಮೇಲೇಳಲಾಗದೆ ಪಿಲಿಪಿಲನೆ ಒದ್ದಾಡುವುದೇ ಆಗಿದೆ. ಎದೆಯ ಬೇನೆಗೆ ಕಾರಣವು ಅದ್ಯಾವ ಮಾಯಕಾರನ ಬೇಟೆಯ ಬಾಣದ ಕಾರಣವೋ ಎಂದಿದ್ದಾರೆ. 'ಕೊಳ್ಳಿ' 'ಬಾಣ', 'ಬಾಕ್ಸರ್'ನ ಹೊಡೆತ, 'ರಾಹುಕಣ್ಣು' ಪದಗಳ ಮೂಲಕ ರೈತನಿಗೆ ಉಂಟಾಗಿರುವ ಸಮಸ್ಯೆಗಳನ್ನು ಬಿಡಿಸುತ್ತಾ ಹೋಗು ತ್ತಾರೆ. ರೈತನು ಧಿಗಿಲ್ ಎಂದು ಬೆಂಕಿಯಲ್ಲಿ ಉರಿಯುತಿದ್ದರೆ, ಉರಿಯಲ್ಲಿ ಮೈಕಾಯಿಸು ಕೊಳ್ಳುವರು ಸಹ ಇದ್ದಾರೆ ಎಂಬ ಪಾದವು ವಿಶಿಷ್ಠ ಸಂಕೇತವುಳ್ಳದ್ದಾಗಿದೆ. ರೈತನ ಸಮಸ್ಯೆ ಗಳನ್ನು ಪಾರುಮಾಡುವ ಬದಲು ಅದರಿಂದ ತಮಗಾಗುವ ಲಾಭಗಳನ್ನ ಎಣಿಸುತ್ತಾರೆ ಎಂಬುದು ಕವಿಯ ಮಾತು. ಅಂದರೆ 'ಉರಿದ ಮನೆಯಲ್ಲಿ ಹಿರಿದದ್ದೇ ಲಾಭ' ಎಂಬ ಗಾದೆಯಂತೆ ಇಲ್ಲಿನ ಬರಹವಿದೆ.

ತೆಂಗು ಬೆಳೆಗೆ ಹೊಡೆದ ನುಸಿರೋಗದಂತೆ ಪುಂಖಾನುಪುಂಖವಾಗಿ ಸಮಸ್ಯೆಗಳು ಸಂಭವಿಸುತ್ತಲೇ ಇದೆ. ಬೆಳೆದ ಬೆಳೆಗೆ ಸರಿಯಾದ ಧಾರಣೆ ಇಲ್ಲದ ಸಂಕಷ್ಟ. ಕನಿಷ್ಟ ಬೆಲೆಯೂ ಇಲ್ಲದೆ ಬೆಳೆದ ತರಕಾರಿ ಪದಾರ್ಥಗಳನ್ನು ಬೀದಿಗೆ ಸುರಿದು ಪ್ರತಿಭಟಿಸುತ್ತಿರುವ ದಿನನಿತ್ಯದ ಘಟನೆಗಳನ್ನು ಹಿಂದೆಯೇ ಕೆಂಪೇಗೌಡರು ತಮ್ಮ ಕವಿತೆಯಲ್ಲಿ ಚಿತ್ರಿಸಿದ್ದಾರೆ.

"ಸುರಿದು ತಂಬಟ್ಟೆ ಹಣ್ಣಿನ ಗೂಡೆ ರಸ್ತೆಗೆ

ಚೆಲ್ಲಿ ಈರುಳ್ಳಿ ಆಲೂಗೆಡ್ಡೆ ಹಸಿ ಮೆಣಸಿನಕಾಯಿ

ನಡೆಸಿ ರಸ್ತೆ ತಡೆ;

ಚಚ್ಚಿಕೊಂಡು ಎದೆ

ಬಡಿದು ಕೊಂಡರೂ ಬಾಯಿ

ತೆರೆಯಲೇ ಇಲ್ಲ ತೆರೆಯಬೇಕಾದವರ ಕಣ್ಣು"

(ಮಣ್ಣಿನ ಮಗ)

ನಿತ್ಯವೂ ರಾಜ್ಯಾದ್ಯಂತ ನಡೆಯುತ್ತಿರುವ ಘಟನೆ. ಕಾಲಾತೀತ ಸಮಸ್ಯೆಯಾಗಿಯೇ ಇದೆ. ಈ ಸಮಸ್ಯೆಯ ಕಬಂಧ ಬಾಹುಗಳಿಂದ ರೈತ ಪಾರಾಗುವ ಬಗೆ ಹೇಗೆ? ಅದಾರು ಇತ್ತ ಕಿವಿ ಕೊಡುವರು ಎಂಬುದೇ ಯಕ್ಷ ಪ್ರಶ್ನೆ. ವಿವಿಧ ರೀತಿಯ ಪ್ರತಿಭಟನೆಗೂ ಜಗ್ಗದ ಆಳುವವರು ಮಂದಚರ್ಮದವರು. ಎಂಬುದು ಕವಿಯ ನಿಲುವು. ನಿಲ್ಲದ ಈ ಸಮಸ್ಯೆ ಮತ್ತೂ ಹೊಸ ಹೊಸರೂಪ ಪಡೆಯುತ್ತಿದೆ. ಸಮಸ್ಯೆಯನ್ನು ಯಾವ ರೀತಿಯಿಂದಲೂ ಸುಧಾರಿಸದಾಗದೆ. ಕೊನೆಗೆ ವಿಷಪ್ರಾಶನ ಮಾಡಿ ಪ್ರಾಣ ಬಿಡುತ್ತಿದ್ದಾನೆ ರೈತ. ಇಷ್ಟಾದರೂ ಸತ್ತಮೇಲೂ ಆತನಿಗೆ ನ್ಯಾಯದೊರೆಯಲಿಲ್ಲ. ಸಾವಿಗೆ ಕಾರಣವನ್ನು ಹುಡುಕಲು ಸರ್ಕಾರ ರಚಿಸಿದ ಸಮಿತಿಯ ಉತ್ತರ ತಲ್ಲಣಗೊಳಿಸುತ್ತದೆ.

"ಕಾರಣವಲ್ಲ ರೈತನ ಆತ್ಮಹತ್ಯೆಗೆ

ಸಾಲದ ಹೊರೆಯೊಂದೇ"

(ಮಣ್ಣಿನ ಮಗ)

ಅನ್ನದಾತನ ಈ ನಿರಂತರ ಸಮಸ್ಯೆ ಸಂಬಂಧಿಸಿದವರಿಗೆ ಗೊತ್ತಾಗುವುದು ಹೇಗೆ ತನ್ನ ಶಕ್ತಿಯನ್ನು ಭೂಮಿಗೆ ಧಾರೆ ಎರೆದು, ಮಣ್ಣಿನ ಸಾರವನ್ನು ಬೆಳೆಯ ಮೂಲಕ ಹೀಗೆ ನಾಡಿಗೆ ಆಹಾರ ರೂಪದಲ್ಲಿ ಒದಗಿಸುವ ಇವನಿಗೆ ಎಂದು ಮುಕ್ತಿ. ರೈತನ ಸಮಸ್ಯೆ ಪರಿಹಾರವಾಗದೆ ನಾಡಿನ ಸಮಸ್ಯೆಯ ಪರಿಹಾರ ಹೇಗೆ ಸಾಧ್ಯ ಎಂಬುದು ಕವಿಯ ನಿಲುವಾಗಿದೆ.

ಕೆಂಪೇಗೌಡರ ಕವನಗಳೆಂದರೆ ಅದು ರೈತಗೀತೆ. ಈ ಮಾತಿನಲ್ಲಿ ಎರಡಿಲ್ಲ. ಏಕೆಂದರೆ ನೇರವಾಗಿ ರೈತನನ್ನೇ ಕುರಿತು ಕವಿತೆಗಳು ಕೆಲವಾದರೆ ಮತ್ತೆ ಕೆಲವು ಉಳುಮೆ, ಮಳೆ, ಬೆಳೆ, ಬೆಲೆ, ಎತ್ತು-ನೇಗಿಲುಗಳ ಕುರಿತಾಗಿವೆ. ಅವುಗಳಲ್ಲಿ ಅಡಕವಾಗಿರುವ ನಾಡಿನ ಬೆನ್ನೆಲುಬಾದ ರೈತನ ಸಮಸ್ಯೆಗಳ ವಿರಾಟ್‌ರೂಪವನ್ನ ಪರಿಶೀಲಿಸುವುದು. ಆ ಮೂಲಕ ನಿರಂತರವಾಗಿರುವ ರೈತ ಸಮಸ್ಯೆಗೆ ಪರಿಹಾರದ ಅಗತ್ಯಗಳನ್ನ ಸೂಚಿಸುವುದು ಇಲ್ಲಿನ ಕೆಲಸ. ಶಿವಳ್ಳಿ ಕೆಂಪೇಗೌಡರ ಬರಹಗಳನ್ನು ಗಮನಿಸಿದಾಗ ಅವರ ಸಣ್ಣಕಥೆಗಳ ಗುಣಮಟ್ಟ ಕವಿತೆಗಳಿಗಿಂತ ಉತ್ತಮ ಎಂದೆನ್ನಬಹುದು. 'ಜೆನ್ನುಮೂಳೆಯ ಹಾಡು', 'ಹತಭಾಗಿನಿ ತಂಗಿ' ಮೊದಲಾದ ಕವಿತೆಗಳು ಅತ್ಯುತ್ತಮ ಕವನಗಳು. ಇವರ ಅಲಕ್ಷಿತ ಬರಹವನ್ನು ನಾಡಿನ ಮುಖ್ಯರಾದ ಚಿಂತಕರು ವಿಶ್ಲೇಷಣ ಮಾಡಬೇಕಿದೆ. ಆ ಮೂಲಕ ಕೆಂಪೇಗೌಡರ ಬರಹಗಳನ್ನು ಗುರುತಿಸುವ ಕೆಲಸವಾಗುತ್ತದೆ. ನಾಡಿನ ಶ್ರೇಷ್ಠ ವಿದ್ವಾಂಸರಿಂದ ಇವರ ಬರಹಗಳು ಪ್ರಶಂಸೆಗೆ ಒಳಗಾಗಿರುವುದು ತಿಳಿದ ವಿಚಾರ.

೩.೬ ಬಂಡಾಯ ಕವಿತೆಗಳು

ಶಿವಳ್ಳಿ ಕೆಂಪೇಗೌಡರ ಕವಿತೆಗಳು ವಾಸ್ತವಕ್ಕೆ ಹತ್ತಿರ ಅಥವಾ ವಾಸ್ತವ ಗೀತೆಗಳೇ ಆಗಿವೆ. 'ನದಿ. ಝರಿ. ತೊರೆ. ವನಗಳನ್ನು ವರ್ಣಿಸುವ ಕವಿಯಲ್ಲ. ಬದಲಿಗೆ ತನ್ನ ಸುತ್ತಲಿನ ಪಾಡುಗಳನ್ನು ಹಾಡಾಗಿಸಿದ್ದಾರೆ. ತನ್ನ ನೆರೆಯಲ್ಲಿ ಕಂಡು ಬಂದಂತಹ ಅನ್ಯಾಯವನ್ನು ಪ್ರತಿಘಟಿಸಿದ್ದಾರೆ. ಅದು ತಮ್ಮ ಕವಿತೆಗಳಲ್ಲಿಯೂ ಕೂಡ. ಶಿವಳ್ಳಿಯವರ ಒಟ್ಟು ಕವಿತೆಗಳಲ್ಲಿ ಶೇಕಡವಾರು ರೈತಗೀತೆಗಳೇ ಆಗಿವೆ. ಅವುಗಳನ್ನು ಇತರೆ ದೃಷ್ಟಿಯಿಂದ ವಿಭಾಗಿಸಿಕೊಳ್ಳುವುದೇ ಸವಾಲಾಗಿದೆ. ಯಾವ ದೃಷ್ಟಿಯಿಂದ ಗಮನಿಸಿದರೂ ಅದು ರೈತನ ಅಂಗಳಕ್ಕೆ ಬೀಳುವ ಚಂಡಿನಂತಾಗಿದೆ. ಆದರೂ ಕವಿತೆಗಳ ಸ್ವರೂಪವನ್ನಾಧರಿಸಿ, ಅವುಗಳಲ್ಲಿನ ವಸ್ತುವನ್ನು ಸೂಕ್ಷ್ಮವಾಗಿ ಗಮನಿಸಿ ಕೆಂಪೇಗೌಡರ ಬಂಡಾಯ ಗೀತೆಗಳೆಂದು ವಿಭಾಗಮಾಡಿಕೊಂಡಿದೆ. ಕವನದ ವಸ್ತುವಿನಲ್ಲಿನ ಪ್ರತಿಘಟನೆ ಗುಣದಿಂದಾಗಿ ಮಾಡಿಕೊಂಡ ವಿಭಾಗವಾಗಿದೆ.

'ರೈತಗೀತೆ' ಕವನವು ಈ ಗುಂಪಿನ ಕವಿತೆಯಾಗಿದೆ. ನೇರವಾಗಿ ಕವಿ ಕೆಂಪೇಗೌಡರು ದಳ್ಳಾಳಿಗಳನ್ನು, ವರ್ತಕರನ್ನು, ನಮ್ಮನ್ನಾಳುವವರನ್ನು ಮಾತಿನ ಚಾಟಿಯಿಂದ ಹೊಡೆದಿದ್ದಾರೆ. ನೇಗಿಲು ಹಿಡಿದ ಉಳುಮೆ ಮಾಡದ, ಗುದ್ದಲಿ ಹಿಡಿದು ಬೇಸಾಯ ಮಾಡದ, ಏತದ ಮೂಲಕ ನೀರೆತ್ತಿ ಶ್ರಮಿಸಿದ ಇವರುಗಳು 'ನಮ್ಮ ಶತ್ರುಗಳು ರೈತರೆ ಕೇಳಿ' ಎಂದು ಗುಡುಗಿದ್ದಾರೆ. ಪದ್ಯದ ಪ್ರತಿಯೊಂದು ಭಾಗದ ಕೊನೆಯಲ್ಲು ಈ ಪಾದ ಪುನರಾವರ್ತನೆಯಾಗಿದೆ. ಆ ಮೂಲಕ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಸಕ್ಕರೆ ಕಾರ್ಖಾನೆಗಳನ್ನು ತೆರೆದ ಮಾಲೀಕರು ನಮ್ಮ ಕಬ್ಬನ್ನು ಕೊಂಡು ಕೊಂಡು, ನಮ್ಮ ಕಾರ್ಮಿಕರಿಂದಲೇ ದುಡಿಸಿಕೊಂಡು ಕೋಟಿ ಕೋಟಿ ಗಳಿಸುತ್ತಿರುವ ಖದೀಮರು ಎಂದಿದ್ದಾರೆ.

ಕವಿತೆಯ ಮುಂದಿನ ಭಾಗದಲ್ಲಿ ಬಟ್ಟೆ ಕೂಳಿ ಆಗದಂತೆ. ಲಂಚವನ್ನು ಪಡೆದುಕೊಂಡು ನಮ್ಮ ನಾಶಕ್ಕೆ ಕಾರಣರಾದ ಸರ್ಕಾರಿ ನೌಕರರನ್ನು ನಿಂದಿಸಿದ್ದಾರೆ. ಮೈಯೆಲ್ಲಾ ಮಣ್ಣು ಮೆತ್ತಿಕೊಂಡು ಕೆಸರಿನಲ್ಲಿ ದುಡಿವ ರೈತನಿಗೆ ತಕ್ಕ ಫಲವಿಲ್ಲ ಕಾಲಮೇಲೆ ಕಾಲುಹಾಕಿ, ಇಸ್ತ್ರಿಬಟ್ಟೆ, ಕನ್ನಡಕ ಹಾಕಿ ಕುಳಿತಿರುವವನಿಗೆ ಹಣ. ಗೌರವ ಎಲ್ಲವೂ ಬರುತ್ತದೆ. ಈ ಸತ್ತ ಕೊಳಕು ವ್ಯವಸ್ಥೆಯಲ್ಲಿನ ಅಸಮಾನತೆ ವಿರುದ್ಧ ಬಂಡೆದಿದ್ದಾರೆ ಲೇಖಕರು ರೈತರನ್ನು ಹೊಗಳುತ್ತಾ, ಯಾಮಾರಿಸುತ್ತಾ ಗದ್ದುಗೆ ಏರುವ ಗೋಮುಖ ವ್ಯಾಘ್ರಗಳನ್ನು ನಿಜವಾದ ರೈತರ ಶತ್ರುಗಳಿವರು ಎಂದಿದ್ದಾರೆ. ಯಾವುದೇ ಕಾರಣಕ್ಕೂ ಈ ದುರುಳರು ಬದಲಾಗಲಾರರು. ಏನಿದ್ದರೂ ಕ್ರಾಂತಿಯಾಗಬೇಕು, ಸಂಘಟಿತರಾಗಬೇಕು, ಹೋರಾಟ ನಡೆಯಬೇಕು, ನಾವು ವಿವೇಕಿಗಳಾಗಬೇಕು ಎಂಬುದು ಕವಿಯ ಧೋರಣೆಯಾಗಿದೆ.

"ನಾವು ಒಂದು ಕಡೆ ಕೂಡಿ ಧಿಕ್ಕಾರದ ಕೂಗುಹಾಕಿ
ಬೀದಿಯಲ್ಲಿ ಉರಿಯುತ್ತಾ ಹೋದರೆ
ಗುಡುಗು ಸಿಡಿಲು ಖಡ್ಗ ಮಿಂಚಿ

ಮುಂಗಾರು ಮಳೆಬಂದು ನೆಲಕಂಪು ಆಗುವುದು

ಬೆಳೆ–ಬದುಕು ಹಸನಾಗಿ ಭೂತಾಯಿ ನಗುವಳು"

(ರೈತ ಗೀತೆ)

ಕ್ರಾಂತಿ ಮೂಲಕವೇ ಬದಲಾವಣೆಯಾಗಬೇಕಾದ ಅನಿವಾರ್ಯತೆಯನ್ನು ಈ ಕವನದ ಮೂಲಕ ಕವಿ ವ್ಯಕ್ತ ಪಡಿಸಿದ್ದಾರೆ. ಕ್ರಾಂತಿ ಅಂತ್ಯವಾಗುವುದು ಶಾಂತಿ ರೂಪದಲ್ಲಿ. ಹಾಗೆ ಕ್ರಾಂತಿಯಿಂದ ಸಮಾಜದಲ್ಲಿ ಸಮಾನತೆ ಉಂಟಾಗುವುದು. ನಮ್ಮನೆಲ್ಲ ಹೊತ್ತಿರುವ ಭೂ ಮಾತೆ ನೋಡಿ ಸಂತೋಷ ಪಡುವಳು. ರೈತ ರನ್ನು ಶೋಷಿಸುವ ಅಧಿಕಾರಿಗಳು, ವರ್ತಕರು, ದಲ್ಲಾಳಿಗಳು, ರಾಜಕಾರಣಿಗಳು ಬದಲಾಗುವುದು ಕ್ರಾಂತಿ ಯಿಂದ ಎಂಬುದು ಕವಿಭಾವ.

ಮೂಕ ಪ್ರಾಣಿಗಳ ಮನದಮಿಡಿತವನ್ನು ಅರಿಯುವ ಪ್ರಯತ್ನಗಳು ಸೊಗಸಾಗಿದೆ. ಗ್ರಾಮೀಣ ಜನರ ಸಂಗಾತಿಗಳಾದ ಎತ್ತು, ಎಮ್ಮೆ, ಕುರಿ, ಆಡು, ಕೋಳಿ, ನಾಯಿಗಳು ಒಡೆಯನೊಡನೆ ಸಹಜವಾಗಿ ಬೆರೆಯು ತ್ತವೆ. ಮಾತು ಬಾರದಿದ್ದರೂ ವರ್ತನೆಯ ಮೂಲಕ ಪ್ರತಿಕ್ರಿಯಿಸುತ್ತವೆ, ಅವುಗಳ ಹಾವ ಭಾವಗಳನ್ನು ಕೂಗು ವಿಕೆ, ಅರಚುವಿಕೆಗಳ ಅರ್ಥವನ್ನ ಸರಿಯಾಗಿ ಗ್ರಹಿಸುವುದು ಕಠಿಣ ಕೆಲಸ. ಇದನ್ನು ಸಮರ್ಪಕವಾಗಿ ನಿರ್ವಹಿಸಿದವರು ಕೆಂಪೇಗೌಡರು. ಪೂರ್ಣಚಂದ್ರತೇಜಸ್ವಿ ಯವರು ತಮ್ಮ 'ಕರ್ವಾಲೋ' ಕಾದಂಬರಿಯಲ್ಲಿ 'ಕಿವಿ' ನಾಯಿಯ ಮಿಡಿತವನ್ನುಗ್ರಹಿಸಿದಂತೆ ಕವಿ ಕೆಂಪೇಗೌಡರು 'ಮೊರೆ' ಕವನದಲ್ಲಿ ನಾಯಿ ಬೊಗಳುವ ವಿಭಿನ್ನ ರೀತಿಯ ಅರ್ಥವನ್ನು, ಮೊರೆಯಿಡುವಿಕೆಯನ್ನು ಗ್ರಹಿಸಿದ್ದಾರೆ. ಒಂದು ಉತ್ತಮ ರೂಪಕದಲ್ಲಿ ಎಣೆದು ಈ ಚಿತ್ರಣವನ್ನು ಕಟ್ಟಿದ್ದಾರೆ. ಈ ಮೂಲಕ ನಿರಂತರ ದುಡಿಮೆಯಿಂದ ದೈಹಿಕ ಕೃಶವರಾಗಿ, ರೋಗ, ರುಜನಗಳು ಬಂದ ಮೇಲೆ, ಯಾರೂ ಸರಿಯಾಗಿ ಪೋಷಿಸದಿರುವ ವ್ಯಕ್ತಿಗಳ ಅಂತರ್ಯವನ್ನು ನಿಯತ್ತಿನ ಪ್ರಾಣಿ ನಾಯಿಯ ಸಂಕೇತದ ಮೂಲಕ ಚಿತ್ರಿಸಿದ್ದಾರೆ. 'ಕೋರಿಯಾಗಿದ್ದಾಗ ಊರೆಲ್ಲಾ ನೆಂಟರು, ಕೋಲೂರುವಾಗ ಯಾರೂ ಇಲ್ಲ' ಎಂಬ ಗಾದೆಯಾನುಸಾರ ವ್ಯಕ್ತಿಯ ಬದುಕು ನಿಂತಿದೆ. ವಯಸ್ಸಾದ ಮೇಲೆ ದೇಹದ ಶಕ್ತಿ ಕುಂದುತ್ತದೆ. ದೇಹಕ್ಕೆ ಕಾಯಿಲೆಗಳು ಬರುತ್ತವೆ. ಶಕ್ತಿಯಿದ್ದಾಗ ದುಡಿಸಿಕೊಂಡ ಜನ ಯಾರೂ ಇಂದು ತಮ್ಮನ್ನು ಹಾರೈಕೆ ಮಾಡದಿದ್ದರೆ ತಾವು ಯಾರಲ್ಲಿ ಮೊರೆಹೋಗುವುದು. ವ್ಯವಸ್ಥೆಗೆ ಮೂಕ ಪ್ರತಿಭಟನೆಯಂತೆ ಈ ಕವನ ಮೂಡಿ ಬಂದಿದೆ.

ನಾಯಿಗಳಿಗೆ ಕಿವಿ ಕತ್ತರಿಸುವುದುಂಟು. ಹೀಗೆ ಕಿವಿ ಕತ್ತರಿಸಿ ಕಾಲನ್ನೂ ಕೂಡ ಯಾವುದೋ ಕಿಡಿಗೇಡಿಗಳ ಕೆಂಗಣ್ಣಿಗೆ ಗುರಿಯಾಗಿ ಕಳೆದು ಕೊಂಡಿರಬಹುದು. ಜೊತೆಗೆ ಪೋಷಣೆ ಇಲ್ಲದೆ ಕಜ್ಜಿ ಹತ್ತಿ ವಿವಿಧ ತೊಂದರೆಗಳಿಂದ ನೊಂದು ಬೆಂದು ಸಾಕಾಗಿ, ನಡುರಾತ್ರಿಯಲ್ಲಿ ಊರೆಲ್ಲ ಮಲಗಿರುವಾಗ ಕಣ್ಣೀರು ಸುರಿಸುತ್ತದೆ. ಇಂತಹ ಅನೇಕ ಸಮಾನ ದುಖಿಃಗಳು ಒಂದೆಡೆ ಸೇರುತ್ತವೆ. ಆಕಾಶದತ್ತ ಮುಖಮಾಡಿ ಊಳಿಡುತ್ತವೆ. ಊರಿನಲ್ಲಿ ಯಾರು ತಮ್ಮ ಕಷ್ಟಗಳನ್ನು ಪರಿಹರಿಸದಿದ್ದಾಗ ಕಾಣದ ಅದಾವುದೋ ಶಕ್ತಿಗೆ ಪ್ರಾರ್ಥಿಸುವಂತಿದೆ. ಕವಿ ಇದನ್ನು ಕಲಾತ್ಮಕವಾಗಿ ಎಣೆದಿದ್ದಾರೆ. ವಾಚಕರಿಗೆ ಕರುಳು ಹಿಂಡಿದಂತಾಗಿ ಕರುಣಾ ರಸ ಸ್ಫುರಿಸುತ್ತದೆ.

ಯಾರಿಗಾಗಿ ಈ ಕರುಳಿನ ಕರೆ?

ಆಲಿಸದಿರಾ? ಆಗೆಲ್ಲ

ಆ ಗೋಳಿಗೆ ಗಾಳಿ

ನಿಟ್ಟುಸಿರು ಬಿಡುತ್ತದೆ.

ಅರಳಿಮರ ಮಮ್ಮಲ ಮರುಗುತ್ತದೆ.

ಕೋಡಿಹಳ್ಳ ಮುಳು ಮುಳು

ಅಳುತ್ತದೆ

ತೆಂಗಿನ ಗರಿಗಳು ತೊಟ ತೊಟನೆ

ಕಣ್ಣೀರು ಹಾಕುತ್ತವೆ

(ಮೊರೆ)

ಮೂಕ ಪ್ರಾಣಿಗಳ ವೇದನೆಗೆ ಪ್ರಕೃತಿಯ ಪ್ರತಿಕ್ರಿಯೆ ಇದು. ಈ ಗೋಳನ್ನು ಆಲಿಸಿದ ಗಾಳಿಯೂ ನಿಟ್ಟುಸಿರು ಬಿಡುತ್ತದೆ. ಅರಳಿಮರ ಮರಗುತ್ತದೆ. ಕೋಡಿಹಳ್ಳದ ನೀರು ಕೂಡ ಅಳುತ್ತದೆ, ತೆಂಗಿನ ಗರಿಗಳ ಇಬ್ಬನಿ ನೀರನ್ನು ಕಣ್ಣೀರಿಗೆ ಕಲ್ಪಿಸಿ ಅದರ ದುಃಖಪಿದೆಂದು ತಿಳಿಸುತ್ತಾರೆ. ವ್ಯವಸ್ಥೆಯ ಕೂಳ ಮೂಖವನ್ನು ಒಂದೆಡೆ ಚಿತ್ರಿಸಿದ್ದಾರೆ. ಮತ್ತೊಂದೆಡೆ ತಮ್ಮ ದುಃಖ ಪ್ರಕೃತಿ ಮಾತೆಯ ಹೃದಯವನ್ನು ಕರಗಿಸುವಂತಿದೆ ಎಂಬ ಕಲ್ಪನೆ ಸುಂದರವಾಗಿದೆ.

ನಮ್ಮ ಸಂವಿಧಾನದ ನಾಲ್ಕನೇ ಅಂಗ ಪತ್ರಿಕಾಂಗ. ಅದು ಸಾಮಾಜಿಕ ಕಳಕಳಿಯನ್ನು ಹೋದಿರಬೇಕು. ತನ್ನಲ್ಲಿ ಪ್ರಕಟವಾಗುವ ಮಾಹಿತಿಗಳು ಕೇವಲ ವಾಣಿಜ್ಯ ದೃಷ್ಟಿಯನ್ನು ಹೊಂದಿರಬಾರದು. ಈ ಅಂಶವನ್ನು 'ಸಂಪಾದಕರಿಗೆ' ಕವನದ ಮೂಲಕ ಶಿವಳ್ಳಿಯವರು ತಮ್ಮ ಒಡಲಾಳದ ಮಾತುಗಳನ್ನು ಚಿತ್ತರಿಸಿದ್ದಾರೆ. ಪತ್ರಿಕೆಯನ್ನ ಸ್ವಂತಃ ತೆರೆದು ('ರೈತರ ಜ್ಯೋತಿ' ಮಾಸಪತ್ರಿಕೆ) ಕೆಲಸ ಮಾಡಿದ ವ್ಯಕ್ತಿ ಇವರು. ಪತ್ರಿಕಾ ರಂಗದ ಆಳ ಅಗಲಗಳ ಅರಿವಿರುವ ಇವರು, ಒಂದು ಪತ್ರಿಕೆಯಲ್ಲಿ ನಿಜವಾಗಿ ಇರಬೇಕಾದುದು ಏನು? ಎಂಬುದನ್ನು ತಿಳಿಸುತ್ತಾ ಹೋಗುತ್ತಾರೆ. ಅವರು ಸಂಪಾದಕರಿಗೆ ವಿನಂತಿಸಿಕೊಳ್ಳುವ ಶೈಲಿಯಲ್ಲಿ ಕವನವನ್ನ ಆರಂಭಿಸುತ್ತಾರೆ. ಸ್ವಾಮಿ ತಮ್ಮಲ್ಲಿ ನಿವೇದಿಸಿಕೊಳ್ಳುವುದೆಂದರೆ, ತರಲೆ ರಾಜಕೀಯ ಪ್ರಕಟಣೆಯನಲ್ಲ, ಎಂದು ಎದೆಗೆ ಗುಂಡಿಟ್ಟ ಹಾಗೆಪದಗಳ ಪಟಾಕಿ ಹೊಡೆದಿದ್ದಾರೆ.

"ತರಲೆ ರಾಜಕೀಯವನ್ನಲ್ಲ

ಅಥವಾ

ಕಪ್ಪು-ಬಿಳುಪಿನಲ್ಲಿ ಅಚ್ಚುಹಾಕಿದ

ಹೆಣ್ಣಿನ ಅರೆ ಎದೆ;

ಹೊಕ್ಕಳು, ತೊಡೆಯನ್ನು ಅಲ್ಲ!"

(ಸಂಪಾದಕರಿಗೆ)

ಪತ್ರಿಕೆಗಳಲ್ಲಿ ಸಹಜವಾಗಿ ಪ್ರಕಟಣೆಗೊಳ್ಳುವ ಅಂಶಗಳಿವು. ಆದರೆ ಲೇಖಕರ ಆಣತಿ ಏನೆಂದರೆ ಪತ್ರಿಕೆಯಲ್ಲಿ ಪ್ರಕಟವಾಗಬೇಕಾದದ್ದು ಇದಲ್ಲ. ಪತ್ರಿಕೆಯನ್ನು ಕೊಳ್ಳುವವರನ್ನು ಸೆಳೆಯಲು ಬಳಸುವ ಈ ತಂತ್ರ ಅನೈತಿಕವಾದದ್ದು.

ತಮ್ಮ ನಿಜವಾದ ಕರ್ತವ್ಯವೇ ಬೇರೆ, ಓದುಗನಾದ ನನ್ನ ನಿವೇದನೆಗಳೆಂದರೆ,

"ತಮ್ಮಿಂದ ನಾನು ಅಪೇಕ್ಷಿಸುವುದು
ಕತ್ತಲು ಕವಿದ ನನ್ನ ತಬ್ಬಲಿ
ಕಣ್ಣಲ್ಲಿ ಕೆನ್ನಾಲಿಗೆ ಚಾಚಿ
ಉರಿಯುವ ನೋವಿಗೆ
ನೀರಾಗುವ, ನೆರಳಾಗುವ
ಕಟ್ಟಿರುವ ಗಂಟಲಿಗೆ
ಸತ್ತು ಬಿದ್ದಿರುವ ನಾಲಿಗೆಗೆ
ಜೀವ ವಾಹಿನಿಯಾಗುವ
ಕಿವಿ ಕಣ್ಣು ನಾಲಿಗೆಯಾಗುವ
ಹಂಬಲ ಅಷ್ಟೆ."

(ಸಂಪಾದಕರಿಗೆ)

ಪತ್ರಿಕೆಗಳು ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ಪಟ್ಟಿಮಾಡಿದಂತಿದೆ. ಪದ್ಯದ ಪೂರ್ವಾರ್ಧದಲ್ಲಿ ಇಂದು ಪತ್ರಿಕೆಗಳು ಇರುವ ಸ್ಥಿತಿಯನ್ನು ತಿಳಿಸಿದರೆ, ಉತ್ತರಾರ್ಧದಲ್ಲಿ ನಿಜವಾದ ಕರ್ತವ್ಯಗಳಿವು ಎಂದಿದ್ದಾರೆ. ಅಲ್ಲದೆ ಓದುಗರ ಪ್ರತಿನಿಧಿಯಾಗಿ ತಮ್ಮ ನಿವೇದನೆ ಇದೆಂದಿದ್ದಾರೆ. ಪತ್ರಿಕಾರಂಗದಲ್ಲಿ ದುಡಿದ ಶಿವಳ್ಳಿಯವರು ಪತ್ರಿಕೆಗಳನ್ನ ಕುರಿತ ಈ ಮಾತುಗಳು ಸಹಜೋಕ್ತಿಯಾಗಿದೆ. ಅಲ್ಲದೆ ಕೆಂಪೇಗೌಡರ ಬಂಡಾಯದ ಧ್ವನಿಯನ್ನ ಮೆಚ್ಚಲೇ ಬೇಕಾಗುತ್ತದೆ. ಇಂದು ಪತ್ರಿಕೆಗಳು ಕೋಮುವಾರು, ಪಕ್ಷವಾರು ನಿಂತಿರುವುದು ಆತಂಕಕಾರಿ ಬೆಳವಣಿಗೆಗಳು. ಇಡೀ ಮಾನವ ಕುಲದ ಉದ್ಧಾರ, ಒಳಿತು ಬಯಸುವುದು ಮಾಧ್ಯಮಗಳ ಕೆಲಸ. ಅದು ಮುದ್ರಣ ಅಥವಾ ದೃಶ್ಯಮಾಧ್ಯಮಗಳು ಎರಡಕ್ಕು ಸಲ್ಲಿಸುವ ವಿಚಾರವಾಗಿದೆ. ಮುಜುಗರ ತರುವ ನಗ್ನ ಚಿತ್ರಗಳು, ವಾಣಿಜ್ಯ ದೃಷ್ಟಿಯ ಜಾಹಿರಾತುಗಳಿಂದ ಪತ್ರಿಕೆಗಳು ಮೌಲ್ಯಹೀನವಾಗುತ್ತಿರುವ ಇಂದಿನ ಸಂದರ್ಭಕ್ಕೆ ಗೌಡರ ಈ ಕವನ ಪತ್ರಿಕೆಯ ಸಂಪಾದಕರಿಗೆ ಕಿವಿ ಹಿಂಡಿದಂತಿದೆ.

ನಿರ್ಗತಿಕರ ಪರವಾದ ಗೌಡರ ನಿಲುವು, ಪ್ರತಿಭಟನೆ, ಕವನಗಳ ಮೂಲಕ ವ್ಯಕ್ತವಾಗುತ್ತಾ ಸಾಗಿದೆ. 'ಬೀದಿ ಮಕ್ಕಳು ಬೆಳೆದೂ' ಕವನದಲ್ಲಿ ಇಂಥಹದೇ ಚಿಂತನೆಯಿದೆ. ನಮ್ಮ ದೊಡ್ಡ ದೊಡ್ಡ ಕವಿಗಳು ಇಂತಹ ಸಣ್ಣ ಘಟನೆಗಳಿಗೆ ಓ ಗೊಟ್ಟಿರುವುದು ವಿರಳವಾಗಿವೆ. ಆದರೆ ಕೆಂಪೇಗೌಡರ ಬಹುತೇಕ ಬರಹಗಳು ನಿರ್ಲಕ್ಷಿತರ, ದಲಿತರ ಪರವಾಗಿವೆ. ಭಿಕ್ಷಕರಾಗಿದ್ದ ಕುಟುಂಬದಲ್ಲಿ ಜನಿಸಿದ ಕಂದಮ್ಮಗಳು ತುತ್ತು ಅನ್ನ, ತುಂಡುಬಟ್ಟೆ, ರಸ್ತೆಬದಿಯ ನಿದ್ರೆಯಲ್ಲೇ ಸುಖಿಸುತ್ತಾರೆ. ಭಿಕ್ಷೆ ನೀಡುವವರ ನಿಂದನೆಗಳು, ಬೈಗುಳ ಹಸಿವಿನ

ಮುಂದೆ ಅರ್ಥಹೀನವಾಗುತ್ತದೆ. ಇದೆಲ್ಲಾ ಒಂದು ರೀತಿ ಒಗ್ಗಿಹೋಗಿರುತ್ತವೆ. ಹರಕು ಚಾಪೆ ಇಲ್ಲದಿದ್ದರೂ ಒರಟು ನೆಲದ ಮೇಲೆ ಒಗ್ಗುತ್ತಾರೆ. ಕವಿ ಆ ಮಕ್ಕಳ ಬದುಕನ್ನು ಸಹಜವಾಗಿ ಕಟ್ಟಿದ್ದಾರೆ.

"ಕೆದರಿದ ತಲೆ ಚಿಂದಿ ಬಟ್ಟೆಯಲ್ಲಿ ಬೀದಿ ಬೀದಿ ಅಲೆದೊ
ನೀವು ತಿಂದೆಸೆಯುವ ಬಾಳೆಹಣ್ಣಿನ ಸಿಪ್ಪೆಗೆ ಹದ್ದಿನಂತೆ
ಗಾಜಿನ ಹೋಟಲು ಹೊರಗೆ ಎಸೆದ ಎಂಜಲೆಲೆಗಳಿಗೆ
ನಾಯಿ ಕಾಗೆಗಳೊಡನೆ ಮುತ್ತಿದೋ
ಕಸದ ತೊಟ್ಟಿಯ ಸುತ್ತಾ ಕಳಕೊಂಡವರಂತೆ ಸುತ್ತಿದೊ
ಕಣ್ಣೀರು ಕೂಳೊಂದಿಗೆ ತಿನ್ನುತ್ತಾ
ಬೀದಿ ಮಕ್ಕಳು ಬೆಳೆದೋ"

(ಬೀದಿ ಮಕ್ಕಳು ಬೆಳೆದೋ)

ಎಂಬಲ್ಲಿ ನಿರ್ಗತಿಕ ಮಕ್ಕಳ ಹೋರಾಟದ ಬದುಕು ಎಂಥಹದೆಂದು ತಿಳಿಯುತ್ತದೆ. ಒಂದೆಡೆ ತಿನ್ನಲು ಅನ್ನವಿಲ್ಲದವರ ಸಂಕಟ. ಮತ್ತೊಂದೆಡೆ ತಿಂದು ತಿಂದು ಬರಬಾರದ ರೋಗಗಳು ಬಂದು ಅನ್ನವನ್ನೇ ಮುಟ್ಟಲಾಗದ ಸ್ಥಿತಿ. ನಿರ್ಗತಿಕರಿಗೆ ಉಳ್ಳವ ಒಂದಿಷ್ಟು ಸಹಾಯ ಮಾಡದ ಸ್ಥಿತಿಗಳು ಬೇಸರವನ್ನುಂಟು ಮಾಡುತ್ತವೆ. ಕವನದ ಕೊನೆಯ ಸಾಲುಗಳು ಏನಿಲ್ಲದಿದ್ದರೂ ಬದುಕುವ ಆತ್ಮವಿಶ್ವಾಸ ಇರುವವರು ಬದುಕಿತೋರುತ್ತಾರೆ ಎಂಬ ಹಿನ್ನೆಲೆಯಲ್ಲಿ ಕವನ ಕೊನೆಯಾಗಿದೆ.

'ಇಂದಲ್ಲ ನಾಳೆ' ಎಂಬ ಕವನ ದಲಿತ ಕವಿ ಸಿದ್ದಲಿಂಗಯ್ಯನವರ 'ನನ್ನಜನಗಳು' ಕವನವನ್ನು ನೆನಪಿಗೆ ತರುತ್ತದೆ. "ದಲಿತರು ಬರುವರು ದಾರಿಬಿಡಿ. ದಲಿತರ ಕೈಗೆ ರಾಜ್ಯಕೊಡಿ" ಎಂಬ ಮಾತಿಗನುಗುಣವಾಗಿ ಈ ಕವನ ರಚನೆಯಾದಂತಿದೆ. ಮೇಲುವರ್ಣ ಮತ್ತು ವರ್ಗಗಳ ಕಡೆಗಣನೆಯಿಂದ ಪದತಲದಲ್ಲಿ ಬಿದ್ದಿರುವ ಮಂದಿ ನೋವನ್ನೇ ಬದುಕಾಗಿಸಿ ಕೊಂಡವರೆ ಇವರ ನೋವು ಅದೆಷ್ಟು ದಿನ ತಾಳ್ಮೆಯಿಂದಿರುತ್ತದೆ.

"ನೋವು ಕಾವಾಗಿ ಕಾದ ಕಬ್ಬಿಣದ ಸರಳಾಗಿ
ಈಟಿಯಾಗಿ ಭರ್ಜಿಯಾಗಿ,
ಪರಶುರಾಮನ ಗಂಡುಗೊಡಲಿಯಾಗಿ
ಸಿಡಿಮದ್ದಾಗಿ ರೂಪಾಂತರಗೊಳ್ಳುತ್ತಿದೆ"

(ಇಂದಲ್ಲ ನಾಳೆ)

ಮುಂದೊಂದು ದಿನ ತಾಳ್ಮೆಗೆಡುತ್ತದೆ. ತಮಗೆ ಸಂಕಟಗಳು ತಂದವರಿಗೆ ಈಟಿ ಭರ್ಜಿಗಳಾಗಿ ತಿರುಗುಬಾಣವಾಗುತ್ತವೆ. ದುಷ್ಟರ ಸಂಹಾರದ ಕೊಡಲಿಯಾಗುತ್ತದೆ. ತಿಳುವಳಿಕೆಯಲ್ಲಿ ಸಿಡಿಮದ್ದಾಗುತ್ತವೆ, ಎಚ್ಚರ ಎಂಬುದು ಕವಿ ಮನದ ಮಾತು. ತಮ್ಮ ಅಜ್ಞಾನದಿಂದ, ಸ್ವಘೋಷಿತ, ಒಪ್ಪಿತ ನಿರ್ಬಂಧಗಳನ್ನು ಜ್ಞಾನದ ಕಣ್ಣಿನಿಂದ ಬದಲಾಯಿಸಿಕೊಳ್ಳುತ್ತಾರೆ. ಅಪಾರವಾದ ಕೋಪ ಪ್ರತಿಭಟನೆಯಾಗಿ ಬದಲಾಗುತ್ತದೆ. ರಣಕಹಳೆ ಮೊಳಗಿಸಿ, ರಣಕ್ಕೆ ವೀಳ್ಯನೀಡುತ್ತಾನೆ ರಣಭೇರಿಯನ್ನು ಬಾರಿಸುತ್ತಾರೆ.

"ಉಪವಾಸ ವನವಾಸಗಳಲಿನೊಂದವರು
ಅವಮಾನದ ವಳ್ಳುರಿಯಲಿ ಬೆಂದವರು"

(ಇಂದಲ್ಲ ನಾಳೆ)

ಒಂದಲ್ಲಾ ಒಂದು ದಿನ ಆ ದಿನ ಬಂದೇ ಬರುತ್ತದೆ. ಬದುಕಿನ ಚಕ್ರ ತಿರುಗೇ ತಿರುಗುತ್ತದೆ. ಎಂಬ ಎಚ್ಚರಿಕೆಯನ್ನು ಕವಿ ಮೇಲು ವರ್ಗ. ವರ್ಣದವರಿಗೆ ಈ ಮೂಲಕವಾಗಿ ರವಾನಿಸಿದ್ದಾರೆ. "ಸಿಂಹಾಸನ ಮೊಗಚಿ ಮಣ್ಣುಮುಕ್ಕುತ್ತದೆ" ಎಂದು ಅಧಿಕಾರದ ಗದ್ದುಗೆ ಹಿಡಿದವರಿಗೆ ಎಚ್ಚರಿಸಿದ್ದಾರೆ.

ಬಡವರ, ದಲಿತರ ಬದುಕಿಗೆ ವಿದ್ಯೆ ಬರದಂತೆ ನೋಡಿಕೊಂಡ ಜನ, ಅವರುಗಳ ಅಜ್ಞಾನವನ್ನು ಬಂಡವಾಳವಾಗಿಸಿಕೊಂಡರು. ಸಾಮಾಜಿಕ ನಿಯಮಗಳನ್ನು ರೂಪಿಸಿ ಜಾತಿ ಸಂಕೋಲೆಗಳನ್ನು ಎಣೆದರು ಇವರಲ್ಲಿ ಸ್ವಯಂ ಒಪ್ಪಿತ ಕೀಳುತನವನ್ನು ಉಂಟುಮಾಡಿದರು, ತಮ್ಮನ್ನು ಆಳುವ ಕೆಲಸಕ್ಕೆ ಅನರ್ಹರೆಂಬಂತೆ ಮಾಡಿದರು. ಪಶುಗಳಂತೆ ದುಡಿಸಿಕೊಂಡರು. ದನಗಳಿಗೆ ಬಡಿಯುವಂತೆ ದಂಡಿಸಿದರು. ಈ ಎಲ್ಲ ನೋವನ್ನು ಸಹಿಸಿಕೊಂಡವನು ಬದಲಾಗುತ್ತಾನೆ. ತುಳಿದವರಿಗೆ ತುಳಿಯುತ್ತಾನೆ. ಮಾನವರಲ್ಲಿ ಮೇಲು-ಕೀಳು ಇಲ್ಲ. ಇದು ಸ್ವಯಂ ನಿರ್ಮಿತ ವ್ಯವಸ್ಥೆ ಎಂದು ಅಕ್ಷರ ಕ್ರಾಂತಿ ಮೂಲಕ ಅರಿಯುವರು. ಆಳಿಸಿಕೊಂಡವ ಆಳುವ ಅರಸನಾಗುವನು.

ಕೆಂಪೇಗೌಡರ ಅತ್ಯಂತ ಮೇಲ್ಮಟ್ಟದ ಬಂಡಾಯ ಕವಿತೆ ಇದಾಗಿದೆ. ವಾಸ್ತವವಾಗಿ ಸುಂದರ ದಲಿತಗೀತೆಯೂ ಹೌದು. ಮೊದಲೇ ಪ್ರಸ್ತಾಪಿಸಿದಂತೆ ಸಿದ್ಧಲಿಂಗಯ್ಯನವರ 'ನನ್ನ ಜನಗಳು' ಕವಿತೆಯನ್ನು ನೆನಪಿಸುತ್ತದೆ.

ಬಹಳ ಅಚ್ಚರಿಯ ಸಂಗತಿ ಎಂದರೆ ರಾಜಕಾರಣಿಗಳನ್ನು ಇವರಷ್ಟು ನಿಷ್ಠುರವಾಗಿ ಟೀಕಿಸಿದ ಕನ್ನಡದ ಕವಿ ಮತ್ತೊಬ್ಬರಿಲ್ಲ. ನಾಟಕದಲ್ಲಿ ಮಾಸ್ಟರ್ ಹಿರಣ್ಣಯ್ಯರನ್ನು ಬಿಟ್ಟರೆ ಸಾಹಿತಿಯಾಗಿ ಇಷ್ಟು ಕಟುಟೀಕೆ ಮಾಡಿರುವುದು ಬಹಳ ವಿರಳ. ಇದು ಬಹುತೇಕ ರಾಜಕಾರಣಿಗಳಿಗೆ ಸಲ್ಲುವ ಟೀಕೆಯಾಗಿದೆ. ನೈತಿಕತೆ. ಧರ್ಮ, ನ್ಯಾಯ ಈ ಪದಗಳನ್ನು ಗಾಳಿಯಲ್ಲಿ ತೇಲಿ ಬಿಟ್ಟಿರುವ ನರಾಧಮರನ್ನು ಸರಿಯಾಗಿಯೇ ಟೀಕಿಸಿದ್ದಾರೆ. ಸ್ವಾರ್ಥಿಯಾದ ರಾಜಕಾರಣಿಗೆ ತಾನು ಹಾಗೂ ತನ್ನ ಕುಟುಂಬವೇ ಮುಖ್ಯ. ತನ್ನ ಸ್ವಹಿತಕ್ಕಾಗಿ ಯಾರನ್ನು ಬೇಕಾದರೂ ನಾಶಪಡಿಸುತ್ತಾನೆ. ಸಾಮಾನ್ಯರನ್ನು ಶೋಷಿಸಿ ತನ್ನ ಏಳ್ಗೆಯನ್ನ ಪಡೆಯುತ್ತಾನೆ. ಇಂತಹ ಅಧಮರು ವೇದಿಕೆಯಲ್ಲಿ ಉದ್ದುದ್ದ ಭಾಷಣ ಬಿಗಿಯುವರು. ಸಮಾಜ ಸೇವಕರೆಂದು ಸ್ವಯಂ ಘೋಷಣೆ. ಗಾಂಧಿವೇಷ ಹಾಕಿರುವ ಹಗಲು ದರೋಡೆಕೋರರು ಕುಯುಕ್ತಿಯ ಇವರನ್ನು ಲೇಖಕರು ನರಿತಲೆಗೆ, ಮೊಸಳೆಯ ದೇಹಕ್ಕೆ ಕಿರುಬನ ಬಾಯಿಗೆ ಹೋಲಿಸಿದ್ದಾರೆ. ಇವರು ಬೆಳೆಸುವ ರಾಜಕಾರಣ ವಂಶವನ್ನು ಹೀಗೆ ನಿಂದಿಸಿದ್ದಾರೆ.

"ಕುಂತಲೇ ಮೊಟ್ಟೆ ಉರುಚುವ ಕೀಡೆಸೊಣ
ಹಾವಾಗಿ ಹರಿದು ಆಡಾಡುತ್ತಾ ನುಂಗುತ್ತೀಯೇ
ಕಂಡ ಕಂಡವರ ಗಂಟ"

(ರಾಜಕಾರಣಿಗೆ)

ತಾನು ಬದುಕಲು ಮಾಡಿಕೊಂಡ ಆವಾಸ ಸ್ಥಾನವನ್ನು ನಾಶಪಡಿಸುವ ಕೀಡೆನೋ 'ರಾಜಕಾರಣಿ' ಎಂಬ ಹೋಲಿಕೆ ಸಹಜವಾಗಿದೆ. ಏಕೆಂದರೆ ಸಮಾಜ ಸೇವೆಯನ್ನು ಮಾಡುವ ಭರವಸೆಯೊಂದಿಗೆ ಚುನಾವಣೆಗೆ ನಿಂತು ಗೆಲ್ಲುತ್ತಾನೆ. ಆದರೆ ಆತ ಚುನಾಯಿಸಿದ ಜನರನ್ನೇ ಶೋಷಣೆಗೆ ಒಳಪಡಿಸುವನು. ಸಮಾಜದಲ್ಲಿ ಜಾತಿ, ಸ್ವಜನ ಪಕ್ಷಪಾತ, ಪ್ರಾದೇಶಿಕ ಭೇದಗಳನ್ನು ಉಂಟುಮಾಡುವನು. ಸಮಾಜದ ಸ್ವಾಸ್ಥ್ಯವನ್ನು ನಾಶ ಪಡಿಸುತ್ತಾನೆ ಎಂಬುದು ಕವಿಯನಿಲುವು. ರಾಜಕಾರಣಿಯನ್ನು ಕೊಳಕು ಮಂಡಲದ ಹಾವಿಗೆ ಹೋಲಿಸಿ, ನಿನ್ನ ನೆರಳು ಬಿದ್ದರೂ ಜನರಿಗೆ ಅಪಾಯ ತಪ್ಪಿದ್ದಲ್ಲ ಎನ್ನುವುದರೊಂದಿಗೆ ರಾಜಕೀಯ ಭ್ರಷ್ಟತೆಯನ್ನು ಟೀಕಿಸುವರು.

"ಅವರಿವರ ತಟ್ಟೆಯ ಅನ್ನ ನಿನಗೆ ಆಹಾರ
ಹಿಂಗದ ಹಸಿವು, ತೀರದ ದಾಹ–ಬಕಾಸುರ!
ಕಾಲಿಟ್ಟ ಊರು ಹೆಣದ ಮಾಳ
ಜಾತಿಯ ಹೆಸರಿನಲಿ ವಿಷ ಬೀಜ ಬಿತ್ತುವ ವಿಷಜಂತು."

(ರಾಜಕಾರಣಿಗೆ)

ರಾಜಕಾರಣಿಗಳ ನಡಾವಳಿಯನ್ನು ಹೀನಾಯವಾಗಿ ನಿಂದಿಸಿರುವ ಲೇಖಕರು, ಕನಿಷ್ಟ ಗುಂಪಿನ ಪ್ರಾಣಿ ಪಕ್ಷಿಗಳಿಗೆ, ವಿಷಜಂತುಗಳಿಗೆ ಅವರನ್ನ ಹೋಲಿಸಿದ್ದಾರೆ. ಈ ಟೀಕೆಯ ಹಿಂದಿನ ಲೇಖಕರ ಮನಸ್ಥಿತಿಯನ್ನ ಗಮನಿಸಬಹುದು. ಪರ್ತಕರ್ತರಾಗಿ ಸೇವೆಸಲ್ಲಿಸಿರುವ ಕೆಂಪೇಗೌಡರು, ರಾಜಕಾರಣವನ್ನು ವಿಭಿನ್ನ, ಸಂವೇ ದನಾ ಶೀಲರಾಗಿ ಗಮನಿಸಿದ್ದಾರೆ. ಅನ್ಯಾಯವನ್ನು ನೇರವಾಗಿ ಟೀಕಿಸಿದ್ದಾರೆ.

ಒಟ್ಟಾರೆ ಶಿವಳ್ಳಿ ಕೆಂಪೇಗೌಡರ ಕವನಗಳಲ್ಲಿನ ಬಂಡಾಯಗುಣವನ್ನು ಈ ಮೇಲಿನಂತೆ ಗಮನಿಸಿದೆ. ಇಲ್ಲಿನ ಕೆಲವು ಮುಖ್ಯಾಂಶಗಳೆಂದರೆ, ಕವಿ ಕೆಂಪೇಗೌಡರು ಅನ್ಯಾಯವನ್ನು ಶೋಷಣೆಯನ್ನು, ನೇರವಾಗಿ ಟೀಕಿಸಿದ್ದಾರೆ, ಯಾವುದೇ ರಾಜಿ ಇಲ್ಲದ ಇವರು, ಆಡಳಿತ ಪಕ್ಷವನ್ನು ತರಾಟೆಗೆ ತೆಗೆದು ಕೊಳ್ಳುವ ವಿರೋಧ ಪಕ್ಷದವರಂತೆ. ಕಳ್ಳರನ್ನ ಪರಿಶೀಲಿಸುವ ನ್ಯಾಯಮೂರ್ತಿಯಂತೆ. ಕೆಲಸಂದರ್ಭದಲ್ಲಿ ಪ್ರಶಾಂತವಾದ ಟೀಕೆ ಇದ್ದರೆ, ಮತ್ತೆ ಕೆಲವು ಸಂದರ್ಭದಲ್ಲಿ ಅಂಬಿಗರ ಚೌಡಯ್ಯನಂತಾಗುತ್ತಾರೆ. ಯಾವುದೇ ದಲಿತ ಕವಿಯಲ್ಲಿಲ್ಲದ ದಲಿತಪರ ನಿಲುವುಗಳು, ಯಾವುದೇ ಚಳುವಳಿಕಾರನಿನಿಲ್ಲದ ಧೈರ್ಯ ಶಿವಳ್ಳಿ ಕೆಂಪೇಗೌಡರ ಬರಹಗಳಲ್ಲಿವೆ.ಸಾಹಿತ್ಯದ ದೃಷ್ಟಿಯಲ್ಲಿ ಪ್ರಥಮ ಪಂಕ್ತಿಗೆ ಸೇರುವ ಕವನಗಳ ಸಂಖ್ಯೆ ಕಡಿಮೆ ಇದ್ದರೂ, ಸಮಜಬೋಧೆ, ಟೀಕೆಯ ಸಾಲಿನಲ್ಲಿ ಈ ಕವನಗಳು ಪ್ರಥಮ ಪ್ರಾಶಸ್ತ್ಯವನ್ನು ಪಡೆಯುತ್ತವೆ.

೩.೭ ಪ್ರಕೃತಿ ಗೀತೆಗಳು

ಕೆಂಪೇಗೌಡರ ಬಹು ಮುಖ್ಯ ವಸ್ತುವೆಂದರೆ ರೈತ, ನಂತರ ಬಂಡಾಯ, ದಲಿತ. ರೈತ ವಿಷಯ ವಸ್ತುವಿನ ಅವಯವಗಳಾದ ಮಳೆ, ನೇಗಿಲು, ಹೊಲಗದ್ದೆಗಳನ್ನು ಕುರಿತಂತೆ ಬೆರಳೆಣಿಕೆಯ ಕವನಗಳಿವೆ. ವಾಸ್ತವವಾಗಿ ರೈತಗೀತೆಗಳ ಅಡಿಯಲ್ಲಿಯೇ ವಿಶ್ಲೇಷಿಸಬಹುದು. ಆದರೂ ಇವುಗಳ ಮನೋಧರ್ಮಕ್ಕನುಗುಣವಾಗಿ ಪ್ರಕೃತಿಗೀತೆಗಳು ಎಂದು ವಿಭಾಗಿಸಿಕೊಂಡಿದ್ದೇನೆ. ಪ್ರಕೃತಿಗೀತೆಗಳೆಂದರೆ

ನವೋದಯದ ಕವಿಗಳ ಕವನದಂತೆ ಎಂದು ಭಾವಿಸುವ ಅಗತ್ಯವಿಲ. ಕೆಂಪೇಗೌಡರ ಯಾವೊಂದು ಕವನವು ಸೌಂದರ್ಯೋಪಾಸಕತೆಗಾಗಿ ರಚನೆಯಾದುವಲ್ಲ. ಮಾನವ, ಮಾನವೀವ ನೆಲೆಯಲ್ಲಿಯೇ ಎಲ್ಲ ಕವಿತೆಗಳು ಮೂಡಿಬಂದಿವೆ. ಮಳೆಯನ್ನು ಕುರಿತ ಇವರ ಈ ಗೀತೆ ಸೊಗಸಾಗಿದೆ.

'ಮುಂಗಾರು' ಕವನ ಪ್ರಕೃತಿ ಗೀತೆಗಳ ಗುಂಪಿಗೆ ಸೇರಿರುವ ಕವನವಾಗಿದೆ. ಮುಂಗಾರು ಬಂದಿತೆಂದರೆ ರೈತ ಸಮುದಾಯಕ್ಕೆ ಸಂತೋಷದ ಉತ್ತುಂಗ ಸ್ಥಿತಿ. ನೇಗಿಲಿಗೆ ಜೀವ ಬರುತ್ತದೆ. ಎತ್ತಿನ ಕೊರಳ ಗೆಜ್ಜೆಯ ನಿನಾದ ಕೇಳಿಬರುತ್ತದೆ. ರೈತನ ಜೀವ ಗೆಲುವಾಗುತ್ತದೆ. ಆಕಾಶದಲ್ಲಿ ಕವಿದಿದ್ದ ಕಾರ್ಮೋಡ ಸಿಡಿಲು ಗುಡುಗುಗಳಿಂದ ಠೇಂಕಾರ ಹಾಕುತ್ತ ಧರಣಿ ದೇವಿಯನ್ನು ತಣಿಸುತ್ತದೆ. ಬೇಸಿಗೆಯ ಬಿರುಬಿಸಿಲಿನಲ್ಲಿ ಕಾದುನಿಂತಿದ್ದ ಭೂಮಿಯು ವರುಣನ ತೋಳತೆಕ್ಕೆಯಲ್ಲಿ ತಂಪಾಗುವಳು. ಮಳೆಯಿಂದ ಜೀವರಾಶಿಗೆಲ್ಲ ಆನಂದ. ಮಕ್ಕಳ ಆಟಕ್ಕೆ ಕೊನೆಯೇ ಇಲ್ಲ. ಮುತ್ತಿನ ಹನಿಯಂತೆ ಬೀಳುವ ಹನಿಗಳೊಡನೆ ಆಟವೋ ಆಟ. ಮನೆಯ ಸೂರಿನಿಂದ ಧಾರಾಕಾರವಾಗಿ ಇಳಿಬೀಳುವ ಮಳೆ ನೀರನ್ನು ಹಿಡಿದು ಆನಂದಿಸುವವರು. ಮಳೆ ಯಿಂದ ಲೋಕವೇ ಸಮೃದ್ಧಿ. ಅದರಲ್ಲು ಭೂಮಿತಾಯಿಯ ಚೊಚ್ಚಲ ಮಗನಿಗೆ ಮಹದಾನಂದ. ಮಳೆ ಯಿಂದ ಸಮೃದ್ಧ ಬೆಳೆ. ತಾನು ಜನ್ಮಕೊಟ್ಟ ಮಕ್ಕಳಿಗೆ ತಾನೇ ಹೆಸರಿಸುವಂತೆ. ತಾನು ಬೆಳೆದ ಬೆಳೆಗ ತಾನೇ ಬೆಲೆ ಕಟ್ಟುತ್ತಾನೆ ರೈತ. ಹಳ್ಳ ಕೊಳ್ಳಗಳಲ್ಲಿ ತುಂಬಿ ಹರಿಯುವ ನೀರಿನಿಂದ ರೈತ ಆನಂದ ಸಾಗರದಲ್ಲಿ ತೇಲಿ ತೇಲಿ ಸಂತಸದ ಕಡಲಲ್ಲಿ ಮುಳುಗುವನು.

ಭಾಷಾ ಮತ್ತು ತಂತ್ರದ ದೃಷ್ಟಿಯಿಂದ ಇದು ಮಹತ್ವದ ಕವನವೇನಲ್ಲ. ರೈತ ಮಳೆಯಿಂದ ಸಮೃದ್ಧನಾಗುವ ಸಂದರ್ಭ. ಪದಗಳ ಲಾಲಿತ್ಯದ ಕೊರತೆ, ಪ್ರಕೃತಿ ಕವನಗಳಲ್ಲಿನ ಸಂಭ್ರಮದ ಕೊರತೆ ಇಲ್ಲಿ ಎದ್ದು ಕಾಣುತ್ತದೆ.

'ನದಿ' ಈ ಗುಂಪಿಗೆ ಸೇರಿರುವ ಮತ್ತೊಂದು ಪುಟ್ಟ ಕವನ. ಮುಂಗಾರು ಕವನಕ್ಕೆ ಹೋಲಿಸಿದರೆ ಗಾತ್ರದಲ್ಲಿ ಕಿರಿದಾದದ್ದು, ಓದುಗನನ್ನು ಸೆಳೆಯುವ ಕಾಂತೀಯ ಗುಣದಿಂದ ಇದು ಮೇಲ್ಮಟ್ಟದಲ್ಲಿ ನಿಲ್ಲುತ್ತದೆ. ನದಿಯನ್ನು ಕವನದ ವಸ್ತುವನ್ನಾಗಿಸಿಕೊಂಡಿದೆ. ನೀರು ಬಹುಪಯೋಗಿ. ನೀರಲ್ಲದೆ ಜೀವಜಂತುಗಳಿಗೆ ಉಳಿವಿಲ್ಲ. ಇದು ಪ್ರಾಣಿ, ಪಕ್ಷಿ ಅಲ್ಲದೆ ಎಲ್ಲ ಜೀವಿಗಳ ಜೀವಧಾತು. ಆದರೆ ಮಾನವನ ಅಪರಿಮಿತ ದಾಹ ತೀರಿಸಲು ಮಳೆ ನೀರು ಸಾಲದೆ, ಹಳ್ಳ, ಕೆರೆ, ಬಾವಿ, ನದಿಗಳ ನೀರು ಬೇಕಾಗಿದೆ. ಬಹುಶಃ ಈ ನದಿ ಮಾನವನ ದಾಹ ತೀರಿಸಲೆಂದೇ ಘಟ್ಟದಲ್ಲಿ ಹುಟ್ಟಿ ಹರಿದು ಹಳ್ಳಕೊಳ್ಳ ಸೇರುತ್ತದೆ.

"ಜಲಪಾತ ದೆಡೆಯಲ್ಲಿ ರುದ್ರರಮಣೀಯವಾಗಿ ಧುಮುಕಿ
ಮಿಂಚಿನ ಹೊಳೆಯಾಗಿ ತಂತಿಯಲಿ ಹರಿದು
ನಾಡಿನ ಮೂಲೆ ಮೂಲೆಯಲ್ಲು ಬೆಳಗುತ್ತದೆ."

(ನದಿ)

ಬೆಟ್ಟದ ತಪ್ಪಲಿನಲ್ಲಿ ಉಗಮಿಸುವ ನದಿಗಳು ತಾವು ಕೊನೆಯದಾಗಿ ಸೇರುವುದು ಸಾಗರ ಸಮುದ್ರಗಳನ್ನು. ಈ ನಡುವೆ ತನ್ನ ಸಾರ್ಥಕ್ಯವನ್ನುಂಟು ಮಾಡಿಕೊಳ್ಳುತ್ತದೆ. ಜೀವ ಜಂತುಗಳಿಗೆ ಕುಡಿಯಲು,

ಮಾನವಾದಿಗಳ ಬಹುಪಯೋಗಕ್ಕೆ ಬಳಕೆಯಾಗುತ್ತದೆ. ಜಲಪಾತಗಳಲ್ಲಿ ಧುಮ್ಮಿಕ್ಕುವ ರುದ್ರರಮಣೀಯತೆಯು ಚೆಲುವು ನೋಡುಗರ ಕಣ್ಣುಗಳಿಗೆ ಆನಂದವನ್ನುಂಟು ಮಾಡುತ್ತದೆ. ಸಾವಿರಾರು ಮೈಲಿಗಳಿಂದ ಹರಿದು ಬರುವಾಗ ಅನೇಕ ಕಡೆ ವಿದ್ಯುತ್‌ಶಕ್ತಿ ಉತ್ಪಾದನೆಗೂ ಬಳಕೆಯಾಗುತ್ತದೆ. ಆ ಮೂಲಕ ನಾಡಿ ನಾದ್ಯಂತ ಬೆಳಕನ್ನು ನೀಡುತ್ತದೆ. ಬರಡು ಭೂಮಿಗೆ ಬೇಸಾಯಕ್ಕೆ ಸಹಕಾರಿಯಾಗುತ್ತದೆ. ಮುಂದೆ ಹರಿದು ನದಿ ಮುಖಜಭೂಮಿಯಾಗಿ ಫಲವತ್ತತೆಯನ್ನ ಉಂಟುಮಾಡುತ್ತದೆ. ಕೊನೆಯದಾಗಿ ಸಾಗರ ಸಮುದ್ರದಲ್ಲಿ ಲೀನವಾಗುತ್ತದೆ. ಇದು ನದಿಯ ಶೈಶವದಿಂದ ವೃದ್ಧ್ಯಾಪ್ಯದವರೆಗಿನ ಜೀವನ ಚಕ್ರದಂತಿದೆ. ಒಟ್ಟು ನದಿಯನ್ನು ಕುರಿತ ಒಂದು ಪುಟ್ಟ ಸುಂದರ ಕವನವಾಗಿದೆ.

ವಸುಂಧರೆ ಋತುಮಾನಕ್ಕೆ ಅನುಗುಣವಾಗಿ ಸಿಂಗಾರವಾಗುವುದು ಕವಿಯ ಕಲ್ಪನಾ ಲೋಕದಲ್ಲಿ ಮತ್ತಷ್ಟು ಸುಂದರವಾಗಿ ಕಾಣುತ್ತದೆ. ಪ್ರಕೃತಿ ಮಾತೆ ಈ ಹೊಸ ಹೊಸ ರೂಪವನ್ನು ತಾಳುವುದೇ ಕವಿಭಾವವನ್ನು ಉತ್ತೇಜಿಸುತ್ತದೆ. ಪ್ರಸ್ತುತ 'ಹೊಸ ತಿರುವು' ಎಂಬ ಕವನದಲ್ಲಿ ಮುಂಗಾರಿನ ಸಂದರ್ಭದಲ್ಲಿ ಉಂಟಾಗುವ ಪ್ರಕೃತಿ ಮಾತೆಯಯ ಸೊಬಗನ್ನು ಪದ್ಯದ ಆದಿಯಲ್ಲಿ ಬಣ್ಣಿಸುವರು. ಕಡು ಬೇಸಿಗೆಯಲ್ಲಿ ಕಾದನೆಲವು ಮುಂಗಾರಿನ ಮಳೆಯಿಂದ ತಂಪಾಗುತ್ತದೆ. ಮನದಣಿಯೇ ವರ್ಷಧಾರೆಯನ್ನು ಸವಿದ ಭೂಮಿ ಹೊಸದೊಂದು ಸೊಗಸನ್ನು ಪಡೆಯುತ್ತದೆ. ಬೇಸಿಗೆಯಲ್ಲಿ ಬತ್ತಿ ಹೋದ ಹಳ್ಳಕೊಳ್ಳಗಳು ಉಕ್ಕಿ ಹರಿಯುತ್ತವೆ. ಕೆರೆಯೂ ತುಂಬಿ ತುಳುಕುತ್ತದೆ ಇದರಿಂದ ಮನಸ್ಸು ಮುದುಗೊಳಿಸುವುದು. ಹೇಗೆಂದರೆ,

"ಬಿಗಿಗೊಂಡ ನರಮಂಡಲ ಸಡಿಲವಾಗಿ
ನಿರಾಳ ಉಸಿರು
ಹರಕೆ ಫಲಿಸಿದಂತೆ ತರುಲತೆಗಳ
ಎಲೆಗಳಿಂದ ಆನಂದಭಾಷ್ಪ
ಮಣ್ಣಿನ ಕಂಪುವಾಸನೆಗೆ ಮೂಗರಳಿ
ತಂಗಾಳಿ ಕಚಗುಳಿಯಲ್ಲಿ ತನುಮನ
ಚಿಲಿಪಿಲಿ ಹಾಡುವ ಹಕ್ಕಿಗಳ ಗಾನದಲಿ ಲೀನ"

(ಹೊಸ ತಿರುವು)

ಬೇಸಿಗೆಯಲ್ಲಿ ಬೆಂದ ಭೂಮಿ ಶಾಖದಿಂದ ಸಾಕಾಗಿರುತ್ತದೆ. ಮುಂಗಾರು ಮಳೆಯಿಂದ ನಿರಾಳ ವಾಗುತ್ತದೆ. ಅದು ಹೇಗೆಂದರೆ ಒತ್ತಡಗಳಿಂದ ಬಿಗಿಗೊಂಡ ನರಮಂಡಲ ಪ್ರಶಾಂತ ವಾತಾವರಣದಿಂದ ಹಗುರವಾದಂತೆ. ಮರ, ಲತೆ ಬಹುದಿನಗಳಿಂದ ಹರಕೆ ಮಳೆರಾಯನಾಗಿ ಮಾಡಿಕೊಂಡು, ಮಳೆಬಂದ ದಿನ ಅದು ಫಲಿಸಿದಂತೆ. ಎಲೆಗಳ ಅಂಚಿನಲ್ಲಿ ಬೀಳುವ ಹನಿಗಳನ್ನು ತರುಲತೆಗಳ ಆನಂದಬಾಷ್ಪ ಎಂದಿದ್ದಾರೆ. ಮೊದಲ ಮಳೆಗೆ ಮಣ್ಣಿನ ವಾಸನೆ. ಬಹಳ ಹಿತಕರವಾದ ಕಂಪು ರೈತನ ಮೂಗನ್ನು ಅರಳಿಸುತ್ತದೆ. ಆನಂದ ದಲ್ಲಿ ತೇಲಾಡುವಂತೆ ಮಾಡುತ್ತವೆ. ಬೀಸುವ ಗಾಳಿಯು ಮಳೆಯ ಕಾರಣದಿಂದಾಗಿ ತಂಪಾಗಿರುತ್ತವೆ. ಚಿಗುರಿದ ಮರಗಳಲ್ಲಿ ಆನಂದದಿಂದ ಪಕ್ಷಿಗಳ ಚಿಲಿಪಿಲಿಗಳ ನಿನಾದ ಪ್ರಕೃತಿದೇವಿಗೆ ಮತ್ತಷ್ಟು ಸೊಗಸನ್ನುಂಟು ಮಾಡುತ್ತದೆ. ಇಂತಹ ವಾತಾವರಣದಲ್ಲಿ ನನ್ನ ಬಾಳಸಂಗಾತಿಯು ತನ್ನ ಕಾಯಕದಲ್ಲಿ ತೊಡಗಿಹಳು. ಮನೆಯ

ಮುಂದೆ ಸಗಣಿ ಹಾಕಿ, ರಂಗವಲ್ಲಿ ಇಟ್ಟು ನಾಳಿನ ಸೂರ್ಯನನ್ನು ಸ್ವಾಗತಿಸುತ್ತಿದ್ದಾಳೆ. ಈ ಎಲ್ಲಾ ಕಾರಣಗಳಿಂದ, ಅಪಾರ ಆನಂದದಿಂದ ಕವಿಗೂ ಆನಂದ ಬಾಷ್ಪವಾಗುತ್ತದೆ.

'ಹೊಸ ತಿರುವು' ಒಂದು ಪುಟ್ಟ ಪ್ರಕೃತಿ ಗೀತೆ. ಈ ಮೊದಲೇ ಉಲ್ಲೇಖಿಸಿದಂತೆ ಶಿವಳ್ಳಿ ಕೆಂಪೇಗೌಡರ ಪ್ರಕೃತಿ ಗೀತೆಗಳೆಂದರೆ, ಅದು ಬಹುತೇಕ ರೈತ ಸಂಬಂಧಿತವಾದ ಮಾನವ ಪ್ರಕೃತಿಗೆ ಸಂಬಂಧಪಟ್ಟದಾಗಿದೆ. ಈ ಕವನವಲ್ಲಿಯೂ ಎಲ್ಲ ಹೊಸ ತಿರುವಿಗೆ ಕಾರಣವಾದುದು ಮುಂಗಾರು ಮಳೆ. ಈ ವರ್ಷದ ಆರಂಭದೊಂದಿಗೆ ಭೂಮಂಡಲದ ಎಲ್ಲ ಜೀವಿಗಳಲ್ಲು ಹೊಸತಿರುವು ಉಂಟಾಗುತ್ತದೆ. ಅದು ಮಾನವ, ಪ್ರಾಣಿ, ಪಕ್ಷಿಗಳೇ ಅಲ್ಲದೆ ತರುಲತೆಗಳಲ್ಲಿಯೂ ಕೂಡ ಎಂದಿದ್ದಾರೆ. ಈ ಎಲ್ಲ ಅಂಶಗಳು ಅತ್ಯಂತ ವಾಸ್ತವದ ನೆಲೆಯಲ್ಲಿ ಮೂಡಿಬಂದವುಗಳಾಗಿವೆ. ಈ ಕವಿತೆ ಯಾವುದೇ ಛಂದೋ ನಿಯಮಗಳಿಗೆ ಒಳಪಡದೆ ರಚನೆಗೊಂಡಿರುವ ಕವನವಾಗಿದೆ.

ಶಿವಳ್ಳಿ ಕೆಂಪೇಗೌಡರ ಕಸುವು ಎದ್ದು ಕಾಣುವುದು ಅವರ ರೈತ ಗೀತೆಗಳಲ್ಲಿ. ಎರಡನೆಯ ಪ್ರಾಶಸ್ತ್ಯ ಅವರ ದಲಿತ ಬಂಡಾಯ ಹಾಗೂ ಶೋಷಿತ ಪರ ಗೀತೆಗಳಲ್ಲಿ ಪ್ರಕೃತಿಗೆ ಸಂಬಂಧಿಸಿದಂತೆ ಅವರ ಕವನ ಬಹಳ ವಿರಳ. ಮತ್ತೊಂದು ರೀತಿಯಲ್ಲಿ ಹೇಳಬೇಕಾದರೆ ಪ್ರಕೃತಿಯ ವರ್ಣನೆಗಾಗಿ ಕವಿತೆ ಬರೆದವರೆ ಅಲ್ಲ. ಅವರ ಕವನಗಳದ್ದು ಸಾಮಾಜಿಕ ಕಳಕಳಿಗಾಗಿನ ರಚನೆಗಳಾಗಿವೆ. ಅವರ ಈ ಕೆಲವು ಕವನಗಳನ್ನು ಪ್ರಕೃತಿಗೀತೆಗಳೆಂದು ವಿಭಾಗಿಸಿಕೊಂಡಿದ್ದರೂ ಅದನ್ನು ಸಮರ್ಥಿಸುವ ಅರ್ಥಪೂರ್ಣ ವ್ಯಾಖ್ಯಾನ ನನ್ನಲ್ಲಿ ಇಲ್ಲ ಎನ್ನಬೇಕಾಗಿದೆ. ಆದರೂ ಮಳೆ, ನದಿಗಳನ್ನು ಕುರಿತಂತೆ ಭಾಸವಾಗುವ ರಚನೆಗಳಾದುದರಿಂದ ಈ ಮೂರು ಕವಿತೆಗಳನ್ನು ಶಿವಳ್ಳಿ ಕೆಂಪೇಗೌಡರ ಪ್ರಕೃತಿಗೀತೆಗಳೆಂದು ಒಪ್ಪಬಹುದಾಗಿದೆ.

೩.೮ ಬಡತನ ಮತ್ತು ಶೋಷಣೆಗೆ ಸಂಬಂಧಿಸಿದ ಗೀತೆಗಳು

ಕೆಂಪೇಗೌಡರ ಕವನಗಳಲ್ಲಿ ಶೋಷಣೆಗೆ ಒಳಗಾದವರನ್ನು ಕುರಿತಂತಹ ರಚನೆಗಳನ್ನು ಈ ಸಾಲಿನಲ್ಲಿ ವಿಶ್ಲೇಷಿಸಲಾಗಿದೆ. ಅಂದ ಮಾತ್ರಕ್ಕೆ ಗೆರೆಹಾಕಿದಂತೆ ಶಿವಳ್ಳಿಯವರ ಕವನಗಳನ್ನು ವಿಭಾಗಿಸಲಾಗದು. ಏಕೆಂದರೆ ಅವರ ಎಲ್ಲಕವನಗಳ ಮೂಲನೆಲೆ ರೈತ ಮತ್ತು ಕಾರ್ಮಿಕರ ಸಂಬಂಧಿತವಾದವು. ಈ ಎರಡು ನೆಲೆಗಳು ಬಡತನದೊಂದಿಗೆ ಅವನಾಭಾವ ಸಂಬಂಧ ಹೊಂದಿದವುಗಳು. ಆದ್ದರಿಂದ ಕ್ವಚಿತ್ತಾದ ಅಂತರಗಳಲ್ಲಿ ಅಥವಾ ಕೂದಲೆಳೆಯ ಸೀಳುವಿಕೆಯಿಂದ ಈ ವಿಭಾಗವನ್ನ ಮಾಡಿಕೊಳ್ಳಲಾಗಿದೆ.

'ವಿಷವರ್ತುಲ' ಎಂಬ ಕವಿತೆಯಲ್ಲಿ ಸಾಂಸಾರಿಕ ಬದುಕಿನಲ್ಲಿ ಬಂದೊದಗುವ ಅನಿವಾರ್ಯ ಕಾರ್ಯಗಳು ಆ ಕಾರಣದಿಂದಾಗಿ ಸಂಭವಿಸುವ ಆರ್ಥಿಕ ಸಮಸ್ಯೆಗಳನ್ನು ಎಣಿಯುತ್ತಾ ಪದ್ಯ ಆರಂಭವನ್ನು ಪಡೆಯುತ್ತದೆ. ಭಾರತೀಯ ಸಂಪ್ರದಾಯದ ಅನಿವಾರ್ಯ ಪದ್ಧತಿಗಳಾದ ವಿವಾಹ, ಪ್ರಸ್ತ, ಬಾಣಂತನ ಮತ್ತು ಖಾಯಿಲೆಗಳಿಂದ ಸಾಲಬಾಧೆ. ಸಾಲಗಾರ ಆಧಾರಕ್ಕಾಗಿ ಸುಳ್ಳುಪತ್ರದ ಮೇಲೆ ಹೆಬ್ಬೆಟ್ಟು ಒತ್ತುವುದು. ಇವೇ ಕಷ್ಟಗಳಿಂದ ತೇದು ಹೋದ ಬದುಕಿನಲ್ಲಿ ಒಮ್ಮೆಯಾದರೂ ಸಿಹಿ ಊಟ ಮಾಡಿದ್ದು ನೆನಪಿಲ್ಲ.

"ಕಾಲದೊಟ್ಟಿಗೆ ಬೆಳೆಯಿತು
ಬಡ್ಡಿ-ಗಡ್ಡ
ಮೂಳೆ ಮುರಿದ ದುಡಿತ
ಬಿಸಿಲು ಧಗೆ ಹೊಡೆತ ಉಗಿತ
ಕಿತ್ತು ಬರುವ ಬೆವರು-ರಕ್ತ
ಹಾಸಿದ್ದೇ ಒದೆಯುವುದು" - (ವಿಷವರ್ತುಲ)

ಅಪಾರವಾದ ಆರ್ಥಿಕ ಸಂಕಷ್ಟ. ಈ ಸ್ಥಿತಿಗೆ ಕಾರಣ ವ್ಯಕ್ತಿಯ ವಿಲಾಸಿ ಬದುಕಲ್ಲ, ಅನಿವಾರ್ಯವಾಗಿ ಬಂದೊದಗಿದ ಮದುವೆ ಕಾಯಿಲೆಗಳಿಂದ. ಸಣ್ಣ ಸಾಲವನ್ನು ಸರಿಯಾಗಿ ತೀರಿಸಲಾಗಲಿಲ್ಲ. ಅಸಲಿಗೆ ಗೊಬ್ಬರವಿಲ್ಲದೆ ಬೆಳೆಯುವ ಗಡ್ಡದಂತೆ ಬಡ್ಡಿ ಬೆಳೆದು ನಿಂತಿದೆ. ಹಗಲಿರುಳು ದುಡಿದರೂ ತೀರದ ಸಾಲ. ಬದುಕೋ ಹಾಸಿದ್ದೇ ಒದೆಯುವ ನಿಕೃಷ್ಟಸ್ಥಿತಿ. 'ಒಂದು ಬಟ್ಟೆ ಅಗಸನ ಕಲ್ಲಿನ ಮೇಲೆ ಮತ್ತೊಂದು ಕುಂಡಿ ಮೇಲೆ' ಎಂಬ ಗಾದೆಗೂ ಮೀರಿದ ಬಡತನ. ಹೊದೆಯಲು ಹೊದಕಿಲ್ಲದೆ ಚಳಿಯ ಚೂರಿ ಇರಿತ. ಗಂಜಲದ ಗುಂಡಿಯಲ್ಲಿ ಬಳಸದೆ ಬಿದ್ದಿರುವ ತಟ್ಟೆ. ಅನ್ನವಿಲ್ಲದಿದ್ದರೆ ತಟ್ಟೆಗೇನು ಕೆಲಸ? ತಂಗಳು ತಿಂದು ಒಂದಿಷ್ಟು ನೀರು ಕಣ್ಣೀರಿನೊಂದಿಗೆ ಕುಡಿಯುವುದು.

'ವಿಷವರ್ತುಲ' ಕವನ ಅತ್ಯಂತ ಕಡುಬಡವನ ಬದುಕಿನ ಚಿತ್ರಣ. ಇಲ್ಲಿನ ಬಡವನ ಬಡತನಕ್ಕೆ ಒದಗಿದ ಕಾರಣವನ್ನು ಲೇಖಕರು ನೀಡಿದ್ದಾರೆ. ಅಲ್ಲದೆ ಆರ್ಥಿಕ ಸಮಸ್ಯೆಯ ಪರಿಣಾಮಗಳನ್ನು ತಿಳಿಸಿದ್ದಾರೆ. ಪಡೆದ ಸಾಲ, ತೀರುಗಿಸಲಾಗದ ಬೆಳೆದ ಬಡ್ಡಿ, ಈ ವಿಷವರ್ತುಲದಿಂದ ಬಡವ ಹೊರಬರಲಾಗದೆ ಮತ್ತೆ ಮತ್ತೆ ಸಿಲುಕಿ ಕೊಂಡು ತನ್ನ ಅವನತಿಯನ್ನು ತಾನೇ ತಂದುಕೊಳ್ಳುತ್ತಿದ್ದಾನೆ. ವಾಸ್ತವವಾಗಿ ಸಾಮಾಜಿಕ ಜವಾಬ್ದಾರಿಗಳು ಇಲ್ಲಿನ ಸಂಕಷ್ಟದ ಮೂಲಗಳಾಗಿವೆ. ನಂತರದ ಕಾರಣ ಸಾಲತೀರಿಸಲಾಗದ ಸ್ಥಿತಿಗಳು. ಶಿವಳ್ಳಿ ಯವರು ಮುಖ್ಯವಾಗಿ ಒಬ್ಬ ರೈತ. ಹಳ್ಳಿಗ, ಸಂವೇದನಾಶೀಲ ವ್ಯಕ್ತಿ. ಗ್ರಾಮೀಣ ಬದುಕಿನ ಒಳುಕುಗಳನ್ನು ಎವೆಯಿಕ್ಕದಂತೆ ಗಮನಿಸಿ ಈ ಕವಿತೆಯ ಮೂಲಕ ಎಣೆದಿದ್ದಾರೆ. ತಮ್ಮ ಅನುಭವವೂ ಕೂಡ ಆಗಿದೆ.

ಬಡತನ ಮತ್ತು ಶೋಷಿತ ಗೀತೆಗಳ ಸಾಲಿಗೆ ಸೇರುವ ಮತ್ತೊಂದು ಕವನ 'ದುರಂತ.' ಹಾರ್ಮೊನಿಯಂ ನುಡಿಸುತ್ತಾ, ನಾಟಕ ಕಲಿಸುವ ಮೇಷ್ಟರ ಬದುಕನ್ನ ಕುರಿತ ಕವನ. ನಾಟಕ ಕಲಿಸಿ ನೂರಾರು ರಾಗಗಳನ್ನು, ಪಾತ್ರಗಳನ್ನ ಕಟ್ಟಿದವನಿಗೆ ತನ್ನ ಬದುಕನ್ನ ಕಟ್ಟಿಕೊಳ್ಳಲಾಗಲಿಲ್ಲ. ಆರ್ಥಿಕ ಸಮಸ್ಯೆಯೊಂದಿಗೆ ದೈಹಿಕವಾಗಿ ಕೃಶವವಾಗಿದ್ದಾರೆ. ಕಾರಣ ಹತ್ತಾರು ವರ್ಷಗಳಿಂದ ಹಾಡಿ ಹಾಡಿ ಕಂಠಶೋಷಣೆ ಮಾಡಿಕೊಂಡಿದ್ದು ಒಂದೆಡೆಯಾದರೆ. ಬೀಡಿ ಸೇದಿದರ ಫಲ ಮತ್ತೊಂದೆಡೆ. ಈ ಕಾರಣಗಳಿಂದ ಕೆಮ್ಮುತ್ತಾ ಆತಂಕದಲ್ಲಿ ಕುಳಿತ ನಾಟಕದ ಮೇಷ್ಟ್ರು. ಕೆಮ್ಮಿ ಸಾಕಾಗಿ ಏದುಸಿರು ಬಿಡುತ್ತಾ ಪಿಳಿಪಿಳಿ ಕಣ್ಣುಗಳನ್ನು ಬಿಡುತ್ತಿದ್ದಾನೆ. ಈ ಆತಂಕಕ್ಕೆ ಕಾರಣ ನಾಳಿನ ದಿನಗಳಲ್ಲಿ ಬಂದೆರಗಬಹುದಾದ ಮಳೆ. ಮಳೆಗೂ ಈತನಿಗೂ

ಸಂಬಂಧವೇನೆಂದರೆ ಈತನ ಮನೆಯ ಭೌತಿಕ ಸ್ಥಿತಿ. ಈ ಎಲ್ಲ ಕಾರಣಗಳಿಂದ ತುಂಬ ಆತಂಕದಲ್ಲಿ ಕುಳಿತಿಹರು.

"ಮುಂಬರುವ ಮುಂಗಾರು ಮಳೆಗಾಳಿಗೆ ಮುರುಕಲು ಮನೆ
ಮುರಿದು ಬೀಳಬಹುದೆಂಬ ಭಯ
ಸಜೀವ ಸಮಾಧಿಯ ನೆನಪಾಗಿ ದಿಗಿಲು!
ಸಿಂಬಳಕ್ಕಂಟಿದ ನೊಣದ ಬದುಕು."

(ದುರಂತ)

ಮೇಲಿನ ಪದ್ಯಭಾಗದಲ್ಲಿ ಕೊನೆಯ ಸಾಲು ವಿಶೇಷವಾಗಿದೆ. ನಾಟಕದ ಮೇಷ್ಟ್ರು ಆ ಬದುಕನ್ನು ಬಿಡಬೇಕೆಂದರೂ ಬಿಡಲಾಗದು. ಸಿಂಬಳದ ನೊಣದಂತೆ ಎಂಬ ಉಪಮೆ ಔಚಿತ್ಯ ಪೂರ್ಣವಾಗಿ ಮೂಡಿಬಂದಿದೆ. ಈ ಬದುಕು ಸಾಕು ನನ್ನನ್ನು ಕರೆದುಕೋ ಎಂದು ಭಗವಂತನನ್ನು ಕರೆದೂ ಕರೆದೂ ಸಾಕಾಗಿ ಹೋದನು. ಬೆಳೆದು ನಿಂತಿರುವ ಹೆಣ್ಣುಮಕ್ಕಳನ್ನು ಮದುವೆ ಮಾಡಲು ಸಾಧ್ಯವಿಲ್ಲದ ಸ್ಥಿತಿ. ಕೆಟ್ಟು ಹೋಗಿರುವ ಹಾರ್ಮೋನಿಯಂ ನುಡಿಸುತ್ತಾ, ಹಾಡುತ್ತಿದ್ದಾರೆ. ನಿರಂತರವಾಗಿ ಹಾಡುತಿದ್ದಾರೆ. "ಕಂಡೂ ಕಂಡೂ ನೀ ಎನ್ನ ಕೈ ಬಿಡುವರೇ ಕೃಷ್ಣಾ?" ಎಂಬ ಉಕ್ತಿಯೊಂದಿಗೆ ಕವನ ಮುಕ್ತಾಯವಾಗಿದೆ. 'ಕೋರಿಯಾದಾಗ ಊರೆಲ್ಲ ನೆಂಟರು ಕೋಲೂರುವಾಗ ಯಾರೂ ಇಲ್ಲ'. ಎಂಬ ಗಾದೆಯನ್ನು ಬಿಂಬಿಸುವಂತಿದೆ ಈ ಕವನ. ಶಕ್ತಿಯಿದ್ದಾಗ, ಬಳಕೆಗೆ ಬರುವಾಗ ಎಲ್ಲರೂ ದುಡಿಸಿಕೊಂಡು ಬಳಸಿಕೊಳ್ಳುವರು. ಶಕ್ತಿ ಕುಂದಿದಾಗ ಯಾರು ಹತ್ತಿರ ಬರುವುದಿಲ್ಲ. ಕಷ್ಟ ಬಂದಾಗ ದೇವರನ್ನು ನೆನೆಯುವವರ ಉದಾಹರಣೆಯಾಗಿಯೂ ಕವನ ರಚಿತವಾಗಿದೆ. ಈ ಮೂಲಕ ಲೇಖಕರು ಸಮಾಜಕ್ಕೂ ದುಡಿಯುವ ವ್ಯಕ್ತಿಗೂ ಎಚ್ಚರಿಕೆಯ ಸಂದೇಶವನ್ನು ನೀಡಿದ್ದಾರೆ. ಕಲಾವಿದರನ್ನು ಈ ರೀತಿ ನಡೆಸಿಕೊಂಡ ಸಮಾಜಕ್ಕೆ ಛೀಮಾರಿ ಹಾಕಿದ್ದಾರೆ.

'ಮಗುವೇಕೆ ಅಳುತ್ತಿದೆ' ಬಡತನದ ಚಿತ್ರಣವನ್ನು ನೀಡುವ ಮಗದೊಂದು ಕವನ. ಕವಿಯೊಬ್ಬನ ಕುಟುಂಬದ ಕರುಣಾಜನಕ ಸ್ಥಿತಿ ಕವನದಲ್ಲಿದೆ. ಏಕಾಂತದಲ್ಲಿ ಕುಳಿತಿದ್ದ ಕವಿ ಬರೆಯುತ್ತಿದ್ದ ಕವನವನ್ನು ನಿಲ್ಲಿಸಿದನು. ಹಾಗೇ ಶೂನ್ಯಾಕಾಶವನ್ನು ಒಮ್ಮೆ ನೋಡಿದನು. ಮತ್ತೆ ಸ್ಥಿತಪ್ರಜ್ಞನಾಗಿ ಅಳುತ್ತಿದ್ದ ಮಗುವಿನ ಕಡೆಗೆ ಗಮನ ಹರಿಸಿದನು. ಕವನದ ಮುಕ್ತಾಯದ ಹಂತದ ಚಿಂತನೆಯಲ್ಲಿದ್ದನು. ಈ ನಡುವೆ ಪಕ್ಕದ ಮನೆಯ ರೇಡಿಯೋದ ಪರಧ್ವನಿ, ಮಗುವಿನ ಅಳು. ಅಳುತ್ತಿರುವ ಮಗು ತನ್ನದೇ ಎಂದು ತಿಳಿದುಬಂದಿತ್ತು. ಮಗುವಿನ ರೋಧನೆ ಹೆಚ್ಚುತ್ತಲೇ ಇದೆ. 'ಕಾಲಿಗೆ ಕೀಕೊಟ್ಟ' ಲೇಖಕ ಇವಳೇನು ಮಾಡುತ್ತಿದ್ದಾಳೆಂದು ಮನದಲ್ಲೇ ರೇಗುತ್ತಾ ಮಗುವಿನ ಬಳಿಗೆ ಬಂದರು. ಮಡದಿಯ ಕಂಗಳಿಂದ ನೀರಾಡುತ್ತಿದೆ. ಬಡತನದ ಬೇಗೆಯಲಿ ಬೆಂದ ಮಗುವಿಗೆ ಕುಡಿಯಲು ಹಾಲೂ ಇಲ್ಲದ ಕಠಿಣ ಸ್ಥಿತಿ. ಮಗುವನ್ನು ತಾನೇ ಎತ್ತಿಕೊಂಡು ಗಾಳಿ ಬೀಸುವ ಕಡೆಗೆ ಬರುವರು. ಮುಂದಿನ ಸಾಲುಗಳಲ್ಲಿನ ಬರಹವು ಓದುಗನನ್ನು ಬೆಚ್ಚಿ ಬೀಳಿಸುತ್ತದೆ. ಅಪಾರವಾದ ಹಸಿವಿನಿಂದ ಕಂಗೆಟ್ಟಿರುವ ಮಗು. ಹಾಲು ಕುಡಿಸಲೂ ಹಣವಿಲ್ಲದ ತಂದೆ-ತಾಯಿ. ಎದುರು ಮನೆಯ ಮಗುವು ಹಾಲನ್ನು ಕುಡಿಯುತ್ತಿದೆ, ಈ ಮಗುವಿನ ರೋಧನೆ ಹೇಳತೀರದು. ಮಗುವಿನ ತಂದೆಗೆ ಈ ರೀತಿಯ ನಿರ್ಗತಿಕ ಸ್ಥಿತಿಯಿಂದ ದುಃಖವಾಗುತ್ತದೆ.

ಒಂದೆಡೆ ಸಂತೋಷದಿಂದ ಬಾಳುತ್ತಿರುವ ಕುಟುಂಬ. ಮತ್ತೊಂದೆಡೆ ನಿರ್ಗತಿಕ ಕುಟುಂಬ. ಇವುಗಳ ತೌಲನಿಕತೆ ಇಲ್ಲಿದೆ. ಆರ್ಥಿಕ ಸಂಕಟದಲ್ಲಿರುವ ಕುಟುಂಬವೊಂದನ್ನು ಕಣ್ಣಮುಂದೆ ಕಟ್ಟುವ ಸುಂದರ ರೂಪಕದಂತಿದೆ. ತಂದೆ-ತಾಯಿ ಮತ್ತು ಮಗುವಿನ ನಡುವಿನ ವಾತ್ಸಲ್ಯದ ಚಿತ್ರಣವನ್ನು ಗುರುತಿಸ ಬಹುದು. ಅಳುವ ಮಗು, ಅದನ್ನು ನೋಡಿ ತಮ್ಮ ಸ್ಥಿತಿಯನ್ನು ನೆನೆದು ದುಃಖಿಸುವ ಪೋಷಕರು. ಈ ಎಲ್ಲ ಅಂಶಗಳನ್ನು ಈ ಕವಿತೆಯಲ್ಲಿ ಗುರುತಿಸಬಹುದು.

ಮುಂದಿನ ಕವನ 'ಶೋಷಿತ'. ಇಲ್ಲಿನ ಕವನದ ಮೂಲಕ ನಿರೂಪಕ ಸ್ವಗತವಾಗಿ ತನ್ನ ಶೋಷಣೆಯನ್ನು ತಾನೇ ಚಿತ್ರಿಸುತ್ತಾ ಸಾಗುತ್ತಾನೆ. ಸಮಾಜ ರಹಿತನಾಗಿ ಮಾನವನ ಬಾಳುವೆ ಕಷ್ಟ. ಆದರೆ ಸಮಾಜದ ನಡುವೆ ಬಾಳುವುದು ಅದಕ್ಕಿಂತಲೂ ಕಷ್ಟ. ಸಮಾಜದ ನಡುವಿನ ಬಾಳು ಅರಣ್ಯದ ನಡುವಿನ ಬಾಳಿನಂತೆ. ಮರಗಿಡಗಳು. ಕಲ್ಲು ಮುಳ್ಳುಗಳ ನಡುವೆ ಸಾಗುವ ಅರಣ್ಯದ ಬದುಕು ಹೇಗೆ ಕಠಿಣವೋ ಜನರ ನಡುವೆಯೂ ಹಾಗೆಯೇ ಎಂದಿದ್ದಾರೆ. ಹೇಗೆ ಬಾಳಿದರೂ ಜನರು ಟೀಕೆ ಮಾಡೇ ಮಾಡುತ್ತಾರೆ. ಮುಂದೆ ಮುಖಸ್ತುತಿ. ಹಿಂದೆ ನಿಂದನೆ ಇದು ಸಮಾಜವಾಸಿಯು ಎದುರಿಸುವ ಸಂಕಟ ಈ ಕಷ್ಟದಲ್ಲಿ ಬಾಳಿದರೂ ಬಡತನದ ಬೇಗೆ ಶೋಷಿತನದು. ಹಾಸಿಗೆ ಹೊದಿಕೆಗಳು ಭೂಮಿ ಆಕಾಶಗಳು. ಬಿಸಿಲೆನ್ನದೆ. ಮಳೆಯೆನ್ನದೆ ಬಾಳಬೇಕಾದ ಗೋಳು. ದೇಶಪ್ರೇಮದ ಹೆಸರಿನಲ್ಲಿ ನಾಗರೀಕನಾಗಿ ಬಾಳುವ ಪ್ರಯತ್ನದಲ್ಲಿದ್ದಾನೆ.

"ನನ್ನ ಮೈಯ ಬಾಡ ಇಷ್ಟಿಷ್ಟೇ
ಕಿತ್ತು ತಿನ್ನುವ ಹದ್ದು ಕಾಗೆಗಳಿಗೆ
ವಿಧಿ ಇಲ್ಲದೆ ಮೈ ಒಪ್ಪಿಸಿ
ದಿನವೂ ಸತ್ತು ಸತ್ತು ಹುಟ್ಟುತ್ತಿದ್ದೇನೆ"

(ಶೋಷಿತ)

ಸಂಕಷ್ಟ ಅನಿವಾರ್ಯವಾಗಿದೆ. ಅನುಭವಿಸೇ ತೀರಬೇಕಾಗಿದೆ. ನಮ್ಮನ್ನು ಶೋಷಿಸುವವರು ರಣ ಹದ್ದುಗಳಂತೆ. ವಿಧಿ ಇಲ್ಲದೆ ಈ ಕಾರ್ಯಕ್ಕೆ ಒಳಗಾಗಬೇಕಾಗುತ್ತದೆ. ಆದ್ದರಿಂದಲೇ ದಿನವೂ ಶೋಷಣೆಯಿಂದ ಸಾವು, ಮತ್ತೆ ಅನಿವಾರ್ಯತೆಯ ಬಾಳಿಗಾಗಿ ಮರುಹುಟ್ಟು. ಹೀಗೆ ಶೋಷಿತನ ಸ್ವಗತ ಗೀತೆಯಂತೆ ಕವನ ಮೂಡಿಬಂದಿದೆ.

ಈ ಗುಂಪಿಗೆ ಸೇರುವ ಶಿವಳ್ಳಿ ಕೆಂಪೇಗೌಡರ ಮತ್ತೊಂದು ಕವನ 'ಪಾಡು'. ಅತ್ಯುತ್ತಮ ಕವನಗಳ ಸಾಲಿಗೆ ಸೇರುವ ಈ ಕವಿತೆ ಬಹಳ ಆಕರ್ಷಕ ರಚನೆಯಾಗಿದೆ. ಓದುಗನನ್ನ ಸೆಳೆಯುವ ಕಾಂತೀಯಗುಣ ಇಲ್ಲಿನ ರಚನಾ ತಂತ್ರಕ್ಕಿದೆ ಅಗಂತುಕನಾಗಿ ರಸ್ತೆಯಲ್ಲಿ ಸಂಚರಿಸುವ ವ್ಯಕ್ತಿ, ಈತ ತನ್ನಷ್ಟಕ್ಕೆ ತಾನು ಅನ್ಯಮನಸ್ಕನಾಗಿ ನಡೆಯುತ್ತಿದ್ದರೆ, ಅದ್ಯಾರೋ ಹೆಸರಿಡಿದು ಕೂಗಿದ್ದಾರೆ, ತನ್ನದೇ ಲೋಕದಲ್ಲಿ ಇದ್ದುಕೊಂಡು ನಡೆಯುತ್ತಿದ್ದ ನಿರೂಪಕನ ಗಮನಕ್ಕೆ ವ್ಯಕ್ತಿ ಕೂಗಿದ್ದು ಗೊತ್ತಾಗಲಿಲ್ಲ. ಇದು ಕವನದ ಮೊದಲ ಭಾಗದಲ್ಲಿ ಕೊಟ್ಟಿರುವ ಸುಂದರವಾದ ಸನ್ನಿವೇಶ. ಅನೇಕರ ಜೀವನದಲ್ಲಿನ ಸಹಜ ಘಟನೆ. ಆದರೆ ಇವರ

ಮುಂದುವರಿಕೆ ಮತ್ತಷ್ಟು ಕುತೂಹಲವನ್ನು ಉಂಟುಮಾಡುವಂತಹದ್ದು. ಮತ್ತೆ ಒಂದೊಮ್ಮೆ ಆಕಸ್ಮಿಕವಾಗಿ ಈ ಇಬ್ಬರು ಎದುರಾದಾಗಿನ ಸಂದರ್ಭ ಬಹಳ ನಾಟಕೀಯವಾಗಿ ರಚಿತವಾಗಿದೆ.

"ರೆಟ್ಟೆ ಹಿಡಿದು ಹಿಂಡಿ ಕೂಗಿದ ನೆನಪಿಸಿ
ಮುಖ ಪರಿಚಯದ ದಿನದ ಸವಿನೆನಪಿಗಾಗಿ
ಒನ್-ಬೈ-ಟೂ ಕಾಫಿ ಕೊಡಿಸಿ
ಬಿಲ್ಲು ತೆತ್ತಿದ ಗತ್ತಿನಲ್ಲಿ
ಕಣ್ಣಲ್ಲೆ ನನ್ನ ಇರಿಯಬಹುದು" **(ಪಾಡು)**

ಹೀಗೆ ಸಾಗುವ ಕವನ ಮುಂದೆ ಭಾವನಾತ್ಮಕತೆಯ ಲಯವನ್ನು ಪಡೆಯುತ್ತದೆ. ಕಾಫಿ ಕೊಡಿಸಿದ ವ್ಯಕ್ತಿ ಮಾಡುವ ಭಾವನಾತ್ಮಕ ಹಲ್ಲೆಯನ್ನು ಕವಿ ಗುರುತ್ತಿಸಿದ್ದಾರೆ. ತಾವು ಅಂದು ರಸ್ತೆಯಲ್ಲಿ ನಡೆದು ಹೋದಾಗ ಇವರನ್ನ ಗಮನಿಸಿದ್ದು ಆಕಸ್ಮಿಕವಾದರೂ ಇವರು ತಮ್ಮ ಜಂಭ ಎಂಬಂತೆ ಆರ್ಥೈಸಿರುವುದೂ ಕೂಡ ಮೇಲಿನ ಅರ್ಥವನ್ನೇ ಧ್ವನಿಸುತ್ತದೆ. ಆದರಿಂದಲೇ ಇಂತಹ ವ್ಯಕ್ತಿಗಳನ್ನು ಕವಿ ಕಂಪೇಗೌಡ

"ಕೈ ಕುಲುಕಿದವರು
ನಯವಾಗಿ ಸುಲಿದವರು
ಹದ್ದಾಗಿ ಕುಕ್ಕಿದವರು
ನನ್ನ ಸ್ಮರಣ ಶಕ್ತಿಯನ್ನೇ ಕಸಿದು ಕೊಂಡರು"

(ಪಾಡು)

ಎಂದು ಶೋಷಣೆಗೆ(ಮಾನಸಿಕ) ಒಳಗಾದವರ ಸಂಕಷ್ಟವನ್ನ ಚಿತ್ರಿಸಿದ್ದಾರೆ. ಇಂತಹ ವ್ಯಕ್ತಿಗಳನ್ನ ಕವಿ ನಯವಂಚಕರು ಎಂದು ಕರೆದಿದ್ದಾರೆ. ಇಂಥವರಿಂದ ನಿಜವಾದ ಸಮಸ್ಯಾತ್ಮಕ ವ್ಯಕ್ತಿಗಳಿಗೆ ಯಾವುದೇ ಪರಿಹಾರವೂ ಇಲ್ಲ. ಕೇವಲ ಮಾತಿನಿಂದ ಸಂಜಿಸುವ ಯತ್ನ ಇವರದ್ದಾಗಿದೆ. ಯಾವುದೇ ಕಡೆಗೆ ಹೋದರೂ ಇಂಥವರ ಕಾಟ ತಪ್ಪಿದ್ದಲ್ಲ. ನೀರಿನ ಸುಳಿಗಳಂತೆ, ಬಾಯಿತೆರೆದ ಮೊಸಳೆಗಳಂತೆ, ನೀವು ನೀಡುವ ಪರಿಚಯಪತ್ರ ನಮಗ್ಯಾವ ಕೆಲಸಕ್ಕೂ ಬರುವುದಿಲ್ಲ ಎಂಬುದು ನಿರೂಪಕನ ನಿಲುವು. ನೀವು ನನ್ನಲ್ಲಿ ವಿವಿಧ ರೀತಿಯಲ್ಲಿ ಪರಿಚಯಿಸಿಕೊಂಡಿರಿ. ರಾಜಕಾರಣಿ. ಕವಿ. ಕಲಾವಿದ ಯಾರಾದರೂ ನನಗೇನು ಎಂಬುದು ನಿರೂಪಕನ ನಿಲುವಾಗಿದೆ. ನೀವು ಯಾರಾಗಿದ್ದರೂ ಅದರ ಗೊಡವೆ ನನಗಿಲ್ಲ. ನನ್ನ ಪಾಡು ನನ್ನದು ಎಂದಿದ್ದಾರೆ. ನನ್ನ ಗುರುತು ನನಗೆ ಹತ್ತದಂತಾಗಿದೆ ನನ್ನ ಮನಸ್ಥಿತಿ ಎನ್ನುವರು.

'ನಡೆ ಬಿದ್ದ ಮಾರನಿಗೆ' ಎಂಬ ಕವನವು ಈ ಗುಂಪಿನಲ್ಲಿ ಚರ್ಚಿಸಬೇಕಾದ ಶಿವಳ್ಳಿಯವರ ಒಂದು ಕವನವಾಗಿದೆ. ದುಡಿವ ಸಾಮರ್ಥ್ಯವಿದ್ದ ಜೀತನದಾಳನ್ನ ಚೆನ್ನಾಗಿ ದುಡಿಸಿಕೊಂಡವರು, ವಯಸ್ಸಾದ ಮೇಲೆ "ಹಾಸುಂಡು ಬೀಸಿ ಹೊಗದಾಂಗ" ಮಾಡುತ್ತಾರೆ. ಅಂತಹ ವಸ್ತುವನ್ನ ಈ ಕವನ ಒಳಗೊಂಡಿದೆ. ಊರಿನ ಶ್ರೀಮಂತರು ಯವ್ವನಿಗನಾದ ಕರಿಯನನ್ನು ಕರಿಯಾ. ಕರಿಯಣ್ಣಾ ಎಂದು ಸೋಗಲು ಪ್ರೀತಿ ತೋರಿ ಚನ್ನಾಗಿ ದುಡಿಸಿಕೊಂಡರು. ಈಗ ಮುದಿತನ ಆವರಿಸಿದೆ ಯಾರಿಗೂ ಬೇಡವಾಗಿದ್ದಾನೆ. ನಿರೂಪಕರು ಆತನ ದುಡಿಮೆಯ ದಿನಗಳನ್ನ ಮೆಲಕು ಹಾಕಿದ್ದಾನೆ. ಕೈಗೆ ಗುದ್ದಲಿ ಕೊಟ್ಟು, ಹಗಲು-ರಾತ್ರಿಯಲ್ಲ ಗದ್ದೆಗೆ ನೀರು

ಕಟ್ಟಿಸಿಕೊಂಡು ಸಂಪಾದಿಸಿಕೊಂಡ ಉಳ್ಳವರಿಗೆ ಈಗ ಈತ ಬೇಡವಾದ. ಇನ್ನು ಬೆಳೆ ಬೆಳೆದು ಕಟಾವಾದಾಗ ತಂದು ಹೊಕ್ಕಣೆ ಮಾಡಿ ರಾಶಿ ರಾಶಿ ಭತ್ತವನ್ನ ತೂರಿ ಕಣಜ ತುಂಬಿದ ಕರಿಯ ಇಂದು ಯಾರಿಗೂ ಬೇಡವಾದ. ಇದಲ್ಲದೆ ಕೃಷಿಯೇತರ ದುಡಿಮೆಗಳಲ್ಲು ಈತನ ಶ್ರಮ ಇದ್ದೇ ಇತ್ತು. ಬೆಳಿಗ್ಗೆ-ಸಂಜೆ ಮನೆಯ ಹೆಂಗಸರಿಗೆ ಅಡಿಗೆ ಮಾಡಲು ಬೇಕಾದ ಸೌದೆಗಳನ್ನು ಸೀಳುವ ಕೆಲಸ ಮಾಡುತಿದ್ದನು. ಇದಲ್ಲದೆ ಕಲ್ಲು ಮಣ್ಣು ಹೊತ್ತು ಭವ್ಯವಾದ ಮನೆ ಕಟ್ಟಿಸಿ ಕೊಂಡವರಿಗೆ ಇಂದು ಈತ ಬೇಡವಾಗಿದ್ದಾನೆ. ಕಟ್ಟಿದ ಮನೆಯ ಗೃಹಪ್ರವೇಶಕ್ಕೆ ತಳಿರು ತೋರಣ ತಂದು ಕೊಟ್ಟ ಕರಿಯ ಈಗ ಯಾರಿಗೂ ಬೇಡವಾಗಿದ್ದಾನೆ.

ನಿರಂತರವಾಗಿ ದುಡಿದು ಯಜಮಾನನ ಅಭಿವೃದ್ಧಿಗೆ ಕಾರಣನಾದ ಕೂಲಿ ಕಾರ್ಮಿಕ ಕರಿಯ ಇಂದು ಯಾರಿಗೂ ಬೇಡವಾಗಿದ್ದಾನೆ. ಒಬ್ಬರಿಬ್ಬರೆನ್ನದೆ ಊರಿನ ನೂರಾರು ಮನೆಗಳಿಗೆ ಈತನ ದುಡಿಮೆಯ ಫಲ ದೊರೆತಿದೆ. ಇಂದು ಶಾರೀರಿಕವಾಗಿ ಕೃಶನಾಗಿದ್ದಾನೆ. ಶಕ್ತಿಕುಂದಿದೆ. ಯಾರೂ ಈತನ ಬಗೆಗೆ ಕಳಕಳಿ ತೋರುತ್ತಿಲ್ಲ ಸಮಾಜದ ಕೃತಘ್ನತೆಯನ್ನು ಚಿತ್ರಿಸುವ ಈ ಕವನ ಸಾಮಾಜಿಕ ಕಳಕಳಿಯನ್ನ ಉಳ್ಳದ್ದಾಗಿದೆ. ದುಡಿಯುತ್ತಿದ್ದಾಗ, ಕರಿಯ, ಕರಿಯಣ್ಣಾ ಎಂದು ಕರೆಯುತ್ತಿದ್ದ ಜನ ಇಂದು ತುಚ್ಛವಾಗಿ ಕಾಣುತಿದ್ದಾರೆ. ಇಂತಹ ಅವಮಾನವೀಯ ಸಮಾಜದ ಚಿತ್ರಣ ಈ ಕವನದಲ್ಲಿದೆ. ದುಡಿಯುವ ಸಮಕಾಲೀನರಿಗೆ ಇಂದೊಂದು ನೀತಿಬೋಧೆಯಂತಿದೆ.

ಒಟ್ಟಾರೆ ಶಿವಳ್ಳಿ ಕೆಂಪೇಗೌಡರು, ತಮ್ಮ ಕವನಗಳಲ್ಲಿ ಶೋಷಿತರ ಪರವಾಗಿ ದನಿಯಾಗಿರುವುದನ್ನು ಕಾಣಬಹುದು. ಬಡತನವು ವ್ಯಕ್ತಿಯನ್ನ ನಾನಾ ರೀತಿಯಲ್ಲಿ ಹಿಂಸಿಸುತ್ತದೆ. ಸಮಾಜದ ನಡುವೆ ಬಾಳಬೇಕಾದ ವ್ಯಕ್ತಿ ಅದೆಷ್ಟೋ ಸಂಕಷ್ಟಗಳಿಗೆ ತನನ್ನು ತೆರೆದುಕೊಳ್ಳಬೇಕಾಗುತ್ತದೆ. ಇವಲ್ಲದೆ ಕವಿ, ಕಲಾವಿದರ ಬದುಕಿನ ಸಂಕಷ್ಟಗಳನ್ನು ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

೩.೯ ಕೆಂಪೇಗೌಡರ ಸಂಕೀರ್ಣ ಕವನಗಳು

ಶಿವಳ್ಳಿ ಕೆಂಪೇಗೌಡರ ಒಟ್ಟು ಕವನಗಳನ್ನು ಪ್ರಧಾನವಾಗಿ ರೈತಗೀತೆಗಳು, ಬಂಡಾಯಗೀತೆಗಳು, ಪ್ರಕೃತಿಗೀತೆಗಳು, ಬಡತನ ಮತ್ತು ಶೋಷಿತರ ಪರವಾದ ಕವನಗಳೆಂದು ವಿಭಾಗಿಸಲಾಗಿದೆ. ಮೇಲಿನ ಗುಂಪಿಗೆ ಸೇರದ ಕೆಲವೇ ಕವನಗಳಿದ್ದು ಅವುಗಳನ್ನ ಕೆಂಪೇಗೌಡರ ಸಂಕೀರ್ಣ ಕವನಗಳೆಂದು ವಿಭಾಗಿಸಿ ಕೊಳ್ಳಲಾಗಿದೆ. ಇವುಗಳಲ್ಲಿ ಸ್ತ್ರೀಪರವಾದ, ಪುಸ್ತಕಕ್ಕೆ ಸಂಬಂಧಿಸಿದ, ಮಾನವನ ವ್ಯಕ್ತಿತ್ವದ, ವರ್ಣವೈಷಮ್ಯದ ಗೀತೆಗಳನ್ನು ಕಾಣಬಹುದು. ಇವುಗಳನ್ನ ಪ್ರತ್ಯೇಕವಾಗಿ ಒಂದೊಂದು ಅಧ್ಯಾಯ ಮಾಡುವುದು ಕಷ್ಟಸಾಧ್ಯ ವಾಗಿದೆ. ಕಾರಣ ಒಂದೊಂದೇ ಕವನ ಪ್ರತಿಭಾಗದಲ್ಲಿ ಇರುವುದು. ಆದ್ದರಿಂದ ಈ ಎಲ್ಲ ಕವನಗಳನ್ನ ಶಿವಳ್ಳಿಯವರ ಸಂಕೀರ್ಣ ಕವನಗಳ ಗುಂಪಿನಲ್ಲಿ ವಿಶ್ಲೇಷಿಸಲಾಗಿದೆ.

'ಹತಭಾಗಿನಿ ತಂಗಿ' ಅಕ್ಷರದ ಮಹತ್ವವನ್ನು ಕುರಿತ ಕವನ. ಹೆಣ್ಣಿಗೆ ಅಕ್ಷರ ಜ್ಞಾನ ಅತ್ಯಗತ್ಯ ಎಂಬುದು ಈ ಕವನದ ಆಶಯವಾಗಿದೆ. ಶೀರ್ಷಿಕೆಯ ಗೀತೆಯಾದ ಈ ಕವನ ಶಿವಳ್ಳಿಯವರ ಉತ್ತಮ ವಾದ ಕವನಗಳಲ್ಲಿ ಒಂದಾಗಿದೆ. ಹತಾಶಳಾಗಿ ಕುಳಿತ ಹೆಣ್ಣು ಸಮೂಹವನ್ನು ಉದ್ದೇಶಿಸಿ ನಿರೂಪಕರು ಆಕೆಗೆ ಹೇಳುತ್ತಾರೆ, ನೀನು ತಲೆಯ ಮೇಲೆ ಕೈಹೊತ್ತು ಕುಳಿತಿರುವುದಾದರೂ ಏಕೆ? ಇದೇಕೆ ಹೀಗೆ ಕುಳಿತ್ತಿದ್ದೀಯ

ಮೂಲೆಯನ್ನು ಸೇರಿ ಎನ್ನುತ್ತಾರೆ. ಆಕೆಯು ಕೌಟುಂಬಿಕ ಚೌಕಟ್ಟಿನಲ್ಲಿ ಬಂಧಿಯಾಗಿ ಸಮಾಜಕ್ಕೆ ವಿಮುಖಳಾಗಿದ್ದಾಳೆ. ಆದ್ದರಿಂದ ಆಕೆಗ ಆತ್ಮಸ್ಥೈರ್ಯ ತುಂಬುತ್ತಾರೆ. ಈ ಕವನದ ನಿರೂಪಕರ ಮೂಲಕ. ಆಕಾಶ ಜಿದ್ದವಳಂತೆ. ಭೂಮಿಬಾಯಿಬಿಟ್ಟವಳಂತೆ ಆದೇಕೆ ಹತಾಶಳಾಗಿದ್ದೀಯ ಎಂದು ಪ್ರಶ್ನಿಸುತ್ತಾರೆ. ಅವಳಿಗೆ ಒಂದು ಸುಂದರವಾದ ಘಟನೆಯನ್ನ ಕಣ್ಮುಂದೆ ತರುವುದರ ಮೂಲಕ ಪ್ರೇರಣೆಯಾಗುತ್ತಾರೆ.

ಶಾಲೆಯಲ್ಲಿ ಓದಿಲ್ಲವೇನಮ್ಮ

ಜೇಡನೊಂದು ಬಲೆಯ ಕಟ್ಟಿದ ಕಥೆಯಾ? (ಹತಭಾಗಿನಿ ತಂಗಿಗೆ)

ಎನ್ನುವುದರೊಂದಿಗೆ ಜೇಡನ ಶ್ರಮ ನಿನ್ನಲ್ಲಿ ಉಂಟಾದರೆ ಖಂಡಿತವಾಗಿಯೂ ನೀನು ನಿನ್ನ ಕನಸಿನ ಗೂಡನ್ನು ಕಟ್ಟುತ್ತೀಯ ಎಂದಿದ್ದಾರೆ. ಎದ್ದೇಳು ಅಜ್ಞಾನದಿಂದ ಹೊರಬಾ. ಗೌಣವಾಗಬೇಡ ಕತ್ತೆತ್ತು ನಿನ್ನ ಮುಂದೆ ಚಂದ್ರತಾರೆಯರಿದ್ದಾರೆ ಬೆಳಕು ತೋರುತ್ತಾರೆ.

"ನಿನ್ನ ಹಳೇಮನೆಯ ಮಂದಿಯ
ಗೊಡ್ಡು ಧರ್ಮಶಾಸ್ತ್ರಗಳ ಕಟ್ಟ
ಚಿತೆಗಿಟ್ಟು ಸುಟ್ಟು
ಕುರಿಯಾಗಿ ಕೂಡದಿರು ಕೇಳು
ಹಣೆಗೆ ನೆತ್ತರ ಬೊಟ್ಟಿಟ್ಟು
ಕಾಳಿಯಾಗಿ ಮೇಲೇಳು"

(ಹತಭಾಗಿನಿ ತಂಗಿಗೆ)

ಎಂದು ಸಾರಿ ಕಾಳಿಯಾಗು ಎಂದಿದ್ದಾರೆ. ಯಾವುದರ ವಿರುದ್ಧ ಕಾಳಿ ಎಂದರೆ ಅಜ್ಞಾನದ ವಿರುದ್ಧ, ಅನಕ್ಷರತೆಯ ವಿರುದ್ಧ, ಎಲ್ಲಕ್ಕಿಂತ ಮೇಲಾಗಿ ಹೆಣ್ಣನ್ನು ಶಾಲೆಗೆ ಕಳಿಸದಿರುವ ಗೊಡ್ಡು ಸಂಪ್ರದಾಯದ ವಿರುದ್ಧ ಎದ್ದೇಳು, ಗೊಡ್ಡು ಸಂಪ್ರದಾಯವನ್ನು ಅಕ್ಷರ ಜ್ಞಾನದ ಮೂಲಕ ಸುಟ್ಟು ಹಾಕುವ ಪ್ರಯತ್ನ ಮಾಡಬೇಕಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಪರಾವಲಂಬಿ. ಶೋಷಿತೆ ಅಬಲೆ ಯಾಗಿದ್ದಾಳೆ. ಶತಶತಮಾನದ ಈ ಶೋಷಣೆಗೆ ಕಾರಣ ಪುರುಷ. ಅಲ್ಲದೆ ಅಕ್ಷರಜ್ಞಾನ ದೊರೆಯದಂತೆ ಮಾಡಿರುವ ಸಂಪ್ರದಾಯ, ಇವುಗಳ ವಿರುದ್ಧ ಎದ್ದೇಳು ತಂಗಿ ಎಂದು ಪ್ರಚೋದಿಸಿದ್ದಾರೆ. ತಲೆತಗ್ಗಿಸಿ ಕೊಂಡು, ಮರುಮಾತಾಡದೆ ಹೇಳಿದಂತೆ ಕೇಳುವ ಕುರಿಯಾಗದಿರು ಎಂದಿದ್ದಾರೆ.

ಸ್ತ್ರೀಗೆ ಅಕ್ಷರ ಜ್ಞಾನದ ಅಗತ್ಯವನ್ನ ಕುರಿತ ಕವನ. ಕೆಂಪೇಗೌಡರ ಕವನಗಳಲ್ಲಿ ನೇರವಾಗಿ ಹೆಣ್ಣನ್ನು ಕುರಿತ ಏಕೈಕ ಕವನ. ಈ ಒಂದೇ ಕವನ ಹತ್ತು ಕವನಗಳ ಬಲವನ್ನ ಹೊಂದಿದೆ. ಹಲವಾರು ಸಂದೇಶ ಗಳನ್ನು, ಸ್ತ್ರೀಪರವಾದವನ್ನು ಸ್ತ್ರೀಸ್ವಾತಂತ್ರವನ್ನು ಘೋಷಿಸುತ್ತದೆ. ತಪ್ಪು ಮಾಡದೆ ತಲೆ ತಗ್ಗಿಸಿರುವ ಹೆಣ್ಣನ್ನು ತಲೆ ಎತ್ತುವಂತೆ, ಮೌಢ್ಯಸಂಪ್ರದಾಯದ ವಿರುದ್ಧ ಕಾಳಿಯಾಗುವಂತೆ ಉತ್ತೇಜಿಸುತ್ತದೆ. ಅಲ್ಲದೆ ಪುರುಷ ನಿರ್ಮಿತ ಸಂಪ್ರದಾಯದ ಕಟ್ಟಲೆಗಳನ್ನು ಕಿತ್ತೊಗೆದು ಹೊರಬರುವಂತೆ ತಿಳಿಸುತ್ತದೆ. ಈ ಮೊದಲಾದ ಹಲವು ಕಾರಣಗಳಿಂದ ಇದು ಕೆಂಪೇಗೌಡರ ಅತ್ಯುತ್ತಮ ಕವನಗಳಲ್ಲಿ ಒಂದೆಂದು ತಿಳಿಯಬಹುದಾಗಿದೆ.

'ಮಹಾತ್ಮ ಗಾಂಧೀಜಿಗೆ' ಇದು ಕೆಂಪೇಗೌಡರ ಒಂದು ಪುಟ್ಟ ಕವನ. ಕೇವಲ ೯ ಸಾಲುಗಳ ಕವನ. ಮಹಾತ್ಮಗಾಂಧೀಜಿಯನ್ನು ಅನುಪಮವಾಗಿ ಕಂಡಿದ್ದಾರೆ. ಮಹಾತ್ಮ ನೀನು ಎತ್ತರ, ಅದೆಷ್ಟು ಎತ್ತರವೆಂದರೆ ಬಾನಿನಷ್ಟು ಎಂದಿದ್ದಾರೆ. ಬಾನಿಗೆ ಎಲ್ಲೆಯೇ ಇಲ್ಲದಿರುವಂತೆ ಗಾಂಧೀಜಿಯ ವ್ಯಕ್ತಿತ್ವವೂ ಅಸೀಮವಾದುದು. ಜೊತೆಗೆ ನೀನು ಗೌರಿಶಂಕರ, ಸಾಕ್ಷಾತ್ ಭಗವಂತನ ಪ್ರತೀಕ ಎಂಬುದು ಕೆಂಪೇಗೌಡರ ಅಭಿಮತವಾಗಿದೆ. ಇದರೊಂದಿಗೆ ಅಸಮಾನ್ಯನಾದ ತಮ್ಮ ಮುಂದೆ ನಾವು ಕುಬ್ಜರು ಅಂದರೆ ವ್ಯಕ್ತಿತ್ವದಲ್ಲಿ ಕನಿಷ್ಠರು ಇದರೊಂದಿಗೆ ಮತಿಹೀನರು, ಸರ್ವಮತದ ಹಿತಬಯಸುವ ನೀನೆಲ್ಲಿ ಜಾತ್ಯಾಂಧರಾದ ನಾವುಗಳೆಲ್ಲಿ ಎಂದು ಕೊನೆಯಲ್ಲಿ ನಿನ್ನನ್ನು ಮರೆತ ನಮಗೆ ಉಳಿಗಾಲವಿಲ್ಲ ಎಂದಿದ್ದಾರೆ. ಅಂದರೆ ಭೂಮಿಯಲ್ಲಿ ಗಾಂಧೀತತ್ವ, ಆದರ್ಶ, ಚಿಂತನೆ. ಅಹಿಂಸಾ ಮಾರ್ಗವನ್ನ ಮರೆತರೆ ನಮಗೆ ಉಳಿಗಾಲವಿಲ್ಲ ಎಂದಿದ್ದಾರೆ.

ಮತ್ತೊಂದು ಕವನ ಗ್ರಾಮದ ವರ್ಣಸಂಘರ್ಷವನ್ನು ಕುರಿತದ್ದು. ಕಥನ ಕವನದಂತೆ ಕವನ ಆರಂಭವಾಗುತ್ತದೆ. ಎರಡು ವರ್ಗಗಳನ್ನು ಬಿಂಗಡಿಸುವ ಪ್ರಾದೇಶಿಕ ಎಲ್ಲೆಯಾಗಿ ಎರಡು ಕಲ್ಲುಗಳಿವೆ. ಆ ಕಲ್ಲುಗಳು ವೀರಗಲ್ಲು ಅಲ್ಲ ಮಾಸ್ತಿಕಲ್ಲು ಅಲ್ಲ. ತೆಂಡೆ, ಪಾಲುಗಳನ್ನು ಪೋಷಿಸುವ ಆ ಕಲ್ಲು, ಕರಿಯಕಲ್ಲು ಅಂದರೆ ಹಳ್ಳಿಯ ಎಲ್ಲೆ ಕಲ್ಲುಗಳು ಬರ ಬರುತ್ತಾ ಕಲ್ಲು ನಗಣ್ಯವಾಗುತ್ತದೆ. ಇದನ್ನು ಕಂಡು ಲೇಖಕರಿಗೆ ಖುಷಿಯಾಗುತ್ತದೆ. ಇನ್ನಿದರ ಹುಟ್ಟು ಅಡಗಿದಂತೆ ಎಂಬ ಸಂತೋಷ. ಆದರೆ ಆ ಸಂತೋಷ ಕ್ಷಣಿಕವಾಗಿತ್ತು. ಊರಿನಲ್ಲಿ ತೆಂಡೆ. ಪೈಕಿ, ಜಾತಿಗಳ ನಡುವೆ ಸಂಘರ್ಷ ನಿರಂತರ. ಸಂತೋಷದಿಂದ ಇದ್ದ ಮರುದಿನವೇ ಹೃದಯ ಹಿಂಡುವ ಘಟನೆಗಳು ನಡೆದವು. ಮನೆಯ ಮೇಲೆ ಕಲ್ಲುತೂರಾಟ, ಹಂಚುಗಳಿಂದ ಛಳಿರ್ ಎಂಬ ಶಬ್ದ ಹೊಮ್ಮುತ್ತಿದೆ, ಚಕ್ಕರೆಯಾಗಿದೆ ತಲೆಗಳು, ಈಟಿ, ಕೊಡಲಿಗಳಿಂದ ಹೊಡೆದಾಟ. ರಕ್ತದೋಕುಳಿ. ಮೊರೆವ ಹದ್ದುಕಾಗೆಗಳು. ಮತ್ತೆ ಪರಸ್ಪರ ವಿಭಾಗಿಸುವ ಕರಿಯಕಲ್ಲು ಆಳೆತ್ತರ ಬೆಳೆದು ನಿಂತಿದೆ.

ಗ್ರಾಮೀಣರ ಹೊಂದಾಣಿಕೆ ಬದುಕು ಎಷ್ಟೋ ಸಂದರ್ಭಗಳಲ್ಲಿ ಬಹಳ ಸಂತೋಷ ತರುತ್ತದೆ. ಜಾತಿಬೇಧ ಮರೆತು ಹಬ್ಬ, ಮದುವೆ, ಸಾವುಗಳಲ್ಲಿ ಸಾಮೂಹಿಕ ಭಾಗವಹಿಸುವಿಕೆ ಇವುಗಳಿಗೆ ಉದಾಹರಣೆ, ಆದರೆ ವೈಶಮ್ಯ ಬಂದಾಗ ಒಡಹುಟ್ಟಿದವರ ನಡುವೆಯೇ ರಕ್ತದೋಕುಳಿ ನಡೆಯುತ್ತದೆ. ಜಿ.ಎಸ್.ಎಸ್. ಹೇಳುವಂತೆ "ಹತ್ತಿರವಿದ್ದು ದೂರನಿಲ್ಲುವೆವು ನಮ್ಮ ಅಹಮ್ಮಿನ ಕೋಟೆಯಲಿ" ಎಂಬುದು ಔಚಿತ್ಯ ಪೂರ್ಣವಾದ ಮಾತು.

'ಋಣ' ಮತ್ತೊಂದು ಸುಂದರ ಕವನ. ಪು.ತಿ.ನರಸಿಂಹಚಾರ್‌ರವರ 'ಬಾಳಿನ ಹಂಬಲು' ಕವನವನ್ನು ನೆನಪಿಗೆ ತರುವ ಕವನ. ಮನುಷ್ಯನ ಬದುಕಿನ ನಾಲ್ಕುಘಟ್ಟಗಳನ್ನು ಸೊಗಸಾಗಿ ಚಿತ್ರಿಸಿದ್ದಾರೆ. ಈ ಪುಟ್ಟ ಕವನದಲ್ಲಿ ಗರ್ಭದಿಂದ ಘೋರಿಯ ವರೆಗಿನ ಮಣ್ಣ ಋಣವನ್ನು ರಮ್ಯವಾಗಿ ಚಿತ್ರಿಸಿದ್ದಾರೆ. ಲೇಖಕರ ಸುಂದರ ಕವನಗಳ ಸಾಲಿಗೆ ಸೇರುವುದು ಇದು. ಗರ್ಭಕಟ್ಟಿದಾಗಿನಿಂದಲೇ ಋಣದ ಮೊತ್ತ ಸಂಕಲಿತಾಗುತ್ತದೆ, ನವಮಾಸ ತುಂದುವಾಗ ಈ ಗಾಳಿ. ಈ ನೆಲ. ನೀರು. ಅಕ್ಕರೆಗಳ ಋಣಭಾರ ಉಂಟಾಗುತ್ತದೆ. ಇನ್ನು ಪುಟ್ಟ ಕಂದನಾಗಿದ್ದಾಗಿನ ಸಂದರ್ಭವನ್ನ ಮತ್ತಷ್ಟು ಸುಂದವಾಗಿ ಚಿತ್ರಿಸಿದ್ದಾರೆ. ಚನ್ನವೀರಕಣವಿ

ಯವರು 'ದೀಪಧಾರಿ' ಕವನದಲ್ಲಿ ಪುಟ್ಟ ಮಗುವಿನ ಅಂಬೆಗಾಲು. ಮೇಲೇಳುವ ಪ್ರಯತ್ನಗಳನ್ನು ಚಿತ್ರಿಸಿರುವದು ನೆನಪಿಗೆ ಬರುತ್ತದೆ.

ದಟ್ಟಡಿಯನಿಡುತಲಿವ ನಡೆಗಲಿತುದೇ ಒಂದು
ಶುಭ ಮುಹೂರ್ತ
ಭೂಮಂಡಲವ ನೆತ್ತಿಯಲಿ ಹೊತ್ತು ಮೇಲೆತ್ತುವೊಲು
ಏಳುವನಾಮತ್ತು;
ಸಿಳ್ಳೆ ಹೊಡೆಯುತಾ ತಂತಿ ಮೇಲೆ ಓಡುವ,
ನಡೆವ ವಿವಿಧ ಕಸರತ್ತು;

(ದೀಪಧಾರಿ – ಚನ್ನವೀರ ಕಣವಿ)

ಮೈಕೈ ತುಂಬಿಕೊಂಡು ಅಂಬೆಗಾಲಿಕ್ಕಿ
ಮನೆತುಂಬಿ ಮನ ತುಂಬಿನಿಂತು
ತಡವರಿಸಿ, ಮುಗ್ಗರಿಸಿ ಅತ್ತು ಮರುಕ್ಷಣ
ಕಿಲಕಿಲ ಬೆಳದಿಂಗಳು ಚೆಲ್ಲಿ

(ಋಣ – ಕೆಂಪೇಗೌಡ)

ಶೈಶವದಿಂದ, ಬಾಲ್ಯ. ನಂತರ ಹರೆಯವನ್ನು, ಹರೆಯದ ಬದುಕನ್ನು ಸೊಗಸಾಗಿ ರಚಿಸಿದ್ದಾರೆ. ಅಪಾರ ತ್ರಸ್ಥೈರ್ಯ. ಧೈರ್ಯ, ಸಾಹಸದ ವಯಸ್ಸು, ಸ್ವಾವಲಂಬಿ, ಹರೆಯದ ವಸಂತನ ಆಗಮನದ ಅವಧಿ, ಇದನ್ನು ವಳ್ಳಿ ಕೆಂಪೇಗೌಡರು,

"ಆಲಿಂಗನದಲ್ಲಿ ಮೈಮರೆತು ಮುತ್ತುಗಳ ಮಾಲೆ
ಕತ್ತಲಲ್ಲಿ ಬೆತ್ತಲೆಯಾಗಿ ಅರ್ಪಣೆಯ ಸಾರ್ಥಕ್ಯದಲ್ಲಿ
ಮಿಂದು ಮಡಿಯುಟ್ಟು ಹಬ್ಬ"

(ಋಣ)

ಯೌವ್ವನದ ಕಾವಿನ ದಿನಗಳನ್ನು ಅಪ್ಯಾಯಮಾನವಾಗಿಯೇ ಕಟ್ಟಿದ್ದಾರೆ. ನಂತರದ ಅವಧಿ ಬದುಕಿನ ಕೊನೆಯ ಹಂತ. ಶಾರೀರಿಕ ಕೃಶವದ ಅವಧಿ. ಚರ್ಮ ಸುಕ್ಕುಗಟ್ಟಿದ. ಕೈನಡುಗುವ ಅವಧಿ. ಈ ನಾಲ್ಕು ಘಟ್ಟಗಳು ಮುಗಿದ ಕೊನೆಯ ಹಂತ ತಲುಪಿದಾಗ ಕಣ್ಣಿನಿಂದ ನೀರು ಬರುವಾಗ ಕಣ್ಣುಗಳ ಋಣ, ಹೆಣ ಹೊತ್ತು ಭೂಮಿಯಲ್ಲಿ ಲೀನವಾದ ಮೇಲೂ ಋಣಭಾರ ಸಾಗುತ್ತಲೇ ಇರುತ್ತದೆ.

ಬದುಕಿನ ನಾಲ್ಕು ಹಂತಗಳ ಚಿತ್ರಣ ಹುಟ್ಟಿನಿಂದ–ಚಟ್ಟದವರೆಗಿನ ಮಾನವ ಬದುಕನ್ನು ಕಟ್ಟಿಕೊಟ್ಟಿರುವ ರೀತಿ ಸೊಗಸಾಗಿದೆ. ಬದುಕು ಋಣದಿಂದ ಆರಂಭವಾಗಿ. ಋಣದಲ್ಲೇ ಸಾಗಿ. ಋಣದಲ್ಲೇ ಅಂತ್ಯವಾಗುತ್ತದೆ. ಋಣ ಮುಕ್ತನಾಗುವುದು ಭಾವನಾತ್ಮಕ ಜಗತ್ತಿನಲ್ಲಿ ಅಸಾಧ್ಯ ಎಂದಿದ್ದಾರೆ.

ಕೆಂಪೇಗೌಡರು "ನನ್ನನ್ನು ಇದುವರೆಗೆ ಬದುಕಿಸಿದ್ದು ಸಾಹಿತ್ಯ" ಎಂದು ನುಡಿದಿದ್ದರು. ಸಾಹಿತ್ಯದ ಭೌತರೂಪ ಪುಸ್ತಕಗಳು. ಪುಸ್ತಕವೆಂದರೆ ಎಲ್ಲಿಲ್ಲದ ಗೌರವ, ಪ್ರೀತಿ. ಆ ಕುರಿತು ಸುಂದರ ಕವನವೊಂದನ್ನು ನೆಯ್ದಿದ್ದಾರೆ. 'ಪುಸ್ತಕ' ಎಂಬುದನ್ನು ಒಗಟಿನ ಮುಖೇನ ಅರ್ಥೈಸಿಸುವ ಆರಂಭದ ಪಾದಗಳು ಆಕರ್ಷಕವಾಗಿದೆ. ಪಣತೆ, ಸ್ವಾತಿ ಮುತ್ತುಗಳಿಗೆ ಪುಸ್ತಕವನ್ನು ಹೋಲಿಸಲಾಗಿದೆ. ಬರಡಾದ ಭೂಮಿಗೆ ರಸವತ್ತಾದ ಫಸಲು ಕೊಡಲು ಗೊಬ್ಬರ ಹಾಕುವರು. ಬರಡಾದ ಬದುಕಿಗೆ ಗೊಬ್ಬರ ಗೋಡು ಪುಸ್ತಕ. ಅಜ್ಞಾನದ ಬದುಕಿಗೆ ಕೋಲ್ಮಿಂಚಿನ ಬೆಳಕು, ಜ್ಞಾನ ಪ್ರವಾಹ ಉಂಟಾದರೆ ಬದುಕಿನಲ್ಲಿ ಗುಡುಗು, ಸಿಡಿಲು, ಮಳೆಗಳ ಭೋರ್ಗರೆತ, ಮಕ್ಕಳಿಗೆ ಪೈರಿನ ನೇಹ ಈ 'ಪುಸ್ತಕ' ಎಂಬೆಲ್ಲ ಕಲ್ಪನೆಗಳು ಮನಮೋಹಕವಾಗಿದೆ. ಗೌಡರು ಪುಸ್ತಕ ಮತ್ತು ಮನುಷ್ಯನ ಸಂಬಂಧಗಳಿಗೆ ವಿಶೇಷಣಗಳಾಗಿ ಮಳೆ, ಪೈರು, ಗುಡುಗು, ಸಿಡಿಲುಗಳನ್ನು ಬಳಸಿಕೊಂಡಿದ್ದಾರೆ. ಈಗಾಗಲೇ ಪ್ರಸ್ತಾಪಿಸಿದಂತೆ ತಮ್ಮ ಎಲ್ಲ ಬರಹಗಳಿಗೆ ವಸ್ತು ಅವರ ಬದುಕು. ಅಂತೆಯೇ ಇಲ್ಲಿಯೂ ಬದುಕಿನಲ್ಲಿ ಕಂಡ ಅಂಶಗಳನ್ನೇ ವಿಶೇಷಣಗಳಾಗಿ ಬಳಸಿಕೊಂಡಿದ್ದಾರೆ. ಪದ್ಯದ ಪೂರ್ವಾರ್ಧವು ಪೇಲವವಾಗಿದ್ದರೂ ನಡುವಿನ ಭಾಗ ಮತ್ತು ಉತ್ತರಾರ್ಧ ಆಕರ್ಷಕವಾಗಿದೆ. ಪುಸ್ತಕವನ್ನು,

"ಹರೆದಲಿ ಆಪ್ತಮಿತ್ರ
ಮಧ್ಯವಯಸಿನಲಿ ತುಂಬಿದ ತೊರೆ
ಬಾಳ ಮುಸ್ಸಂಜೆಯಲಿ ಊರುಗೋಲು
ಅನುದಿನವೂ ಅನುಕ್ಷಣವೂ
ಕೈಹಿಡಿದು ನಡೆಸುವ ಮಾರ್ಗದರ್ಶಿ"

(ಪುಸ್ತಕ)

ಹೀಗೆಯೇ ನೀತಿಬೋಧಕವಾಗಿ ಪದ್ಯ ಸಾಗುತ್ತದೆ. ಪ್ರತಿ ಪದದಲ್ಲಿನ ಸೂಚ್ಯಾರ್ಥಗಳು ಔಚಿತ್ಯಪೂರ್ಣವಾಗಿ ಮೂಡಿಬಂದಿದೆ. ಹರೆಯದಲ್ಲಿ ಯುವಕ ಯುವತಿಯರಿಗೆ ಅತ್ಯಂತ ಪ್ರೀತಿ ಪಾತ್ರರಾದವರು ಗೆಳೆಯರು, ಆ ರೀತಿಯ ಆಪ್ತಮಿತ್ರನಾಗಲಿರುವವನು ಪುಸ್ತಕ ಎಂದಿದ್ದಾರೆ. ತುಂಬಿದ ತೊರೆ ಗಾಂಭೀರ್ಯದ ಲಕ್ಷಣ. ತೂಕದ ಹೆಜ್ಜೆಯಿಡುತ್ತಾ ಭೋರ್ಗರೆತ, ಚಾಲಿಶತನ ವಿಲ್ಲದ ಗತ್ತು ಗಮ್ಮತ್ತು ಗಳಿರುತ್ತವೆ. ವಯಸ್ಸಾದವರಿಗೆ ಊರುಗೋಲು ಅಥವಾ ಆಶ್ರಯ ಅಗತ್ಯ. ಈ ಎಲ್ಲವನ್ನು ಪುಸ್ತಕವೊಂದೇ ನಿರ್ವಹಿಸುತ್ತದೆ. 'ಆಪ್ತಮಿತ್ರ' 'ತುಂಬಿದ ತೊರೆ' 'ಊರುಗೋಲು' ಕೊನೆಯದಾಗಿ 'ಮಾರ್ಗದರ್ಶಿ'ಯಾಗಿ ತಮ್ಮ ಕೆಲಸ ನಿರ್ವಹಿಸುತ್ತದೆ. ಬಹಳ ಅರ್ಥಪೂರ್ಣ ಆಲೋಚನೆ ಕವಿಯದಾಗಿದೆ.ಮುಂದೆ ಸುಖ–ದುಃಖದಲಿ, ಲಾಭ–ನಷ್ಟಗಳಲ್ಲಿ ಯಾವುದೇ ಉದ್ವೇಗಕ್ಕೆ ಒಳಗಾಗದಂತೆ ಚಿತ್ತಸಮತೆ ಕಾಪಾಡುವ ತತ್ವಜ್ಞಾನಿ ಈ ಪುಸ್ತಕ ಎಂಬುದು ಅರ್ಥಪೂರ್ಣ ಮಾತು. ಯೋಗಾ ಯೋಗದಿಂದ ಪುಸ್ತಕ ಓದಿದವ ಯೋಗಿಯೇ ಆಗುತ್ತಾನೆಂಬ ಮಾತಿದೆ. ಅಂತರಂಗ ಮತ್ತು ಬಹಿರಂಗ ವ್ಯಕ್ತಿತ್ವದ ದರ್ಶನವನ್ನು ಮಾಡಿಸುತ್ತದೆ ಈ ಪುಸ್ತಕವೆಂಬ ದಾರ್ಶನಿಕ. ಒಟ್ಟಾರೆ ಪುಸ್ತಕ ಮಾನವ ಬದುಕಿನ ಸರ್ವಾಂತಯಾಮಿ, ಮಕ್ಕಳಿಗೆ ಚಂದಮಾಮ,

ಹರೆಯದವರಿಗೆ ತಕ್ಕ ಭೋರ್ಗರೆತವುಂಟುಮಾಡುವುದು. ಅಲ್ಲದೆ ಮರುಭೂಮಿಯ ಓಯಸಿಸ್‌ನಂತೆ, ಕತ್ತಲು ತುಂಬಿದ ಬಾಳಿಗೆ ಬೆಳಕಿನದಾರಿ, ಯಾರು ಎಷ್ಟು ಕುಡಿದರೂ ಹಿಂಗಲಾರದ ಅಮೃತಸಾಗರ ಪುಸ್ತಕ. ಜ್ಞಾನಸಾಗರ 'ಮಧುರ ಮಾಣಿಕ್ಯ ವೀಣಾವಾದನ' ಪುಸ್ತಕ.

ಪುಸ್ತಕವು, ಕಾಮಧೇನು, ಕಲ್ಪವೃಕ್ಷ ಮಾನವನ ಬಾಳಿಗೆ. ಪುಸ್ತಕದಿಂದ ಸಾವಿರ ಸಾವಿರ ಅನುಕೂಲಗಳು, ಗಾದೆಯ ಮಾತಾದ ಜ್ಞಾನವಂತನಾಗಲು "ದೇಶವನ್ನು ಸುತ್ತು ಇಲ್ಲವೇ ಕೋಶವನ್ನು ಓದು" ಎಂಬ ಮಾತುಗಳ ಪ್ರತಿಬಿಂಬದಂತೆ ಈ ಕವನ ರಚನೆಯಾಗಿದೆ.

ಕೆಂಪೇಗೌಡರು ರಚಿಸಿರುವ 'ಮನುಷ್ಯ' ಎಂಬ ಕವನ ತಾತ್ವಿಕ ನೆಲೆಗಟ್ಟಿನಿಂದ ಮೂಡಿಬಂದಿದೆ. 'ಪುಸ್ತಕ' ಕವನಕ್ಕಿಂತಲೂ ಮೇಲ್ಮಟ್ಟದ ಆಕರ್ಷಣೆ ಪೂರ್ಣಪ್ರಮಾಣದಲ್ಲಿ ಅಡಗಿದೆ. ಈ ಕವನದ ಮೇಲೆ ದಾಸರ ಕೀರ್ತನೆಗಳ ಪರಿಣಾಮ ಇಲ್ಲದಿಲ್ಲ. ಮಾನವನ ಈರ್ಷೆ ಕೃತಘ್ನತೆ, ಪರರನಿಂದನೆ, ಆತ್ಮಸ್ತುತಿ ಮೊದಲಾದ ತಾಮಸ ನಡಾವಳಿಗಳನ್ನು ಸುಂದರವಾದ ಈ ಕವಿತೆಯಲ್ಲಿ ಸೆರೆಹಿಡಿದಿದ್ದಾರೆ. ಮನುಷ್ಯನ ವ್ಯಕ್ತಿತ್ವದ ವಿರಾಟ್ ರೂಪವನ್ನೇ ದರ್ಶನ ಮಾಡಿಸಿದ್ದಾರೆ. ಭೂಮಂಡಲದ ಚಕ್ರಾಧಿಪತಿ ಮನುಷ್ಯ. ಸಕಲ ಚರಾಚರಗಳನ್ನುನಿಯಂತ್ರಿಸುವ ಸೂತ್ರಧಾರಿ. ಆದರೆ ತನ್ನನ್ನು ತಾನು ನಿಯಂತ್ರಿಸಲಾರ. ಈ ಮೊದಲಾದ ಸಂದೇಶಗಳನ್ನು ಈ ಕವನ ಗರ್ಭೀಕರಿಸಿಕೊಂಡಿದೆ.

ಪದ್ಯದ ಮೊದಲ ಪಾದದಿಂದಲೇ ಮನುಷ್ಯ ಇತರರಿಗೆ ನೋವನ್ನ ಕೊಡುವುದರೊಂದಿಗೆ ಭೂಮಿಗೆ ಬರುತ್ತಾನೆ. ತಾಯಿಗೆ ಉದರವೇನೆ ಅಥವಾ ಪ್ರಸವವೇನೆಯನ್ನು ನೀಡುವುದರೊಂದಿಗೆ ಎಂದಿದ್ದಾರೆ. ಆದರೆ ಇವನ ಅಂತ್ಯ ಇದಕ್ಕೆ ವಿರುದ್ಧವಾದುದ್ದಾಗಿದೆ. ತನ್ನ ನೋವಿನಲ್ಲಿ ಅಂತ್ಯಕಾಣುತ್ತಾನೆ, ಹುಟ್ಟು ಪರರಿಗೆ ನೋವು ಸಾವು ತನಗೆ ನೋವುಕೊಡುವ ಸಂದರ್ಭವಾಗಿದೆ. ಇದಲ್ಲದೆ ಸ್ವಂತ ಸಾವು. ಖಾಲಿಜೇಬು, ಯಾವಾಗಲೂ ದುಃಖವನ್ನ ತರುವಂತದ್ದು. ಇಡೀ ಬದುಕು ಹೊಟ್ಟೆ ಬಟ್ಟೆಗೆ ಹೊಂದಿಸುವುದರಲ್ಲೇ ಮುಳುಗಿ ಹೋಗುತ್ತದೆ. ಈ ನಡುವೆ ಸಾಧು ಸಂತರ ಮಾತನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ ನೈತಿಕತೆಗೆ ಎಳ್ಳುನೀರು ಬಿಟ್ಟು 'ಉದರನಿಮಿತ್ತಂ ಬಹುಕೃತವೇಶಂ' ತಾಳಿಕೊಂಡು ಬದುಕು ಸಾಗುತ್ತದೆ, 'ಹಣವಿಲ್ಲದ ಯುವಕ ಮುದುಕನಂತೆ, ಹಣವಿರುವ ಮುದುಕ ಯುವಕನಂತೆ' ಎಂಬ ಮಾತಿಗನುಗುಣವಾಗಿ ನಾಲ್ಕು ಕಾಸಿದ್ದರೆ ಏನಿವನ ವೈಭೋಗ, ಕುಂತಲ್ಲೇ, ನಿಂತಲ್ಲೇ ದುರಾಲೋಚನೆ ಮಾಡುತ್ತಾನೆ.

"ಇತರರ ತಪ್ಪಿನತ್ತ ಚುರುಕಾಗುವುದು ತೋರು ಬೆರಳು
ತನ್ನ ತಪ್ಪಿಗೆ ಅನುಭವದಪಟ್ಟು!"

(ಮನುಷ್ಯ)

"ನೀರಮೇಗಳ ಗುಳ್ಳೆ ನಿಜವಿಲ್ಲವೋ ಹರಿಯೆ" ಎಂಬ ದಾಸರ ಮಾತನ್ನು ಕಿವಿಯಲ್ಲಿ ಹಾಕಿಕೊಳ್ಳದ ಈತನಿಗೆ ನಶ್ವರತೆ ಕಾಡುವುದು ಸುಡುಗಾಡಲ್ಲಿ ಮಾತ್ರ, ನೀರಸವಾದ ಬಾಳಿಗೆ ರಸತುಂಬಲು ಸಾಕಾಗುವನು. ಕೊನೆಯ ಕಾಲದವರೆಗೂ ಏಗುವವನು. 'ಮಾನವ ಜನ್ಮ ಬಲುದೊಡ್ಡದು, ಹಾಳುಮಾಡಿ ಕೊಳ್ಳಬೇಡಿರೋ ಹುಚ್ಚಪ್ಪಗಳಿರಾ' ಎಂಬ ದಾಸರ ಅಲೌಕಿಕ ಮಹತ್ವವನ್ನು ಲೌಕಿಕಕ್ಕೆ ಅನ್ವಯಿಸಿಕೊಂಡ ಮಾನವ ಹಣ,

ಆಸ್ತಿಗಳ ಸಂಪಾದನೆಯಲ್ಲಿ ತೊಡಗಿ ಅನೀತಿ ಮಾರ್ಗದಲ್ಲಿ ನಡೆವನು. ಇತರರನ್ನು ನಿಂದಿಸಿ, ಆತ್ಮಸ್ತುತಿ ಮಾಡುವ ಈತನ ಬದುಕನ್ನು ಈ ಕವನ ಅಚ್ಚುಕಟ್ಟಾಗಿ ಸೆರೆ ಹಿಡಿದಿದೆ.

ಶಿವಳ್ಳಿ ಕೆಂಪೇಗೌಡರ ಕವನಗಳಲ್ಲಿ 'ಮನುಷ್ಯ'. 'ಪುಸ್ತಕ', 'ಋಣ', 'ಮಹಾತ್ಮಗಾಂಧೀಜಿಗೆ'. 'ಹತಭಾಗಿನಿ ತಂಗಿ' ಇವುಗಳನ್ನು ಸಂಕೀರ್ಣ ಕವನಗಳೆಂದು ಪರಿಶೀಲಿಸಿದೆ. ಈ ಕವನಗಳು ವಸ್ತುವಿನ ದೃಷ್ಟಿಯಿಂದ ಏಕರೂಪವಿಲ್ಲದಿರುವುದೇ ಇದಕ್ಕೆ ಕಾರಣ. ಉತ್ತಮವಾದ ಈ ಕವನಗಳು ಒಂದೊಂದೂ ಉತ್ಕೃಷ್ಟವಾಗಿದೆ. ಮಾನವನ ವ್ಯಕ್ತಿತ್ವದ ಬಹುಮುಖವನ್ನು ಮನುಷ್ಯ ಕವನದಲ್ಲಿ ಚಿತ್ರಿಸಿದ್ದಾರೆ. 'ಪುಸ್ತಕ' ಕವನವಾದರೋ ಅದರ ಮಹತ್ವ ಯಾವ ಯಾವ ವಯಸ್ಸಿಗೆ ಮನುಷ್ಯನೊಂದಿಗಿನ ಸಂಬಂಧವೇ ಮೊದಲಾದ ತಾತ್ವಿಕ ದರ್ಶನ ಮೂಡಿಸುತ್ತದೆ. ಮಹಾತ್ಮಗಾಂಧೀಜಿಯನ್ನು ವಾಸ್ತವದಲ್ಲಿ ಉತ್ತುಂಗ ನೆಲೆಯಲ್ಲಿ ನೋಡುವ. ಅಧ್ಯಾತ್ಮದಲ್ಲಿ ದೈವೀಕಲ್ಪನೆಗೆ ಸೇರಿಸುವ ಕವನ 'ಮಹಾತ್ಮ ಗಾಂಧೀಜಿಗೆ'. 'ಹತಭಾಗಿನಿ ತಂಗಿ' ಹೆಣ್ಣಿನ ಬಾಳಿನ ಚಿತ್ರಣ. ಹೆಣ್ಣು ತನ್ನಲ್ಲಿ ತಾನು ತಂದುಕೊಳ್ಳಬೇಕಾದ ಪರಿವರ್ತನೆ. ಅವಳ ಬಾಳಲ್ಲಿ ಆಗಬೇಕಾದ ಅಕ್ಷರ ಕ್ರಾಂತಿಯನ್ನು ಸೂಚಿಸಿದ್ದಾರೆ, 'ಋಣ' ಮನುಷ್ಯ ಋಣದಲ್ಲಿ ಹುಟ್ಟಿ ಋಣದಲ್ಲಿ ಸಾಯುವನೆಂದು ತೋರಿಸುವ ಈ ಕವನಗಳು ಕೆಂಪೇಗೌಡರ ವೈವಿಧ್ಯ ಆಲೋಚನೆಗಳ ಫಲವಾಗಿದೆ.

ಅಡಿ ಟಿಪ್ಪಣಿ :–

೧. ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ.ಮುಗಳಿ, ಪುಟ ೧೬

೨. ಅಲ್ಲೇ ಪುಟ ೧೬

೩. ಕನ್ನಡದಲ್ಲಿ ಭಾವಗೀತೆ – ಪ್ರಭುಶಂಕರ. ಪುಟ ೨೫

೪. ಅಲ್ಲೇ ಪುಟ ೫೦೩

ಅಧ್ಯಾಯ – ೪

ಕೆಂಪೇಗೌಡರ ಕಥನ ಸಾಹಿತ್ಯ

೪.೧ ಕನ್ನಡದಲ್ಲಿ ಸಣ್ಣ ಕಥೆ :–

ಆಧುನಿಕ ಕನ್ನಡ ಸಾಹಿತ್ಯದ ಜನಪ್ರಿಯ ಪ್ರಕಾರಗಳಲ್ಲಿ ಸಣ್ಣಕಥೆ ಮುಖ್ಯವಾದುದು. ಕಾದಂಬರಿಯ ತರುವಾಯ ಸಣ್ಣಕಥೆಯೇ ಅತ್ಯಂತ ಜನಪ್ರಿಯವಾದ ರೂಪವಾಗಿದೆ. ಕನ್ನಡ ಮಾತ್ರವಲ್ಲದೆ ಭಾರತದ ಇತರ ಭಾಷೆಗಳಲ್ಲಿಯೂ ಇದು ಪ್ರಸಿದ್ಧಿಯನ್ನು ಪಡೆದಿತ್ತು. ಕಥೆಯ ಬಗ್ಗೆ ಮನುಷ್ಯನಿಗಿರುವ ಜನ್ಮಜಾತವಾದ ಕುತೂಹಲವೂ ಅಲ್ಲದೆ ಸಣ್ಣಕಥೆ ಭಾವಗೀತೆಯೊಡನೆ ಹೊಸದಾಗಿ ಬಂದಸಾಹಿತ್ಯ ಪ್ರಕಾರವಾಗಿರುವುದು ಇದಕ್ಕೆ ಕಾರಣವಾಗಿದೆ. ಸಣ್ಣ ಕಥೆಗಳನ್ನು ಇಂತಿಷ್ಟೇ ಇವೆ ಎಂದು ಸ್ಪಷ್ಟವಾಗಿ ಹೇಳುವುದೇ ಒಂದು ಸವಾಲಾಗಿದೆ. ಕಾರಣ ದಿನಪತ್ರಿಕೆ. ವಾರಪತ್ರಿಕೆ ಹಾಗೂ ಮಾಸಪತ್ರಿಕೆಗಳಲ್ಲಿ ಸಣ್ಣ ಕಥೆಗಳು ಹುಟ್ಟುತ್ತಲೇ ಇವೆ. ಎಲ್ಲ ಘಟ್ಟಗಳಲ್ಲು ಸಣ್ಣ ಕಥೆಯ ಸಾಹಿತ್ಯ ಕೃಷಿ ನಡೆದೇ ಇದೆ. ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಎಲ್ಲ ಘಟ್ಟಗಳಲ್ಲಿನ ಅನೇಕ ಪ್ರಸಿದ್ಧ ಕವಿಗಳು. ಕಾದಂಬರಿಕಾರರು, ಪ್ರಬಂಧಕಾರರು. ವಿಮರ್ಶಕರೂ ಸೇರಿದಂತೆ ಅನೇಕರು ಸಣ್ಣಕಥೆಗಳನ್ನು ಬರೆದಿದ್ದಾರೆ.

"ಸಣ್ಣಕಥೆಯನ್ನ ಒಂದು ಮೈನರ್ ಸಾಹಿತ್ಯ ಪ್ರಕಾರವೆಂದು ನೋಡಲಾಗುತ್ತಿದೆ. ಆದರೆ ಕನ್ನಡವಲ್ಲಿ ಅದರ ಸ್ಥಾನ ಯಾವ ಮೇಜರ್ ಪ್ರಕಾರಕ್ಕಿಂತಲೂ ಕಡಿಮೆಯದೇನಲ್ಲ"[1] ಕಾದಂಬರಿ ಸಾಹಿತ್ಯದ ಜೊತೆ ಜೊತೆಯಲ್ಲಿಯೇ ರಚನೆಗೊಂಡ ಸಣ್ಣಕಥೆ ಪಾಶ್ಚಿಮಾತ್ಯ ಸಾಹಿತ್ಯದ ಪ್ರೇರಣೆಯಿಂದ ರಚನೆಗೊಂಡಿದೆ. ಐತಿಹಾಸಿಕವಾಗಿ ಕನ್ನಡದಲ್ಲಿ ಪಂಜೆಮಂಗೇಶರಾಯರು ಸಣ್ಣಕಥೆ ಬರೆದವರಲ್ಲಿ ಮೊದಲಿಗರು. ೧೯೦೦ರಲ್ಲಿ 'ಸುವಾಸಿನಿ' ಮಾಸಪತ್ರಿಕೆಯಲ್ಲಿ ಪಂಜೆಮಂಗೇಶರಾಯರ 'ನನ್ನಚಿಕ್ಕತಾಯಿ', ನನ್ನ ಚಿಕ್ಕತಂದೆ' ಎಂಬ ಎರಡು ಕಥೆಗಳು ಪ್ರಕಟವಾದವು. ನಂತರ ಎಂ.ಎನ್ ಕಾಮತರು. ಕೆರೂರು ವಾಸುದೇವಾಚಾರ್ಯರು ಪ್ರಾರಂಭದಲ್ಲಿ ಕಥೆಗಳನ್ನು ಬರೆದರು. ಆದರೆ ಸಣ್ಣಕಥೆಗೆ ಒಂದು ಸ್ವರೂಪ ಕೊಟ್ಟು. ಅದನ್ನು ಗಂಭೀರವಾದ ಜೀವನ ಚಿಂತನೆಯ ಮಾಧ್ಯಮವನ್ನಾಗಿ ಮಾಡಿ. ಭಾಷೆಯನ್ನ ಅದಕ್ಕೆ ಹದಗೊಳಿಸಿದವರು ಶ್ರೀನಿವಾಸರು. ಅವರ ಮೊದಲ ಕಥೆಗಳು 'ರಂಗಪ್ಪನ ಮದುವೆ' ಮತ್ತು 'ರಂಗಪ್ಪನ ದೀಪಾವಳಿ' ಜೀವನವನ್ನು ಗಂಭೀರವಾಗಿ ಕಂಡು ಮನುಷ್ಯ ಮುಟ್ಟಬಹುದಾದ ಹಿರಿಮೆಯ ಶಿಖರಗಳನ್ನು ಚಿತ್ರಿಸಿದ ಮಾಸ್ತಿಯವರು ಪ್ರಾರಂಭದಲ್ಲಿಯೇ ವಿಡಂಬನೆ ಇಲ್ಲದ ನವಿರು ಹಾಸ್ಯವನ್ನು ಸಣ್ಣಕಥೆಗೆ ತಂದು ಕೊಟ್ಟರು. 'ಕನ್ನಡದ ಸಣ್ಣಕಥೆಗಳ ಜನಕ' ಎಂದೇ ಖ್ಯಾತರಾದರು. ಇವರ ಎಲ್ಲ ಸಾಹಿತ್ಯ ಕೃಷಿಗಳಿಗಿಂತ ಸಣ್ಣಕಥೆ ಮುಕುಟಮಣಿಯಾಯಿತು. 'ಮಾಸ್ತಿ ಕನ್ನಡದ ಆಸ್ತಿ' ಎಂದೇ ಖ್ಯಾತರಾದರು.

ಭಾವಗೀತೆಯಂತೆ ಸಣ್ಣಕಥೆಯೂ ಸಮೃದ್ಧಿಯಾದ ಬೆಳೆಯನ್ನು ಕಂಡಿತು. ಸಾಮಾನ್ಯವಾಗಿ ಕಥೆಗಾರರೆಲ್ಲ ಮನುಷ್ಯನ ಹಿರಿಮೆಯನ್ನು ಬಾಳಿನ ಮೌಲ್ಯಗಳನ್ನ ಬೆಳೆಸಲು ಈ ಮಾಧ್ಯಮವನ್ನು ಬೆಳೆಸಿದರು. 'ಶ್ರೀಪತಿಯ ಕಥೆಗಳ' ಎ.ಆರ್ ಕೃಷ್ಣಶಾಸ್ತ್ರಿಗಳು ಸ್ವಲ್ಪ ಭಿನ್ನವಾದ ದಾರಿ ತುಳಿದರು, ಜೀವನದ ಕಹಿಯನ್ನು ಕಥೆಗಳಲ್ಲಿ ಕಾಣಿಸಿದರು. ಆದರೆ ಕಥೆಗಳ ನಿರೂಪಣೆಯ ದನಿ ಆಳವಾದ ಸಹನೆಯದನಿ. ಈ ಕಹಿಗೆ

ಚೌಕಟ್ಟನ್ನು ಹಾಕಿತು. ಅವರ 'ಗುರುಗಳ ಮಹಿಮೆ' ತಂತ್ರದ ದೃಷ್ಟಿಯಿಂದಲೂ ಜೀವನವನ್ನು ಕಾಣುವ ದೃಷ್ಟಿಯಿಂದಲೂ ವಿಶಿಷ್ಟವಾದ ಕಥೆ. ಆದರ್ಶಮಯ ದೃಷ್ಟಿಯಿಂದ ಕಥೆಗಳನ್ನು ಬರೆದ ಕುವೆಂಪು, 'ಧನ್ವಂತರಿ ಚಿಕಿತ್ಸೆ' ಯಂತಹ ಭಾರತದ ಬಡತನ ಘೋರ ಕಷ್ಟವನ್ನ ಚಿತ್ರಿಸುವ ಕಥೆಯನ್ನು ಬರೆದರು. ಬೇಂದ್ರೆ, ಆನಂದ ಕಂದ, ದೇವುಡು ನರಸಿಂಹಶಾಸ್ತ್ರಿ, ಸಿ.ಕೆ.ವೆಂಕಟರಾಮಯ್ಯ, ಗೋವಿಂದರಾವ್, ರಂ.ಶ್ರೀ.ಮುಗಳಿ ಇವರೆಲ್ಲ ಒಳ್ಳೆಯ ಕಥೆಗಳನ್ನು ಬರೆದರು.

ಶ್ರೀನಿವಾಸರ ನಂತರ ಇದೇ ಸಂಪ್ರದಾಯದಲ್ಲಿ ಆನಂದರು ಬಹು ಜನಪ್ರಿಯ ಕಥೆಗಳನ್ನು ಬರೆದರು. ಆನಂದರ ಕಥೆಗಳು ಮಾಸ್ತಿಯ ಕಥೆಗಳಂತೆ ಜೀವನ ವೈಶಾಲ್ಯವಿಲ್ಲದಿದ್ದರೂ ಭಾವತೀವ್ರತೆ ಯುಂಟು. ದುಃಖ, ನಲಿವು, ಅನುರಾಗ ಎಲ್ಲವೂ ತೀಕ್ಷ್ಣವಾಗಿ ರಚನೆಗೊಂಡವು. 'ನಾನುಕೊಂದ ಹುಡುಗಿ' 'ಮಾಟಗಾತಿ', 'ಜೊಜ್ಜಲ ಸಂಭ್ರಮ'. 'ಹೆಂಡತಿಯ ಕಾಗದ' ಕಥೆಗಳಿಂದ ಬಹುವಾಗಿ ಜನಪ್ರಿಯರಾದವರು. ನಂತರ ಗೋಪಾಲಕೃಷ್ಣರಾಯರು ಅನೇಕ ಹೊಸ ಪ್ರಯೋಗಗಳನ್ನು ಮಾಡಿದರು. ಮಧ್ಯಮ ವರ್ಗದ ಜೀವನದ ಕಷ್ಟ ಕಾರ್ಪಣ್ಯಗಳನ್ನು, ಎಂ.ವಿ.ಸೀತಾರಾಮಯ್ಯನವರು ತಮ್ಮ ಕಥೆಗಳಲ್ಲಿ ಚಿತ್ರಿಸಿದರು. ನಗರ ಜೀವನದ ಕಿರುಕುಳ, ಕಾರ್ಪಣ್ಯಗಳನ್ನು ಹಾಸ್ಯದ ಮೆರಗು ಕೊಟ್ಟ ಅಶ್ವತ್ಥರು ಚಿತ್ರಿಸಿದರು. ಅದರ ನಿಷ್ಠುರತೆ ಕುದಿತಗಳನ್ನು ಹೃದಯ ಸ್ಪರ್ಶಿಯಾಗಿ ವ್ಯಾಸರಾಯ ಬಲ್ಲಾಳರು ಚಿತ್ರಿಸಿದರು. ಭಾರತೀಪ್ರಿಯರ ಕಥೆಗಳಲ್ಲಿ ಜೀವನ ಚಿಂತನೆ ಇಲ್ಲದಿದ್ದರೂ ಒಂದು ಸನ್ನಿವೇಶವನ್ನು ಅವರು. ಬಹಳ ಪರಿಣಾಮಕಾರಿಯಾಗಿ ಕಟ್ಟುವರು. ನಂತರ ಜಿ.ಪಿ.ರಾಜರತ್ನಂ, ಕೊಡಗಿನ ಗೌರಮ್ಮ ಶ್ಯಾಮಲಾದೇವಿ, ಕೃಷ್ಣಕುಮಾರ್ ಕಲ್ಲೂರ್, ಸಿ.ಕೆ.ನಾಗರಾಜರಾವ್, ಶೇಷಗಿರಿರಾವ್, ಚದುರಂಗ, ಶ್ರೀನಿವಾಸ ಹಾವನೂರ ಮೊದಲಾದವರು ಸೊಗಸಾದ ಕಥೆಗಳನ್ನು ಬರೆದರು, ತ್ರಿವೇಣಿ, ಎಂ.ಕೆ ಇಂದಿರಾ, ಹೆಚ್.ಎಸ್ ಪಾರ್ವತಿ, ಪ್ರೇಮಾಭಟ್, ನೀಳಾದೇವಿ, ನಿರುಪಮಾ. ಶಾಂತದೇವಿ ಕಣವಿ ಇತರೆ ಅನೇಕ ಮಹಿಳೆಯರು ಉತ್ತಮ ಕಥೆಗಳನ್ನು ರಚಿಸಿದರು. ಇವರೊಂದಿಗೆ ಹೆಸರಿಸಬೇಕಾದ ಮುಖ್ಯವಾದ ಹೆಸರು ಗೊರೂರು ರಾಮಸ್ವಾಮಿ ಅಯ್ಯಂಗಾರ್, ಮತ್ತು ಬಾಗಲೋಡಿ ದೇವರಾಯರು.

ಪ್ರಗತಿಶೀಲ ದೃಷ್ಟಿಯನ್ನು ಹಬ್ಬಿಸುವುದಕ್ಕಾಗಿ ಅ.ನ.ಕೃ ರವರು ಒಳ್ಳೆಯ ಕಥೆಗಳನ್ನು ಬರೆದರು. ಆದರೆ ಅವರ ಕಥೆಗಳು ಅವರ ಕಾದಂಬರಿಗಳಷ್ಟು ಜನಪ್ರಿಯತೆ ಗಳಿಸಲಿಲ್ಲ. ತ.ರಾ.ಸು, ಬಸವರಾಜ ಕಟ್ಟೀಮನಿ. ಕೋ.ಚನ್ನಬಸಪ್ಪ ಮೊದಲಾದವರು ಒಳ್ಳೆಯ ಕಥೆಗಳನ್ನು ಬರೆದರು. ಸುಬ್ಬರಾಯರ ಕಥೆಗಳಲ್ಲಿ ವೈವಿಧ್ಯವಿದೆ. ಕಲೆ ಇದೆ. 'O-O=O' ಅವರ ಒಂದು ಸೊಗಸಾದ ಕಥೆ. ನಿರಂಜನರು ಈ ಕಾಲಘಟ್ಟದ ಮತ್ತೊಬ್ಬ ಪ್ರಮುಖರು. ಬಡವರಿಗೆ ಸಮಾಜದಲ್ಲಿ ಮೂಕರಾದವರಿಗೆ ಆಗುತ್ತಿರುವ ಕ್ರೂರ ಅನ್ಯಾಯವನ್ನು ಸುಲಿದು ತೋರಿಸುವ ಮಾಧ್ಯಮವಾಗಿ 'ರಕ್ತಸರೋವರ' ಮತ್ತು ಸಂಧಿಕಾಲ' ದಲ್ಲಿನ ರಚನೆಯನ್ನು ಕಾಣಬಹುದು. ಚದುರಂಗ. ಎಸ್.ಅನಂತನಾರಾಯಣ ಮೊದಲಾದವರು ಪ್ರಗತಿಶೀಲ ಮಾರ್ಗದಲ್ಲಿ ಒಳ್ಳೆಯ ಕಥೆಗಳನ್ನು ಬರೆದರು. ಓದುಗರ ಸಾಮಾಜಿಕ ಪ್ರಜ್ಞೆಯನ್ನ ಎಚ್ಚರಿಸಿ. ಸಮಾಜದಲ್ಲಿ ತುಳಿತಕ್ಕೆಸಿಕ್ಕಿದವರ ಪಾಡನ್ನು ಓದುಗರ ಕಣ್ಣಿಗೆ ಅಂತಃಕರಣಕ್ಕೆ ಮುಟ್ಟಿಸಿದ ಸಾಧನೆ ಪ್ರಗತಿಶೀಲರದು.

ನವ್ಯ ಕಥೆಯ ಪ್ರವರ್ತಕರಾಗಿ ತ.ರಾ.ಸು. ರಾಜಲಕ್ಷ್ಮಿ, ರಾಮಚಂದ್ರಶರ್ಮ, ಕೆ.ಸದಾಶಿವ ರವರು ಕಂಡುಬರುತ್ತಾರೆ. ನವ್ಯ ಕಾದಂಬರಿಗಳಂತೆ. ನವ್ಯ ಸಣ್ಣಕಥೆಗೂ ಮನುಷ್ಯನ ಮನಸ್ಸಿನಲ್ಲಿ ಆಸಕ್ತಿ. ಮನಸ್ಸಿನ ಮತ್ತು ಅನುಭವದ ವಿಶ್ಲೇಷಣೆಯನ್ನು ಮಾಡುವ ಪ್ರಯತ್ನ ಮಾಡಿದೆ. ಧ್ವನಿ. ಪ್ರತಿಮೆ, ಮತ್ತು ಸಂಕೇತಗಳ ಮೂಲಕ ಅನುಭವಕ್ಕೆ ಮಾತಿನ ಶರೀರ ಕೊಡುವ ಪ್ರಯತ್ನವಿದೆ. ಅನಂತಮೂರ್ತಿಯವರ ಕಥೆಗಳಲ್ಲಿ ಎದ್ದು ಕಾಣುವುದು ಪರಂಪರಾಗತವಾಗಿ ಬಂದ ಮೌಲ್ಯಗಳ ಪರೀಕ್ಷೆ. ಎಲ್ಲರಿಗೆ ಅನಿವಾರ್ಯವಾದ ಮತ್ತು ಪ್ರಭಲವಾದ ಅನುಭವ ಕಾಮ. ಆದರಿಂದ ಅನೇಕ ಕಥೆಗಳಲ್ಲಿ ಗಂಡು-ಹೆಣ್ಣು ಆಕರ್ಷಿತರಾದಾಗ ಈ ಮೌಲ್ಯಗಳು ಎಷ್ಟು ನೆರವಾಗುತ್ತದೆ ಎಂಬ ಪರೀಕ್ಷೆ ನಡೆಯುತ್ತಿದೆ. ಆದರೆ ಪರಂಪರಾಗತ ಮೌಲ್ಯಗಳ ಪರೀಕ್ಷೆ ನಡೆಯುವಾಗಲೇ ಪಾತ್ರಗಳ ಸ್ವಭಾವದ ವಿಶ್ಲೇಷಣೆಯೂ ನಡೆಯುತ್ತದೆ. ಅನಂತಮೂರ್ತಿಯವರು ಪ್ರಶ್ನೆ, 'ಬೋಜರಾಜ'. 'ಕಾರ್ತಿಕ'. 'ಕ್ಲಿಪ್‌ಜಾಯಿಂಟ್', 'ಘಟಶ್ರಧ್ಧ', 'ಪ್ರಸ್ತ' ಮೊದಲಾದ ಹಲವು ಒಳ್ಳೆಯ ಕಥೆಗಳನ್ನು ಬರೆದಿದ್ದಾರೆ. ಹಿಂದಿನ ಯುಗಗಳ ಕಥೆಗಳಿಗೆ ಹೊಂದಿಕೊಂಡವರಿಗೆ ನವ್ಯ ಕಥೆಯ ಕಷ್ಟ ಎಂದರೆ ಕಥೆಯ ಅಂಶ ಇಲ್ಲದಿರುವುದು ಅಥವಾ ಕಥೆಯಲ್ಲಿ ಏನಾಗುತ್ತಿದೆ ಎಂದು ತಿಳಿಯಲು ಕಷ್ಟವಾಗುವುದು. ಆದರೆ ಅನಂತ ಮೂರ್ತಿಯವರ ಕಥೆ ಇದಕ್ಕಿಂತ ಭಿನ್ನವಾಗಿದೆ.

ನಂತರದ ಪ್ರಮುಖರು ಲಂಕೇಶರು. ಇವರು ಸಾಹಿತ್ಯದ ಹಲವು ಪ್ರಕಾರಗಳನ್ನ ಬಳಸಿದರೂ ಸಣ್ಣಕಥೆ ಅವರಿಗೆ ಉತ್ತಮವಾಗಿ ಒಗ್ಗಿದೆ. 'ನಾನಲ್ಲ'. 'ಉಮಾಪತಿಯ ಸ್ಕಾಲರ್ ಶಿಫ್‌ಯಾತ್ರೆ', 'ಕಲ್ಲುಕರಗುವ ಸಮಯ ಮತ್ತು ಇತರೆ ಕಥೆಗಳು' ಲಂಕೇಶರ ಪ್ರಮುಖ ಕಥಾಸಂಕಲನಗಳು. ಶಾಂತಿನಾಥದೇಸಾಯಿ ಮತ್ತೊಬ್ಬ ಪ್ರಮುಖರು. ಇವರ ಪ್ರಸಿದ್ದ ಕಥೆ 'ಕ್ಷಿತಿಜ'. ನಂತರ ಗಿರಡ್ಡಿಗೋವಿಂದರಾಜು, ಖಾಸನೀಸರು. ಟಿ.ಜಿ ರಾಘವರು. ಯಶವಂತ ಚಿತ್ತಾಲರು, ಜಿ.ಎಸ್ ಸದಾಶಿವರು ಹಲವು ಕಥೆಗಳನ್ನು ಬರೆದಿದ್ದಾರೆ. ವೀರಭದ್ರ ಮತ್ತು ಶ್ರೀಕೃಷ್ಣ ಆಲನಹಳ್ಳಿ ಕಥಾಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಇವರಲ್ಲದೆ 'ಮುಳ್ಳುಗಳು ಮತ್ತು ಕೊನೆಯದಾರಿ' ಎಂಬ ಎರಡು ಸಂಕಲನಗಳನ್ನು ಬರೆದು ಪ್ರಸಿದ್ದರಾದವರು ವೀಣಾ ಎಲ್ಬುರ್ಗಿಯವರು.

ನವ್ಯ-ನವ್ಯೇತರ ಎಂದು ಗೆರೆ ಎಳೆಯುವುದು ಎಷ್ಟು ಕಷ್ಟ ಎಂಬುದು ಸಣ್ಣ ಕಥೆಯ ಕ್ಷೇತ್ರವಲ್ಲಿ ಸ್ಪಷ್ಟವಾಗುತ್ತಿದೆ. ಅಥವಾ ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನವ್ಯ ಕಥಾ ಸಾಹಿತ್ಯದ ಕಾಲದಲ್ಲಿ ನವ್ಯದ ಮನೋಧರ್ಮವನ್ನು ಪ್ರಕಟಿಸಿದರೂ ಕಥೆಯನ್ನು ವ್ಯಕ್ತಿತ್ವದ ರಿಂಗಣದಾಚೆ ಜಗ್ಗುತ್ತಿದ್ದ ಕಥೆಗಾರರು ಬರೆದರು. ಈ ಸಾಲಿನ ಪ್ರಮುಖರು ಪೂರ್ಣಚಂದ್ರತೇಜಸ್ವಿಯವರು. ಇವರು ಬರೆದದ್ದುಎರಡು ಕವನ ಸಂಕಲನಗಳು. ಎರಡೂ ಗಮನಾರ್ಹವಾಗಿವೆ. ಆ ಎರಡು ಸಂಕಲನಗಳಲ್ಲಿ 'ಹುಲಿಯೂರಿನ ಸರಹದ್ದು' ಬಹಳ ಹೆಸರು ಮಾಡಿದರೂ 'ಅಬಚೂರಿನ ಪೋಸ್ಟಾಫೀಸು' ಅಷ್ಟೇ ಜನಪ್ರಿಯ ಸಂಕಲನವಾಗಿದೆ. ಇದೇ ಸಾಲಿನ ಪ್ರಮುಖರೆಂದರೆ ದ್ಯಾವನೂರು ಮಹಾದೇವು ಮತ್ತು ಬೆಸಗರಹಳ್ಳಿ ರಾಮಣ್ಣರು. 'ದ್ಯಾವನೂರು' ಕಥಾ ಸಂಕಲನವು ಆಡುಮಾತಿನಲ್ಲಿ ಬರೆದ ಕಥಾಸಂಕಲನವಾಗಿದೆ. ಶೋಷಣೆಗೆ ಒಳಗಾದವರ ಬಾಳು ಇಲ್ಲಿನ ಕಥಾವಸ್ತು. ಎಷ್ಟು ರೀತಿಯಲ್ಲಿ ಶೋಷಣೆಗಳು ನಡೆಯುತ್ತವೆ ಎಂಬುವನ್ನು ಈ ಕಥೆಗಳು ತಿಳಿಸುತ್ತವೆ.

ಹೀಗೆ ನವೋದಯ ಪೂರ್ವದಿಂದ ಇಂದಿನವರೆಗೂ ಸಣ್ಣ ಕಥಾಕ್ಷೇತ್ರವು ನಿರಂತರವಾಗಿ ವಹನಗೊಳ್ಳುತ್ತಿವೆ. ಪ್ರಮುಖರನ್ನ ಇಲ್ಲಿ ಉಲ್ಲೇಖಿಸಿದ್ದೇನೆ. ಇನ್ನು ಅನೇಕ ಕಥೆಗಾರರನ್ನ ಕನ್ನಡ ಸಾಹಿತ್ಯದಲ್ಲಿ ಕಾಣಬಹುದು. ಹಾಸ್ಯದ ಕಥೆಗಳನ್ನ ಅನೇಕರು ಬರೆದಿದ್ದಾರೆ. ತಿಳಿಹಾಸ್ಯಬೇರೆ. ವಿಡಂಬನೆಬೇರೆ. ಟೀಕೆ ಆಕ್ಷೇಪಣೆಗಳಿಲ್ಲದ ಮಮತೆಯ ತೆಳುಲೇಪವೂ ಇರುವ ಕಥೆಗಳನ್ನು ಶ್ರೀನಿವಾಸರೂ, ಆನಂದರೂ, ಅಶ್ವತ್ಥರೂ ಬರೆದರು. ಬಹುಶಃ ಸಣ್ಣಕಥೆಯ ಕ್ಷೇತ್ರದಲ್ಲಿ ಮೊದಲು ವಿಡಂಬನೆಯಿಂದ ಹೆಸರಾದವರು ಬೀಚಿ. ಪ್ರಗತಿಶೀಲ ಸಾಹಿತ್ಯದಲ್ಲಿ ವಿಡಂಬನೆಯ ಬಳಕೆಯನ್ನು ಕಾಣುತ್ತೇವೆ. ಆದರೆ ಇಷ್ಟು ಇತಿಹಾಸ ಹೊಂದಿರುವ ಸಣ್ಣಕಥಾ ಕ್ಷೇತ್ರದಲ್ಲಿ ಹಾಸ್ಯದ ಪ್ರಮಾಣ ಕಡಿಮೆ. ಹಾಸ್ಯ ಕಥೆಗಳೆನಿಸಿಕೊಂಡವುಗಳಲ್ಲಿ ಎಷ್ಟೋಬಾರಿ ಚಟಾಕು ಹಾಸ್ಯಕ್ಕೆ ಐದು ಸೇರು ಸಪ್ಪೆ ವೃತ್ತಾಂತ ಸೇರುತ್ತದೆ.

ಒಟ್ಟಾರೆಯಾಗಿ ಕನ್ನಡದಲ್ಲಿ ಸಣ್ಣಕಥೆ ಸಮೃದ್ಧವಾಗಿಯೇ ಕೃಷಿಯಾಗಿದೆ. ಇದರ ಸಿಂಹಪಾತ್ರಧಾರಿ ಮಾಸ್ತಿಯವರು. ಉಳಿದಂತೆ ಆನಂದ, ಅಶ್ವತ್ಥರೇ ಮೊದಲ್ಗೊಂಡು ನೂರಾರು ಕಥಾಕಾರರನ್ನು ಗುರುತಿಸಬಹುದು. ಆದರೆ ಸಣ್ಣಕಥೆಯೊಂದು ಯಶಸ್ವಿಕಥೆ ಎನಿಸಿಕೊಳ್ಳಲು "ಮಾತಿನ ಬಳಕೆ ಅತ್ಯಂತ ಮಿತವಾಗಿರಬೇಕು. ಇದು ಮಿಂಚು ಒಮ್ಮೆ ಹೊಳೆದು ನಮ್ಮ ಸುತ್ತಮುತ್ತಲಿನ ಪ್ರದೇಶವನ್ನು ಕ್ಷಣ ಕಾಣಿಸಿ ಮರೆಯಾದಂತೆ. ಹೊಳೆಯುವ ನೀರಿನ ಹನಿ ಸೂರ್ಯನ ಕಲ್ಪನೆ ಮಾಡಿಕೊಂಡಂತೆ"[3] ಇರಬೇಕು.

೪.೨ ಸಣ್ಣಕಥಾ ಸಾಹಿತ್ಯ ಮತ್ತು ಮಂಡ್ಯ ಜಿಲ್ಲೆ

ಕನ್ನಡ ಸಾಹಿತ್ಯಕ್ಕೆ ಮಂಡ್ಯ ಜಿಲ್ಲೆಯ ಕೊಡುಗೆ ಗಣನೀಯವಾಗಿದೆ. ಮಹಾಕಾವ್ಯ, ಭಾವಗೀತೆ, ಪ್ರಬಂಧ, ನಾಟಕ. ಕಾದಂಬರಿಗಳಂತೆಯೇ ಸಣ್ಣಕಥಾ ಕ್ಷೇತ್ರಕ್ಕೆ ಜಿಲ್ಲೆಯ ಕಾಣಿಕೆ ಅನುಪಮವಾದುದು, ಶ್ರೀಕಂಠೇಶಗೌಡರು ನಾಟಕ ಕ್ಷೇತ್ರಕ್ಕೆ ನೀಡಿದ ಕಾಣಿಕೆ, ಪು.ತಿ.ನ ಮತ್ತು ಸು.ಜ.ನಾರಾಯಣಶೆಟ್ಟರ ಮಹಾಕಾವ್ಯ ರಚನೆ, ಎ.ಎನ್.ಮೂರ್ತಿರಾಯರು ಪ್ರಬಂಧ ಕ್ಷೇತ್ರಕ್ಕೆ ನೀಡಿದ ಕಾಣಿಕೆ. ತ್ರಿವೇಣಿಯವರ ಕಾದಂಬರಿರಚನೆ, ಪು.ತಿ.ನ. ಕೆ.ಎಸ್.ನ ಮೊದಲಾದವರ ಭಾವಗೀತೆ ರಚನೆಗಳು ಕನ್ನಡ ಸಾಹಿತ್ಯದ ಮುಂಚೋಣಿಯಲ್ಲಿವೆ. ಜನಪದ ಸಾಹಿತ್ಯಕ್ಕೆ ಜಿಲ್ಲೆಯ ಕೊಡುಗೆ ಬಹುದೊಡ್ಡದೇ ಆಗಿದೆ.

ಸಣ್ಣಕಥೆಗೆ ಜಿಲ್ಲೆಯ ಕೊಡುಗೆ ಕಿರಿದೇನಲ್ಲ. ಮೇಲಿನ ಬಹುತೇಕ ಬರಹಗಾರರು ಸಣ್ಣಕಥೆಯನ್ನು ಬರೆದಿದ್ದಾರೆ. ಅದರಲ್ಲಿ ಜೀ.ಶಂ.ಪ ರವರು 'ಮಬ್ಬುಜಾರಿದ ಕಣಿವೆಗಳಲ್ಲಿ' ಕಾಡುಗಿಡಗಳು' ಕಥೆಗಳನ್ನು ಬರೆದಿದ್ದಾರೆ. ಈ ಮೂಲಕ ಸಣ್ಣಕಥಾ ಸಾಹಿತ್ಯದಲ್ಲಿ ಜಾನಪದ ಸತ್ವವನ್ನು ನೆನಪಿಗೆ ತರುತ್ತಾರೆ. ಇನ್ನು ಜನಪ್ರಿಯ ಕಾದಂಬರಿಗಾರ್ತಿಯಾದ ತ್ರಿವೇಣಿಯವರು ಮೊದಲು ಬರೆದದ್ದು ಸಣ್ಣಕಥೆಗಳನ್ನು, 'ಹೆಂಡತಿಯ ಹೆಸರು' 'ಎರಡು ಮನಸ್ಸು' ಹಾಗೂ 'ಸಮಸ್ಯೆಯ ಮಗು' ಇವರ ಕಥಾ ಸಂಕಲನಗಳು. ಆದರೆ ಇವರು ಕಾದಂಬರಿ ಕಾರ್ತಿಯಾಗಿಯೇ ಜನಪ್ರಿಯರಾದರು. ಇವರಲ್ಲದೆ ಕೆ.ಎಸ್.ನ, ಪು.ತಿ.ನ ರೂ ಸಹ ಸಣ್ಣಕಥೆಗಳನ್ನು ಬರೆದಿದ್ದಾರೆ.

ಮಂಡ್ಯ ಜಿಲ್ಲೆಯ ಸಣ್ಣಕಥಾ ಪ್ರತಿನಿಧಿ ಬೆಸಗರಹಳ್ಳಿ ರಾಮಣ್ಣ. ವೃತ್ತಿಯಲ್ಲಿ ವೈದ್ಯರಾಗಿ ಪ್ರವೃತ್ತಿಯಲ್ಲಿ ಕಥೆಗಾರರಾದ ದಿಟ್ಟವಾಗಿ ಬರೆದ ವ್ಯಕ್ತಿ. ರಾಮಣ್ಣನವರ ಕಥಾಸಾಹಿತ್ಯ ಮಂಡ್ಯಜಿಲ್ಲೆಯ ಗ್ರಾಮೀಣ ಸೊಗಡಿ

ನಿಂದ ಕೂಡಿದ್ದು ಬಂಡಾಯ ಅಂಶಗಳನ್ನು ಒಳಗೊಂಡಿದೆ. ಬದುಕಿನ ವಿವಿಧ ಮುಖಗಳನ್ನು ಪರಿಚಯಿಸುತ್ತಾ ರಾಜಕೀಯ, ಅರಾಜಕತೆ ಮತ್ತು ಊಳಿಗಮಾನ್ಯ ವ್ಯವಸ್ಥೆಯ ಕುರಿತ ಆಕ್ರೋಶವನ್ನು ದಾಖಲಿಸುವ ಇವರ ಕಥೆಗಳು ಗ್ರಾಮೀಣ ಪರಿಸರದ ಸಣ್ಣಕುಟೀರದಲ್ಲಿ ಚಿಗುರೊಡೆಯುತ್ತವೆ. ಹಳ್ಳಿಯ ಬದುಕನ್ನು ನಾಶಮಾಡುವ ಒಂದು ಪ್ರಧಾನ ಸಂಸ್ಕೃತಿಯ ನಡುವೆ ಕಮರಿಹೋದ ಪರಿಶಿಷ್ಟ ಸಂಸ್ಕೃತಿಯ ಬಗ್ಗೆ ಅಪಾರ ಕಾಳಜಿಯಿಂದ ಕಥೆ ಕಟ್ಟಿಕೊಡುವ ರಾಮಣ್ಣನವರ ಕಥಾಸಾಹಿತ್ಯದಲ್ಲಿ ಒಕ್ಕಲಿಗರ, ದಲಿತರ, ಸತ್ವ, ನಿಸ್ಸತ್ವ, ಶಕ್ತಿ, ಪ್ರೇಮ, ದಬ್ಬಾಳಿಕೆ, ದ್ವೇಶ ಪ್ರಧಾನ ವಸ್ತುವಾಗಿದೆ, ಇವರ ಪ್ರಕಟಿತ ಕೃತಿಗಳು 'ನೆಲದ ಒಡಲು' 'ಗರ್ಜನೆ' 'ನೆಲದಸಿರಿ' 'ಹರಕೆಯ ಹಣ' 'ಒಂದು ಹುಡುಗನಿಗೆ ಬಿದ್ದ ಕನಸು' 'ತೋಳಗಳ ನಡುವೆ' 'ಕೊಳಲು ಮತ್ತು ಖಡ್ಗ'. 'ಕಣಜ' ಇವರ ಸಮಗ್ರ ಕಥಾ ಸಾಹಿತ್ಯ ಕೃತಿ. ರಾಮಣ್ಣನವರ ಬರವಣಿಗೆ ವಾಸ್ತವದಿಂದ ಹುಟ್ಟಿದ ಬಂಡಾಯದ ದನಿಯಾಗಿದೆ. ಆ ಮೂಲಕ ಗ್ರಾಮೀಣ ಲೋಕದ ಕ್ರೌರ್ಯವನ್ನು ಬಿಚ್ಚಿಡುತ್ತಾ, ಜನಪದ ದನಿಯನ್ನು ಎತ್ತಿ ಹಿಡಿಯುವ ಇವರ ಕಥಾ ಸಾಹಿತ್ಯ ಮಾನವೀಯ ಕಾಳಜಿಯಿಂದ ಕೂಡಿರುತ್ತದೆ, ರಾಮಣ್ಣನವರ ನಂತರ ಮಂಡ್ಯ ಜಿಲ್ಲೆಯ ಸಣ್ಣಕಥಾ ಬರಹಗಾರರಲ್ಲಿ ಹೆಸರಿಸಬಹುದಾದ ಬಹುಮುಖ್ಯವಾದ ವ್ಯಕ್ತಿ ಶಿವಳ್ಳಿ ಕೆಂಪೇಗೌಡ. ಭಾವಗೀತೆಗಳಲ್ಲದೆ ಮೂರು ಕಿರು ಕಥಾಸಂಕಲನಗಳನ್ನು ಹೊರತಂದಿದ್ದಾರೆ. ಬಹುತೇಕ ಇವರು ರಾಮಣ್ಣನವರೊಂದಿಗೆ ಮುಖಾಮುಖಿಯಾಗುತ್ತಾರೆ. ಭಾಷೆ, ವಸ್ತು, ಆಶಯಗಳನ್ನು ಗಮನದಲ್ಲಿರಿಸಿಕೊಂಡು ಈ ಮಾತನ್ನು ಪ್ರಸ್ತಾಪಿಸಲಾಗಿದೆ.

೪.೩ <u>ಕೆಂಪೇಗೌಡರ ಕಥನ ಸಾಹಿತ್ಯ</u>

ಮಂಡ್ಯ ಜಿಲ್ಲೆಯಲ್ಲಿ ಕಥನ ಸಾಹಿತ್ಯದ ಅತ್ಯುತ್ತಮ ಬರಹಗಳನ್ನು ಬೆಸಗರಹಳ್ಳಿ ರಾಮಣ್ಣನವರು ನೀಡಿದ್ದಾರೆ. ವೃತ್ತಿಯಲ್ಲಿ ವೈದ್ಯರಾಗಿದ್ದವರು. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಸೇವೆಸಲ್ಲಿಸಿದವರು. ಹಾಗಾಗಿ ಗ್ರಾಮೀಣ ಬದುಕನ್ನು ಹತ್ತಿರದಿಂದ ಕಂಡವರು ಆದರೆ ಕೆಂಪೇಗೌಡರ ಬದುಕೇ ಹಳ್ಳಿ. ಅಧಿಕೃತ ವಿದ್ಯಾಭ್ಯಾಸ ಕಡಿಮೆ. ನೇರವಾಗಿ ಹಳ್ಳಿಯ ಬದುಕನ್ನು ಉಂಡವರು. ಹಳ್ಳಿಯ ಆರ್ಥಿಕ. ಸಾಮಾಜಿಕ ಕಾರ್ಪಣ್ಯಗಳನ್ನು ತಮ್ಮ ಕಥೆಗಳ ವಸ್ತುವಾಗಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಶಿವಳ್ಳಿಯವರ ಸಾಹಿತ್ಯ ಮತ್ತಷ್ಟು ಸ್ವಯುತವಾದುದ್ದು. ಸಣ್ಣಕಥಾ ಸಾಹಿತ್ಯವನ್ನ ಸೂಕ್ಷ್ಮವಾಗಿ ಅಧ್ಯಯನ ಮಾಡಿ ನಂತರ ಈ ನಿರ್ಮಿತಿಯಲ್ಲಿ ತೊಡಗಿದವರಲ್ಲ. ಬದಲಾಗಿ ತಮಗೆ ಅನಿಸಿದ್ದನ್ನು, ಕಂಡಿದ್ದನ್ನು, ಅನುಭವಿಸಿದ್ದನ್ನು ಬರೆಯಲು ಈ ಕಥಾ ಮಾಧ್ಯಮವನ್ನು ಆರಿಸಿಕೊಂಡವರು. ಕೆಂಪೇಗೌಡರು ಮೂರು ಕಥಾಸಂಕಲನಗಳನ್ನು ಬರೆದಿದ್ದಾರೆ. ಒಟ್ಟು ಇಪ್ಪತ್ತೆರಡು ಕಥೆಗಳು ಬಹುತೇಕ ಕಿರುಕಥೆಗಳು. ಅಲ್ಲದೆ ಪ್ರತಿ ಕಥಾ ಸಂಕಲನದ ಕಥೆಗಳ ಸಂಖ್ಯೆಯೂ ಕಡಿಮೆ. ಆ ಕಥಾಸಂಕಲನಗಳೆಂದರೆ,

೧. ಕಾಗೇಪುರದಲ್ಲಿ ಮೂರು ಮಕ್ಕಳ ಸಾವು.

೨. ಚಮ್ಮಾವುಗೆ, ಮತ್ತು

೩. ಸ್ವಗತ.

ಈ ಕಥಾಸಂಕಲನದ ಕಥೆಗಳು ರೈತರ, ಸ್ತ್ರೀಯರ, ದಲಿತರ, ಬದುಕಿನ ಚಿತ್ರಣಗಳಿಂದ ಕೂಡಿದೆ. ಅಲ್ಲದೆ ಪತ್ರಕರ್ತರ, ಕವಿ, ಕಲಾವಿದರ ಬದುಕಿನ ಸಮಸ್ಯೆಗಳನ್ನು ಅನಾವರಣಗೊಳಿಸಿದ್ದಾರೆ.

೪.೪ ಕೆಂಪೇಗೌಡರ ಕಥೆಗಳಲ್ಲಿ ನೈತಿಕ ಪ್ರಜ್ಞೆ

'ಕಾಗೇಪುರದಲ್ಲಿ ಮೂರು ಮಕ್ಕಳ ಸಾವು' ಕಥಾಸಂಕಲನದಲ್ಲಿನ ಒಂದು ಪುಟ್ಟ ಕಥೆ 'ಕೂಗು'. ಬಡವನ ಬದುಕನ್ನ ಕುರಿತಂತೆ ರಚನೆಗೊಂಡಿದೆ. ಇಲ್ಲಿನ ವಸ್ತು ಸಾರ್ವತ್ರಿಕ ಸತ್ಯವನ್ನ ಬಿಂಬಿಸುತ್ತಿದೆ. ಒಂದೆಡೆ ಪ್ರಾಥಮಿಕ ಶಾಲಾ ಶಿಕ್ಷಕನ ಕೌಟುಂಬಿಕ ಚಿತ್ರಣವನ್ನು, ಆರ್ಥಿಕ ಸಂಕಷ್ಟವನ್ನ ಚಿತ್ರಿಸುವ ಈ ಕತೆ, ಅನುಕೂಲವಂತರ ಗುಳ್ಳೆನರಿಬುದ್ಧಿಯನ್ನ ಚಿತ್ತರಿಸುತ್ತಿದೆ. ನಿಜವಾಗಿಯೂ ಇದೊಂದು ಆರ್ತನಾದ. ಕರುಳಿನ ಅಂತರಾಳದ ಮಾರ್ದನಿಯಂತಿದೆ.

ಉತ್ತಮ ಸರ್ಕಾರಿ ನೌಕರಿಯನ್ನು ಬಿಟ್ಟು ಬಯಸೀ ಶಾಲಾ ಶಿಕ್ಷಕನಾಗಿದ್ದ ಚನ್ನಪ್ಪನ ಬಾಳಿನ ವ್ಯಥೆ ಇಲ್ಲಿನ ಕಥೆಯಾಗಿದೆ. ತನ್ನ ಬಡತನದೊಂದಿಗೆ ಕುಟುಂಬದ ಭಾಳಸಂಗಾತಿಯಾಗಿ ಗೌರಿಯನ್ನು ಆರಿಸಿಕೊಂಡರು. ನಂತರ ಹತ್ತು ಮಕ್ಕಳ ತಂದೆಯಾದರು. ಬದುಕುಳಿದ ಎಂಟು ಮಕ್ಕಳೊಂದಿಗಿನ ಜನಸಂಖ್ಯಾ ಸ್ಫೋಟ. ಹೀಗಿರುವಾಗ ಚನ್ನಪ್ಪನಿಗೆ ಆಕಸ್ಮಿಕವಾಗಿ ಬಾಲ್ಯಗೆಳೆಯ ಕಲ್ಲಪ್ಪ ಸಿಕ್ಕಿದನು. ಬಲವಂತವಾಗಿ ಚನ್ನಪ್ಪನನ್ನ ಹೋಟಲಿಗೆ ಕರೆದೊಯ್ದು ಚನ್ನಪ್ಪ, ತನ್ನ ಶ್ರೀಮಂತಿಕೆಯನ್ನ ತೋರಿಸಿಕೊಂಡನು. ಬೇಕಾದ ತಿಂಡಿ ತರಿಸಿ ತಾನು ತಿಂದನು, ಚನ್ನಪ್ಪನನ್ನ ಬಲವಂತಗೊಳಿಸಿ ಒಂದು ಲೋಟ ಬೋರ್ನವೀಟಾನಾದ್ರು ಕುಡಿ ಎಂದು ತರಿಸಿದನು. ಇಷ್ಟರಲ್ಲಿ ಬಿಲ್ಲುಕೊಡುವ ಸಮಯ, ಯಾರೋ ತನ್ನನ್ನು ಕರೆದರೆಂದು ಕಲ್ಲಪ್ಪ ಅಲ್ಲಿಂದ ಮಾಯವಾದ. ಬಿಡುಗಾಸು ಇಲ್ಲದ ಚನ್ನಪ್ಪನ ಕೂಗು. ಇದು ಇಲ್ಲಿನ ಕಥೆ.

ಎರಡು ಪುಟಗಳ ಚಿಕ್ಕ ಕಥೆ. ತಾಂತ್ರಿಕವಾಗಿ ಅಷ್ಟೇನು ಮೇಲುಸ್ತರದ ಕಥೆಯಲ್ಲ. ಪಾತ್ರ ಸನ್ನಿವೇಶಗಳ ಸೃಷ್ಟಿಯಲ್ಲಿ ಸಾಮಾನ್ಯವಾದ ಕಥೆಯಾಗಿ ನಿಲ್ಲುತ್ತದೆ. ಆದರೆ ಸಮಾಜದ ಹಲವು ಸಮಸ್ಯೆಗಳನ್ನ ಚಿತ್ತರಿಸುವಲ್ಲಿ ಯಶಸ್ವಿಯಾಗಿದೆ. ಪ್ರಾಥಮಿಕ ಶಾಲಾ ಶಿಕ್ಷಕರ ಆರ್ಥಿಕ ಸಮಸ್ಯೆಗಳು, ಈ ವೃತ್ತಿಯನ್ನು ಸೇವೆ ಎಂದು ಬಯಸಿ ಬಂದ ಶಿಕ್ಷಕರು ಎದುರಿಸಬೇಕಾದ ಸಮಸ್ಯೆಗಳು, ಎಲ್ಲಕ್ಕಿಂತ ಮಿಗಿಲಾಗಿ ವಿದ್ಯಾವಂತರೇ ಹತ್ತು ಮಕ್ಕಳನ್ನು ಪಡೆದು ಅನುಭವಿಸುವ ಯಾತನೆ. ಈ ನಡುವೆ ಸ್ನೇಹದ ನೆಪದೊಂದಿಗೆ ಬರುವ ಊಸರವಳ್ಳಿ ಗೆಳೆಯರು. ನಡುನೀರಲ್ಲಿ ಕೈಬಿಡುವ ಹೆಸರಿಗೆ ಶ್ರೀಮಂತ ಜನರು ಈ ಅಂಶಗಳನ್ನ ಈ ಕಥೆ ಸುಂದರವಾಗಿ ಚಿತ್ರಿಸಿದೆ.

ಈ ಸಂಕಲನದ ಶೀರ್ಷಿಕೆ ಕಥೆ 'ಕಾಗೇಪುರದಲ್ಲಿ ಮೂರು ಮಕ್ಕಳ ಸಾವು'. ಶಿವಳ್ಳಿ ಕೆಂಪೇಗೌಡರ ಹೆಸರನ್ನು ಸಾಹಿತ್ಯವಲಯ ಗುರುತಿಸುವಂತೆ ಮಾಡಿದ ಕಥೆ. ವಿಭಿನ್ನವಾದ ತಂತ್ರದೊಂದಿಗೆ ಕಥೆಯ ನಿರೂಪಣೆ ಇದೆ. ಸಂಪಾದಕರಿಗೆ ಬರೆದಂತಹ ಲೇಖನವೊಂದರಂತೆ ಆರಂಭವಾಗುವ ಈ ಕಥೆ ಮುಂದೆ ನಗರ ಜೀವನದ ದಿನದ ಆರಂಭದೊಂದಿಗೆ ಕಥೆಯಾಗಿ ಮಾರ್ಪಡುತ್ತದೆ. ಮುಂದೆ ನಗರದ ಕಿವಿಗಡಚಿಕ್ಕುವ ಶಬ್ದ ಮಾಲಿನ್ಯ, ಯಾಂತ್ರಿಕ ಜೀವನ ಇದರೊಂದಿಗೆ ಅಮಾನವೀಯ ಬದುಕನ್ನ ಈ ಕಥೆ ಚಿತ್ತರಿಸುತ್ತದೆ. ಅಂದು ಸ್ವತಂತ್ರ್ಯ ದಿನಾಚರಣೆಯ ದಿನ. ಎಂದಿನಂತೆ ದಿನದ ಆರಂಭ. ಒಬ್ಬಾಕೆ ಬಿಳಿಯ ಸೀರೆಯವಳು

ಮೂರು ಮಕ್ಕಳನ್ನ ತಂದು ಬೀದಿ ಬದಿ ಮಲಗಿಸಿ. ಹಣದ ಸಂಪಾದನೆ ಮಾಡುವುದು, ಅಂದು ಮೈಕ ಹಾಕಿಕೊಂಡು ಅದ್ದೂರಿ ಕಾರ್ಯಕ್ರಮಗಳು ನಗರದ ಅನೇಕ ಕಡೆ ಜರುಗಿವೆ. ಮಂತ್ರಿಗಳಿಂದ ಉದ್ದುದ್ದದ ಅವಿವೇಕ ಭಾಷಣ. ಆ ದಿನಾಚರಣೆಯ ಸಂದರ್ಭದಲ್ಲೂ ವಿರೋಧ ಪಕ್ಷದವರನ್ನ ಜಡದ ಟೀಕೆ. ಇವೆಲ್ಲವೂ ಕಥೆಯ ಪೂರ್ವಾರ್ಧದಲ್ಲಿ ಚಿತ್ರವಾಗಿದೆ. ಮುಂದೆ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ತದೊಂದಿಗೆ ಮೆರವಣಿಗೆ. ಆ ಮೆರವಣಿಗೆ ಆ ಮೂರು ಮಕ್ಕಳು ಮಲಗಿರುವ ಮಾರ್ಗವಾಗಿ ಸಾಗುತ್ತದೆ. ಜನರ ಮರುಗುವಿಕೆ. ಪೋಲೀಸರಿಂದ ಕಾರಣರಾದವರಿಗೆ ಬೈಗುಳ. ರಾತ್ರಿಯಾದ ಮೇಲೆ ಮಕ್ಕಳನ್ನ ತಂದು ಮಲಗಿಸಿದವಳು ಬರುವುದು. ಮಕ್ಕಳ ಸ್ಥಿತಿ ಗಂಭೀರ, ಕೊನೆಯುಸಿರು ಎಳೆದಿವೆ. ಮಾಯವಾದ ಹೆಂಗಸು ಈ ಮಕ್ಕಳ ಶವದ ಮುಂದೆ ಇನ್ನಾವನೋ ತಿರುಕ ಬರುವನು. ತಾನು ಸಾಕಿದ ಮಕ್ಕಳು ಹಸಿವಿನಿಂದ ಆಹಾರವಿಲ್ಲದೆ ಸಾವನ್ನಪ್ಪಿದೆ ಎಂದು ಒಂದಷ್ಟು ಗಿಟ್ಟಿಸಿ ಮಾಯವಾಗುವನು. ಈಗ ಕೊಳೆತು ನಾರುತ್ತಿರುವ ಮಕ್ಕಳ ಶವಗಳನ್ನು ಅಲ್ಲಿಂದ ತೆರೆಸಿರೆಂದು ಪುರಸಭೆಗೆ ಪತ್ರ. ಈ ರೀತಿ ಕಥೆಯು ಬಹಳ ಸಾಂಕೇತಿಕವಾದ ಮುಕ್ತಾಯವನ್ನು ಕಾಣುತ್ತದೆ.

'ಕೂಗು' ಕಥೆಗೆ ಹೋಲಿಸಿದರೆ ತಂತ್ರದ ದೃಷ್ಟಿಯಿಂದಲೂ, ಸನ್ನಿವೇಶಗಳ ನಿರ್ಮಿತಿಯಲ್ಲೂ ಮೇಲುಸ್ತರದ ಕಥೆಯಾಗಿದೆ. ವಸ್ತುವಿನ ದೃಷ್ಟಿಯಿಂದಲೂ ಅತ್ಯುತ್ತಮ ಕಥೆ. ಭಾರತದ ನಗರ ಜೀವನ. ಅಜ್ಞಾನಿಗಳಿಂದ ರಾಜಕಾರಣಿಗಳು, ಹಸುಳೆ ಕಂದಮ್ಮಗಳನ್ನು ವ್ಯಾಪಾರದ ಸರಕಾಗಿ ಮಾಡಿಕೊಳ್ಳುವ ಹೆಂಗಸು, ಸತ್ತು ಬಿದ್ದ ಶಿಶುಗಳ ಶವಗಳನ್ನ ಲಾಭವಾಗಿ ಮಾಡಿಕೊಂಡ ಭಿಕ್ಷುಕ. ತನ್ನ ಸ್ವಾರ್ಥಕ್ಕಾಗಿಈ ಮೂರು ಕಂದಮ್ಮಗಳಿಗೆ ಬೆಳಬೆಳಗ್ಗೆ ಹೆಂಡ ಕುಡಿಸಿ ಬೀದಿಯಲ್ಲಿ ಭಿಕ್ಷೆಗಾಗಿ ಮಲಗಿಸಿರುವ ಹೆಂಗಸಿನ ರಕ್ಕಸ ಗುಣ ಹೀನಾಯವಾದುದಾಗಿದೆ. ಒಂದಿಷ್ಟು ಕರುಣೆ ಇಲ್ಲದ ಕ್ರೂರ ಸಮಾಜದ ಸ್ಪಷ್ಟರೂಪ ಇಲ್ಲಿದೆ. ಈ ಮೂಲಕ ಶಿವಳ್ಳಿಕೆಂಪೇಗೌಡರ "ಕಾಗೇಪುರದಲ್ಲಿ ಮೂರು ಮಕ್ಕಳ ಸಾವು ಕಥೆಯಲ್ಲಿರುವ ವ್ಯಂಗ್ಯ ಮತ್ತು ಸಾಮಾಜಿಕ ಕಳಕಳಿ ಗಮನಾರ್ಹ"[೩] ವಾದುದಾಗಿದೆ. ಹಾಗೆಯೇ ದೇವನೂರು ಮಹದೇವುರವರು ಹೇಳುವಂತೆ "ದುಃಖವನ್ನ ಕಲಾಕೃತಿಯಾಗಿ ಮಾಡುವ ಪ್ರಯತ್ನವಿದೆ"[೪] ಎಂಬ ಮಾತು ಅರ್ಥಗರ್ಭಿತವಾಗಿದೆ. ಮಕ್ಕಳನ್ನ ವ್ಯಾಪಾರದ ಸರಕಾಗಿಸಿಕೊಳ್ಳುವ ಬರ್ಬರವಾದ ಕಥನ ತಂತ್ರದೊಂದಿಗೆ ಈ ಕಥೆ ಮೂಡಿಬಂದಿದೆ. ಮಕ್ಕಳು ಬಿದ್ದಿರುವುದನ್ನ ನೋಡಿ ಚಿಲ್ಲರೆ ಕಾಸು ಹಾಕುವ ಜನರು, ಪೋಲೀಸ್ ಭಾಷೆಯಿಂದಲೇ ತನ್ನ ಅನಿಸಿಕೆಗಳನ್ನ ವ್ಯಕ್ತಪಡಿಸುವ ಪೇದೆಗಳು ಇವೆಲ್ಲವೂ ವಾಸ್ತವ ಸಮಾಜದ ಸ್ಥಿತಿಯನ್ನ ಸಹಜವಾಗಿ ಚಿತ್ರಿಸಿದೆ. ಸಂಪಾದಕರಿಗೆ ಓದುಗನೊಬ್ಬ ಬರೆದ ಪತ್ರದಂತೆ ಈ ಸಣ್ಣ ಕಥೆ ರಚನೆಗೊಂಡಿದೆ. ಇಲ್ಲಿ ಪತ್ರಿಕೆಗೆ ಪತ್ರವನ್ನ ಬರೆದವರ ಹೆಸರನ್ನ ನೊಂದಾಯಿಸುವ ಜಾಗದಲ್ಲಿ ಲೇಖಕರು "ಪರದೇಶಿ C/o ಪುಟ್‌ಬಾತ್" ಎಂದೇ ಬರೆದಿರುವುದು ಕಥೆಗೆ ಮತ್ತಷ್ಟು ಸಾಂಕೇತಿಕತೆಯನ್ನು ಒದಗಿಸುತ್ತಿದೆ. ಬೀದಿಯಲ್ಲಿ ಬಿದ್ದಿದ್ದ ಮಕ್ಕಳ ಬಗೆಗೆ ಏನೆಂದು ವಿಚಾರಿಸದ ಮಂದಿ ಅಷ್ಟಿಷ್ಟು ಕಾಸನ್ನ ಕೊಡುವುದರ ಮೂಲಕ ಧಾನಿಗಳ ನಿಸಿಕೊಂಡರು. ಆದರೆ ಈ ಪರದೇಶಿ ಶವಗಳ ಕಡೆಯೂ, ಕೊಳೆತು ದುರ್ನಾತ ಬಂದಾಗಲೂ ಯಾರೂ ಗಮನಿಸದಾದರು. ಇದನ್ನು ಪುರಸಭೆಯ ಗಮನಕ್ಕೆ ತಂದವರು ಕೂಡ ಪರದೇಶಿ ಈತನ ವಾಸವೂ

ಪುಟ್‌ಬಾತ್ ಎಂಬಂತಿದೆ. ಅಂದರೆ ನೋವುಂಡವನಿಗೆ ಮಾತ್ರ ನೋವಿನ ನೈಜ ಅನುಭವವಾಗುತ್ತದೆ. ಅತ ಮಾತ್ರ ಇಂಥವುಗಳಿಗೆ ಸ್ಪಂದಿಸಲು ಸಾಧ್ಯವಾಗಿದೆ ಎಂಬುದರೊಂದಿಗೆ ಕಥೆ ಮುಕ್ತಾಯವಾಗುತ್ತದೆ.

ಉತ್ತಮ ಕಥಾತಂತ್ರವನ್ನು ಹೊಂದಿರುವ ಹೃದಯ ಶ್ರೀಮಂತಿಕೆಯನ್ನು ತೋರಿಸುವ ಕಥೆ 'ಕರುಣಾಳು ಬಾ ಬೆಳಕೆ'. ಈ ಕಥೆ ನವ್ಯಕಥೆಗಳಂತೆ ವ್ಯಕ್ತಿಯ ಅಂತರಾಳದ ಸಂಘರ್ಷಗಳನ್ನು ಕುರಿತಂತೆ ಚಿತ್ರಿತವಾಗಿದೆ. ಶಾಲಾಬಾಲಕನ ಕುಟುಂಬದ ಕಥೆ 'ಕರುಣಾಳು ಬಾ ಬೆಳಕೆ'. ಕಥೆ ಆರಂಭದಿಂದ ಅಂತ್ಯದವರೆಗೆ ಸಹಜವಾಗಿ ತುಂಬು ನದಿಯಂತೆ ಹರಿಯುತ್ತದೆ. ಆದರೆ ಹೊಸ ಸನ್ನಿವೇಶವನ್ನು ಸೃಜಿಸಿ ಕಥಾ ಬೆಳವಣಿಗೆಗೆ ಯಾಂತ್ರಿಕಥೆ ತಂದಂತೆ ಕಾಣಬರುತ್ತವೆ. ಆದರೆ ಕಥೆಯು ಮುಕ್ತಾಯ ಓದುಗರಿಗೆ ಸೋಜಿಗ ತರುವಂತಿದೆ. ಮೊದಲೇ ತಿಳಿಸಿದಂತೆ ಶಾಲಾ ಬಾಲಕನ ಮಾನಸಿಕ ತಳಮಳ ಮತ್ತು ಸಂಘರ್ಷವನ್ನು ಕುರಿತ ಕಥೆ. ದಿಢೀರ್ ಆರಂಭವನ್ನು ಪಡೆಯುವ ಕಥಾಶೈಲಿ ಓದುಗರಲ್ಲಿ ಕುತೂಹಲವನ್ನು ಉಂಟುಮಾಡುವಲ್ಲಿ ಯಶಸ್ವಾಗಿದೆ.

ಸೋಮು ಶಾಲಾಬಾಲಕ. ತಂದೆ ತೀರಿಹೋಗಿದ್ದಾನೆ. ಖಾಯಿಲೆಯಿಂದ ನರಳುತ್ತಾ ಹಾಸಿಗೆ ಹಿಡಿದಿರುವ ತಾಯಿ. ತಮ್ಮ ಮತ್ತು ತಂಗಿ. ತಿನ್ನಲು ಆಹಾರವಿಲ್ಲದ ಬಡತನ. ತಂದು ಹಾಕುವವರಿಲ್ಲ ಆದರೂ ಅಕ್ಷರ ಕಲಿಯುವ ಹರಸಾಹಸ ಸೋಮನದು. ನಿತ್ಯದಂತೆ ಶಾಲೆಗೆ ತಡವಾಗಿ ಬರುವುದು. ಶಿಕ್ಷಕರಿಂದ ಮಾತಿನ ಶಿಕ್ಷೆ, ತರಗತಿಯಿಂದ ಬಹಿಷ್ಕಾರ ಇದಿಷ್ಟು ಕಥೆಯ ಮೊದಲ ಹಂತ. ಇಲ್ಲಿ ಆರ್ಥಿಕವಾಗಿ ನಲುಕಿರುವ ಕುಟುಂಬಕ್ಕೆ ಈ ಪುಟ್ಟ ಬಾಲಕ ಸಾರಥಿಯಾಗಿದ್ದಾನೆ. ಶಾಲೆಯಲ್ಲಿ ಹರಿದ ಬಟ್ಟೆಯ ನಿಂದನೆ ಆತನಿಗೆ ಅತಿ ಸಾಮಾನ್ಯ ಶಿಕ್ಷಕರು ಬೈಯುವಾಗ ತನ್ನ ಇಡೀ ಕುಟುಂಬದ ನೋವನ್ನು ಕಿರುಚುತ್ತಾ ಹೇಳಬೇಕೆನಿಸಿದರೂ ಸಾಧ್ಯವಾಗದೆ ತೆಪ್ಪಗಿರುವ ಮಾನಸಿಕ ಸಂಘರ್ಷ.

ಕಥೆಯಮಧ್ಯಭಾಗ ಯಾಂತ್ರಿಕವಾಗಿ ಪೇಲವವಾಗಿದೆ. ಸೋಮ ಶಾಲೆಯಿಂದ ಹೊರಬರುವಾಗ ಜಟಕಾಬಂಡಿಯಲ್ಲಿ ಧ್ವನಿವರ್ಧಕ ಕಟ್ಟಿಕೊಂಟು ಕಾಣೆಯಾದವರ ಬಗೆಗೆ ಮಾಹಿತಿ ನೀಡುತ್ತಿರುವುದು ಅದು ಕುಣಿಗಲ್‌ನ ಜವುಳಿ ಅಂಗಡಿ ಮಾಲೀಕರಾದ ಚಂದ್ರಪ್ಪನವರ ಮಗಳು ಗೀತ ಎಂಬ ಬಾಲಕಿ ಕಾಣೆಯಾಗಿದಾಳೆ. ಹುಡುಕಿಕೊಟ್ಟವರಿಗೆ ಸೂಕ್ತಬಹುಮಾನ ಎಂಬ ಪ್ರಕಟಣೆ. ಹುಡುಗಿಯ ಹೆಸರು ಸೀತ ಹಾಗು ಹಾಕೆಯ ಉಡುಗೆ–ತೊಡುಗೆ ಚಹರೆಗಳನ್ನು ಮೈಕ್ ಮೂಲಕ ಸಾರುತ್ತಿದ್ದಾರೆ. ಸೋಮು ಆಕೆಯನ್ನು ಗುರುತಿಸುವನು, ಆಕೆಯ ಪುಟ್ಟ ನೆಕ್ಲೆಸ್ ಮೇಲೆ ಆಸೆಯ ಕಣ್ಣರಳಿಸುವನು. ತಕ್ಷಣ ಮುಗ್ದ ಸೀತಾ ಇದು ನಿನಗೆ ಬೇಕಾ ಎಂದಾಗ ತಂಗಿ ಗೀತಾ ನೆನಪಿಗೆ ಬಂದು ಗಳಗಳನೆ ಅಳುವನು. ಪುಟ್ಟ ಮಗುವನ್ನು ತಂದು ಅವರ ತಂದೆಗೆ ಒಪ್ಪಿಸಿದನುಅವರು ಕೊಡಲು ಬಂದ ನೂರು ರೂವನ್ನು ಬೇಡವೆಂದ ಈತನಿಗೆ ಮನೆಗೆ ಬಂದಾಗ ಮನೆಯ ದರಿದ್ರ ನೋಡಿ ಅವರು ಕೊಡಲು ಬಂದ ಹಣವೂ ನೆನಪಿಗೆ ಬಂದಿತು.

ಬಡತನವಿದ್ದರೂ ಸ್ವಾಭಿಮಾನದೊಂದಿಗೆ ರಾಜಿಗೊಳ್ಳದ ಸೋಮುವಿನ ಪಾತ್ರ ಓದುಗರ ನೆನಪಿನಲ್ಲಿ ಶಾಶ್ವತವಾಗಿ ನಿಲ್ಲುತ್ತದೆ. ಆತನ ಮಾನಸಿಕ ಸಂಘರ್ಷ ಅಂತಿಮವಾಗಿ ನೈತಿಕತೆಯನ್ನು ಉದ್ದೀಪಿಸಿ ಆದರ್ಶವಾದಿಯಾಗಿಯೇ ನಿಲ್ಲುತ್ತಾನೆ.

ಈ ಸಾಲಿಗೆ ಸೇರುವ ಮತ್ತೊಂದು ಕಥೆ 'ಇದೇ ಮಹಾಸುದಿನ' ವ್ಯಕ್ತಿ ನೈತಿಕ ಮೌಲ್ಯಗಳನ್ನು ಗಾಳಿಗೆ ತೂರುವುದರಿಂದ, ಅನೈತಿಕತೆಗೆ ದಾಸನಾಗುವದರಿಂದ ಅತ ವಾಸ್ತವ ಗೆಲುವನ್ನು ಪಡೆದರೂ ಮತ್ತೊಂದು

ಮಾರ್ಗದಿಂದ ಅನ್ಯಾಯವನ್ನೇ ಆತ ಬಾಚಿಕೊಳಬೇಕಾಗುತ್ತದೆ. ಗ್ರಾಮೀಣ ಪ್ರದೇಶದ ಗಾದೆ 'ಗಂಡಿಗೆ ಚಟವಿರಬಾರದು ಹೆಣ್ಣಿಗೆ ಹಟವಿರಬಾರದು' ಎಂಬುದು ಈ ಕಥೆಗೆ ಹೊಂದುವಂತಿದೆ. ಕಿಟ್ಟಪ್ಪ ಜೂಜು ಆಡಲು ಹೋಗಿ. ಅನೈತಿಕ ಚಟುವಟಿಕೆಗೆ ತೊಡಗಿ, ಹಣವನ್ನ ಗದ್ದರೂ ಅಂತಿಮವಾಗಿ ಆತನ ಹಣವನ್ನು ಕದ್ದು ಬಿಡುವರು. ಇದು ದ್ಯೂತದ ಫಲ. ಜೂಜು, ಮಧ್ಯವ್ಯಸನಗಳಿಂದ ಬದುಕು ಬರಡಾಗುತ್ತದೆ ಎಂದು ಸಾರುವ ಪುಟ್ಟ ಕಥೆ.

ನೈತಿಕತೆಯ ಪರವಾಗಿರುವ ಲೇಖಕ ಕೆಂಪೇಗೌಡರು ತಮ್ಮ ಕಥೆಗಳ ಮೂಲಕ ನೈತಿಕ ಸಿಟ್ಟನ್ನೇ ಹೊರಹಾಕುತ್ತಾರೆ. ಎಲ್ಲಿ ನಿಜವಾಗಿಯೂ ಘನೀಕರಿಸಬೇಕಾದ ಸಾಮಾಜಿಕ ನೈತಿಕ ಮೌಲ್ಯಗಳು ಹಾಳಾಗುತ್ತದೆಯೋ ಅಲ್ಲಿ ಇವರ ಪ್ರಜ್ಞೆ ಜಾಗೃತವಾಗುತ್ತದೆ. ಅಂತಹ ಸಂದರ್ಭವನ್ನ ನೆನಪಿಗೆ ತರುತ್ತದೆ ಶಿವಳ್ಳಿ ಕೆಂಪೇಗೌಡರ 'ಆಳು' ಎಂಬ ಕಥೆ. ರಂಗಪ್ಪ ನಗರದಲ್ಲಿ ಓದುತ್ತಿದ್ದ ತನ್ನ ಮಗನನ್ನ ನೋಡಿ, ಹಣ ಕೊಟ್ಟು, ತಿಂಡಿ ತಿನಿಸು ಕೊಟ್ಟು ಬರಲು ಹೋಗಿರುತ್ತಾನೆ. ಮಗನ ಕೊಠಡಿಗೆ ಹೋದಾಗ ಅಲ್ಲಿ ಸಿಗರೇಟು ವಾಸನೆ. ತಾನು ತಂದಿದ್ದ ಪದಾರ್ಥಗಳನ್ನ ಅಲ್ಲಿಟ್ಟು ಕೆಳಗೆ ಕೂತ. ತನ್ನ ತಂದೆಯನ್ನ ಇತರ ತನ್ನ ಸ್ನೇಹಿತರಿಗೆ ಇವನು ನಮ್ಮ 'ಫೀವನ್' ಎಂದನು. ಶಂಕರನ ಕೊಠಡಿ ತುಂಬ ಅರೆನಗ್ನ ಚಿತ್ರಗಳು. ಮನೆಗೆ ಬಂದ ರಂಗಪ್ಪ ಸಂತೋಷದಿಂದ 'ಫ್ಯೂನ್' ಎಂದು ತನ್ನ ಮಗ ಬಣ್ಣಿಸಿದುದನ್ನು ಪ್ರಸ್ತಾಪಿಸಿದಾಗ ಮನೆಯಲ್ಲಿನ ಮೊಮ್ಮಗ ಹಾಗೆಂದರೆ 'ಆಳು' ಎಂದನು. ನಂತರ ರಂಗಪ್ಪನ ಮಾನಸಿಕ ವೇದನೆ ಹೇಳ ತೀರದು. ಪರಿಪರಿಯಾಗಿ ಪರಿತಪಿಸುವನು. ತನ್ನ ಮನೆಯ ನಾಯಿಗಿರುವ ನಿಯತ್ತು ಆತನಿಗಿಲ್ಲವಾಯಿತೆಂದು ಅಪಾರವಾಗಿ ದುಃಖಿಸಿದನು. ಇಲ್ಲಿ ಕಲಿತು ನೈತಿಕ, ಆದರ್ಶ ಮೌಲ್ಯಗಳಿಸಬೇಕಾದವರು. ದುಶ್ಚಟಗಳಿಗೆ ಬಲಿಯಾಗುವುದು, ಕೊಳಕಾದ ಬಟ್ಟೆ ಧರಿಸಿದ್ದ ಕಾರಣಕ್ಕೆ ಹೆತ್ತವರನ್ನೇ ಮನೆಯ ಆಳೆಂದು ಕರೆಯುವ ಕೃತಘ್ನರನ್ನ ಈ ಕತೆಯಮೂಲಕ ಅನಾವರಣಗೊಳಿಸಿದ್ದಾರೆ.

ರಂಗನ ಸ್ವಾತ್ವಿಕತೆಯನ್ನು ಚಿತ್ತರಿಸುವ ಕಥೆ 'ಮಳೆಸುರಿಯಿತು ಇರುಳೆಲ್ಲ' ಸವಡೆ ದ್ಯಾವ ಒಂದು ಹೆಣ್ಣಿನ ಜೊತೆ ದೇಹ ಸುಖವನ್ನ ಉಂಡು ಅವಳಿಗೆ ಕೊಡಲು ಹಣ ಇಲ್ಲದಾಗ ಅಂಗಡಿಯನ್ನು ಬಡಿದು ಒಳಗೆ ಮಲಗಿದ್ದ ರಂಗನನ್ನು ಎಚ್ಚಿಸುವನು. ಹಣಕೊಡಲು ನಿರಾಕರಿಸಿದ ರಂಗ ಮತ್ತೆ ಆಲೋಚಿಸಿ ಆತನಿಂದಾಗುವ ಸಹಾಯವನ್ನು ನೆನೆದು ಕೊಡುವನು. ಆ ಹೆಣ್ಣು ಅಲ್ಲೇ ಹೊರಗೆ ಮರದ ಅಡಿಯಲ್ಲಿ ರಾತ್ರಿ ಕಳೆಯಬೇಕಾಗುತ್ತದೆ. ಇಡೀ ರಾತ್ರಿ ಮಳೆ. ಸವಡೆ ದ್ಯಾವನನ್ನು ಈಕೆ ಮೊದಲೇ ಕೇಳಿಕೊಂಡಿದ್ದು ಆ ಪೆಟ್ಟಿಯಲ್ಲಿ ಮಲಗಿ ಬೆಳಿಗ್ಗೆ ಎದ್ದು ಹೋಗುತ್ತೇನೆಂದು. ಆದರೆ ಸವಡೆ ಆ ಹುಡುಗ ರಂಗ ತುಂಬಾ ಒಳ್ಳೆಯವ ಅದಕ್ಕೆ ಒಪ್ಪಲಾರ ಎಂದನು. ರಾತ್ರಿ ಗುಡುಗು–ಸಿಡಿಲು ಮಳೆ ತತ್ತರಿಸುತ್ತಿದ್ದಾಳೆ ದೇವಿ. ಬಾಗಿಲು ಬಡಿದು ನಿಮ್ಮ ದಮ್ಮಯ್ಯ ಬಾಗಿಲು ತೆಗೀರಿ ಎಂದಳು. ಈತನ ಮನಸ್ಸಿನಲ್ಲಿ ಆಕೆಯ ಬಗೆಗೆ ತಾತ್ಸಾರ. ಅಸಹ್ಯದವಳೆಂದು. ಬಾಗಿಲು ತೆಗೆಯಲೋ ಬೇಡವೋ ಎಂಬ ಆತನ ಮಾನಸಿಕ ಸಂಘರ್ಷ ಒಂದು ಹಂತಕ್ಕೆ ರಾಜಿಯಾಗುತ್ತದೆ. ಬಾಗಿಲು ತೆರೆಯಲು ಅನುವಾಗುವನು.

ಅನ್ಯೆತಿಕ ಮಾರ್ಗದವಳಾದರೂ ಹೆಣ್ಣೆಂಬ ಕನಿಕರ. ತಾನು ಪ್ರಮಾಣಿಕ, ನೈತಿಕವಾಗಿದ್ದರೆ ಯಾರು ಏನೆಂದರೇನು ಎಂಬ ಸಮತೋಲಿತ ಮನಸ್ಸಿನವರು ರಂಗ. ರಂಗನ ಮಾನಸಿಕ ಘರ್ಷಣೆ ಇಡೀ ಪುಟ್ಟ ಕಥೆಯಲ್ಲಿ ಬಲೆಯಂತೆ ಹರಡಿಕೊಂಡಿದೆ. ನೈತಿಕ ಸಿಟ್ಟು ಆತನ ನೈತಿಕ ಪ್ರಜ್ಞೆ ಎರಡೂ ಇಮ್ಮಿಳಿತವಾಗಿವೆ.

'ಸ್ಥಿರ' ಅತ್ಯಂತ ಚಿಕ್ಕಕಥೆ. ಒಂದು ಪುಟ ಅದರ ಗಾತ್ರ. ಓದಿ ವಿದ್ಯೆಗಳಿಸಿದ ತರುಣನ ಕಥೆ. ಉದ್ಯೋಗವಿಲ್ಲ. ಅಲೆದಲೆದು ಸಾಕಾಗಿ ಹೋದನು. ಶಾನಕರನ್ನು ಕೇಳಿದನು ಅವರು "ಅಲ್ಲೀ ಈಗ ಡಿಗ್ರಿ ತೆಗೆದು ಕೊಂಡಿರೋರು ಗಲ್ಲಿ ಗಲ್ಲೀಲು ಬಿದ್ದಿದ್ದಾರೆ. ಓದಿದೋರಿಗೆಲ್ಲ ಕೆಲಸ ಬೇಕೊಂದ್ರೆ ಸರ್ಕಾರ ಎಲ್ಲಿಂದ ತಂದ್ಕೊಡೋಕೆ ಸಾಧ್ಯ? ಓದಿದಾಕ್ಷಣ ಆಫೀಸರುಗಳೇ ಆಗ್ಬೇಕಂತ ಯಾರಾರಾ ಹೇಳಿದ್ದಾರಾ? ಕಲ್ಲು ಹೊಡಿಬೇಕು, ಮಣ್ಣು ಸುರಿಬೇಕು". ಎಂದು ಬಿಟ್ಟು ಉಪದೇಶಿಸಿದರು. ಇದರಿಂದ ಉದ್ದೀಪಿತನಾಗಿ ಕಲ್ಲು ಹೊಡೆಯಲು ಸೇರಿಕೊಂಡನು. ಬಿಡುವಿನ ವೇಳೆಯಲ್ಲಿ ಬೀದಿ ಬೀದಿ ಅಲೆದು ಬಿದ್ದಿರುವ ಸಗಣಿಯನ್ನು ಸಂಗ್ರಹಿಸುವನು. ಯಾರ್‍ಯಾರೋ ಹಿಂದಿನಿಂದ ಹಂಗಿಸಿದಾಗ ವಿಚಲಿತನಾಗದೇ "ನಮ್ಮ ಕೈತೇದು ನಮ್ಮ ಬಾಯಿಗೆ ಬಿಡಬೇಕು" ಎನ್ನುವನು.

ಕೆಂಪೇಗೌಡರ ಇಪ್ಪತ್ತೆರಡು ಚಿಟ್ಟು ಕಥೆಗಳಲ್ಲಿ ಇದು ಅತ್ಯಂತ ಕಿರಿದಾದ ಕಥೆ. ಇಡೀ ಸಮಾಜಕ್ಕೆ ಮಾರ್ಮಿಕ ಅಘಾತವನ್ನು ಡಿಗ್ರಿ ಪಡೆದ ಹುಡುಗನ ಪಾತ್ರದ ಮೂಲಕ ಉಂಟುಮಾಡಿದೆ. "ಏನಾನುಂ ಮಾಡು ಕೈಗೆ ದೊರೆತುಜ್ಜುಗವ" ಎಂಬ ಡಿ.ವಿ.ಜಿಯವರ ಮಂಕುತಿಮ್ಮನ ಕಗ್ಗದ ಮಾತನ್ನು ಕಾರ್ಯಗತಗೊಳಿಸಿದಂತಾಗಿದೆ.

ಆಧುನಿಕ ಮನುಷ್ಯ ದುಶ್ಚಟಗಳ ದಾಸ. ಕುಡಿತ, ಜೂಜು, ಧೂಮಪಾನವೇ ಮೊದಲಾದವು ಆತನನ್ನು ನಾಶಪಡಿಸುತ್ತಿದೆ. ಇದು ಸ್ವಾಸ್ಥ್ಯ ಸಮಾಜಕ್ಕಂಟಿದ ಮಾರಕ ರೋಗ. ವ್ಯಸನಗಳ ದಾಸನಾದವನು ಮನೆಗೆ ಮಾರಿ, ಊರಿಗೂ ಭಾರ, ಹೆಂಡತಿ ಮಕ್ಕಳಿಗೂ ರಕ್ಕಸನಂತೆ. ಇನ್ನು ಸ್ವಂತಃ ತನ್ನ ಬಾಳು ಗಾಳಿಗೊಡ್ಡಿದ ದೀಪದಂತೆ. ಆದ್ದರಿಂದ ನೈತಿಕ ಜಾಗೃತಿ ಎಂದಿಗಿಂತಲೂ ಇಂದು ಅತ್ಯಗತ್ಯವಾಗಿದೆ. ಶಿವಳ್ಳಿ ಕೆಂಪೇಗೌಡರು 'ತಮಸೋ ಮಾ ಜೋತಿರ್ಗಮಯ' ಎಂಬ ಕಥೆಯಲ್ಲಿ ದ್ಯೂತದ ಚಟಕ್ಕೆ ಒಳಗಾದ ವ್ಯಕ್ತಿಯ ನೈತಿಕ ಸಂಘರ್ಷವನ್ನ ಸೊಗಸಾಗಿ ಚಿತ್ರಿಸಿದ್ದಾರೆ.

ಆತನಿಗೆ ಊರಿನಲ್ಲಿ ಒಳ್ಳೆಯ ಹೆಸರಿಲ್ಲ. ರೇಸ್ ಆಡುವ ಚಟ. ಸಾಲಗಾರ ಮತ್ತೊಮ್ಮೆ ಲೇವಾದೇವಿಗಾರನಿಂದ ಬಡ್ಡಿಗೆ ಸಾಲ ಪಡೆದು ರೇಸ್ ಆಡಲು ಮೈಸೂರಿಗೆ ಹೊರಡುತ್ತಾನೆ. ಆದರೆ ರೈಲು ಹತ್ತಿದ ಆತನ ಮನಸ್ಸಿನಲ್ಲಿ ನೈತಿಕ ಮತ್ತು ಅನ್ಯೆತಿಕತೆ, ವಾಸ್ತವ ಭ್ರಮೆಗಳ ಸಂಘರ್ಷ ಏರ್ಪಡುತ್ತದೆ. ಈ ಸಂಘರ್ಷವು ಹಂತಹಂತವಾಗಿ ಸಾತ್ವಿಕತೆಯತ್ತ ವಾಲುತ್ತದೆ. ಬಡ್ಡಿಗೆ ತಂದ ಹಣದಿಂದ ಜೂಜು ಎಷ್ಟು ಕಟ್ಟುವುದು, ಯಾವ ಕುದುರೆಗೆ ಕಟ್ಟುವುದು, ಒಮ್ಮೆಯೇ ಎಲ್ಲ ಹಣ ಕಟ್ಟಲೇ, ಸ್ವಲ್ಪ ಸ್ವಲ್ಪ ಕಟ್ಟಲೇ ಈ ಎಲ್ಲಾ ಸಂಘರ್ಷಗಳ ಅಂತಿಮ ರೂಪ ಆತ ಜೂಜಾಡದೆ ವಾಪಸ್ ಬರುವನು. ಬಂದು ಲೇವಾದೇವಿಗಾರನಿಗೆ ವಾಪಸ್ ಕೊಡುವನು. ಇಂದು ಆತನ ಬದುಕಿನಲ್ಲಿ ಬೆಳಕು ಹರಿಯುತ್ತದೆ.

ಇದೊಂದು ಅತ್ಯುತ್ತಮ ಕಥೆ. ಪ್ರತಿ ಹಂತದಲ್ಲೂ ವ್ಯಸನಿಯೊಬ್ಬನ ಗೆಲುವಿನ ಹಗಲುಗನಸು ಇಮ್ಮಡಿಸುವುದು, ತತ್‌ಕ್ಷಣ ಗಾಳಿಗೋಪುರವೆಂದು ವಾಸ್ತವಕ್ಕೆ ಬರುವುದು. ಇಂತಹ

ಡೋಲಾಯಮಾನದಿಂದ ಸ್ಪಷ್ಟನಿರ್ಧಾರಕ್ಕೆ ಬಂದು ಬದುಕನ್ನು ಹಸನಾಗಿಸಿಕೊಳ್ಳುವ ಅತ್ಯುತ್ತಮ ನೀತಿ ಬೋಧೆಯ ನೈತಿಕ ಕಥೆಯಾಗಿದೆ.

'ಎಳನೀರು' ಸುಮಿತ್ರಾಳ ಕುಟುಂಬದ ಕಥೆ. ಗಂಡ ಚೆಟ್ಟಿ. ಈತ ದುಶ್ಚಟಕ್ಕೆ ಬಲಿಯಾಗಿ ಮನೆಯ ಮಕ್ಕಳ ಒಡವೆಯನ್ನು ಕದ್ದು ಮಾರುವನು. ಹೆಂಡತಿಗೆ ಕಾಣದಂತೆ ತೆಂಗಿನ ತೋಟದ ಎಳನೀರನ್ನು ಮಾರುವ ಪ್ರಯತ್ನ ಮಾಡುವನು ಆಗ ಸುಮಿತ್ರಾ ಬಂದು ಜಗಳ ಮಾಡಿದಾಗ ಚೆಟ್ಟನ ಚಿಕ್ಕಪ್ಪ ದೊಡ್ಡೇಗೌಡನು ಬಂದು ಪರಿಸ್ಥಿತಿಯನ್ನು ನಿಭಾಯಿಸುವನು. ಅಂತಿಮವಾಗಿ ಚೆಟ್ಟನ ಮನ ಪರಿವರ್ತನೆಯಾಗಿ ವ್ಯಸನಗಳಿಗೆ ವಿದಾಯ ಹೇಳುವನು.

ಇದೊಂದು ಕೌಟುಂಬಿಕ ಕಥೆ. ಆದರೆ ಮುಕ್ತವಾದ ಸ್ತ್ರೀಸಂವೇದನೆ ಕಥೆ. ಹೆಣ್ಣು 'ಒಲಿದರೆ ನಾರಿ ಮುನಿದರೆ ಮಾರಿ'ಯಂತೆಯೇ ಇರಬೇಕು ಎನ್ನುತ್ತದೆ ಈ ಕಥೆಯ ಫಲಿತಾಂಶ. ಲಜ್ಜೆಗೆಟ್ಟ ಗಂಡನನ್ನು ಕಟ್ಟಿಕೊಂಡು ಎರಡು ಮಕ್ಕಳನ್ನು ಸಾಕುತ್ತಾಳೆ. ಈ ನಡುವೆಯೂ ಆತ ಕೊಡುವ ಕೋಟಲೆಗಳಿಗೆ ಲೆಕ್ಕವಿಲ್ಲದಾಗಿತ್ತು. ಆದರೆ ಕುಟುಂಬ ನಿರ್ವಹಣೆಗೆ ದಾರಿಯಾಗಿದ್ದ ಎಳನೀರನ್ನು ಮಾರ ಹೊರಟ ಗಂಡನಿಗೆ ಮಾರಿಯಾಗಿ ಆತನ ಪರಿವರ್ತನೆಗೆ ಕಾರಣಳಾದಳು. ಈಕೆ ಸಿಡಿದು ಏಳದಿದ್ದರೆ ಬಹುಶಃ ಚೆಟ್ಟಣ್ಣ ವ್ಯಸನಕ್ಕೆ ದಾಸನಾಗಿ ತನ್ನ ಕುಟುಂಬದ ಅವನತಿಗೆ ಅವನೇ ಕಾರಣನಾಗುತ್ತಿದ್ದನು. ಇವರೊಂದಿಗೆ ಯಾರೂ ಜನ್ಮತಃ ಕೆಟ್ಟವರಲ್ಲ. ಒಳ್ಳೆಯವನಾಗಲು ಆತ ಮಾಡುವ ಪ್ರಯತ್ನಕ್ಕೆ ಆತನ ಚಟ ಅಡ್ಡಿತರುತ್ತದೆ. ಆದರೆ ದೃಢಸಂಕಲ್ಪದೊಂದಿಗೆ ನಿರ್ಧಾರ ಕೈಗೊಂಡರೆ ಬಾಳು ಹಸನಾಗುತ್ತದೆ ಎಂಬುದನ್ನು 'ಎಳನೀರು' ಸಾರುತ್ತದೆ. ಸುಮಿತ್ರಳ ಬಾಳಿನ ಕಣ್ಣೀರಿನ ಕಥೆ ಎಳನೀರು. ಕಥೆಯು ಸುಖಾಂತವನ್ನ ಪಡೆಯುವುದರೊಂದಿಗೆ ಆಕೆಯ ಬಾಳು ಪನ್ನೀರಿನಂತಾಯಿತು. ಸಾಮಾನ್ಯ ಕಥಾವಸ್ತುವಿನೊಂದಿಗೆ ನೆಯ್ದಿರುವ ಸಣ್ಣಕಥೆಯಾಗಿದೆ. ಸ್ತ್ರೀಪಾತ್ರದ ಸಂಭಾಷಣೆ ಮನೋಜ್ಞವಾಗಿ ಮೂಡಿಬಂದಿದ್ದು, ಈ ಕಥೆಯ ಮೆರುಗಿಗೆ ಕಾರಣವಾಗಿದೆ.

೪.೫ ಕೆಂಪೇಗೌಡರ ಕಥೆಗಳಲ್ಲಿ ದಲಿತ ಸಂವೇದನೆ

“ದಲಿತ ಸಾಹಿತ್ಯವನ್ನು ಬರೆಯಲು ದಲಿತರೇ ಆಗಬೇಕೆಂದಿಲ್ಲ. ಅವರ ನಾಡಿ ಮಿಡಿತ. ಒಡನಾಟದಿಂದ ಅನುಭವ ತಿಳಿದಿರುವವರು ಯಾರೇ ಬರೆಯಬಹುದು. ಇದಕ್ಕೆ ಶಿವಳ್ಳಿ ಕೆಂಪೇಗೌಡರ 'ಚಮ್ಮಾವುಗೆ' ಉತ್ತಮ ನಿಸರ್ಶನ”[1] ಎಂಬ ಬೆಸಗರಹಳ್ಳಿ ರಾಮಣ್ಣನವರ ಮಾತುಗಳು ಬಹಳ ಅರ್ಥಗರ್ಭಿತವಾಗಿವೆ. ಶತಶತಮಾನಗಳಿಂದ ಸಾಮಾಜಿಕ ಆರ್ಥಿಕ ಶೋಷಣೆಗೆ ಒಳಗಾದ ದಲಿತ ಸಮುದಾಯ ಇಂದಿಗೂ ಶೋಷಿತವಾಗಿಯೇ ಮುಂದುವರೆದಿದೆ. ಈ ಸಮುದಾಯವನ್ನ ಮನುಷ್ಯರಂತೆಯೇ ಕಾಣದ ಮೇಲ್ವರ್ಗಗಳ ನಿಲುವು ಅಮಾನವೀಯವಾದುದು. ಇಂದೊಂದು ಸಾಮಾಜಿಕ ಪಿಡುಗಾಗಿದೆ. ಇದನ್ನು ಹಳ್ಳಿಗಳಲ್ಲಿ ನೇರವಾಗಿ ಕಂಡ ಲೇಖಕ ಕೆಂಪೇಗೌಡರು ತಮ್ಮ ಸಣ್ಣಕಥೆಗಳಲ್ಲಿ ಸೆರೆಹಿಡಿದಿದ್ದಾರೆ.

ನಗರದಂತೆ ಕುಟಿಲತೆ, ಕುಯುಕ್ತಿ, ಮೋಸ, ಅಮಾನವೀಯತೆಗಳು ಗ್ರಾಮೀಣ ಪ್ರದೇಶದಲ್ಲಿ ಕಡಿಮೆ ಇದ್ದರೂ ಜಾತಿ ಭ್ರಮೆಯಿಂದ ಹೊರಬರಲಾಗಿಲ್ಲ. ತಮ್ಮ ನಡುವೆಯೇ ಇರುವ ಪ್ರಾಣಿ, ಪಕ್ಷಿಗಳಿಗೆ ಕೊಡುವ ಗೌರವ, ಸಲುಗೆಯನ್ನ ಒಬ್ಬ ಮನುಷ್ಯನಿಗೆ ಕೊಡುವುದಿಲ್ಲ. ದಲಿತನದೆಂಬ ಕಾರಣಕ್ಕೆ ಆತ ಸಾಕಿ ಸಲುಹಿತ

ಪ್ರಾಣಿಗಳಿಗೂ ಭೇದಭಾವ ತೋರುವರು. ಅಂತಹ ಸಂದರ್ಭವನ್ನು ಕೆಂಪೇಗೌಡರು ತಮ್ಮ "ತ್ರಿಸ್ತ್ರ" ಕಥೆಯಲ್ಲಿ ಬೆಳಕಿಗೆ ತಂದಿದ್ದಾರೆ. ಅಂದು ಸಂಕ್ರಾಂತಿ ಹಬ್ಬ, ಊರಿನಲ್ಲೆಲ್ಲ ಸಡಗರ ಸಂಭ್ರಮ. ಸಂಜೆ ಊರಿನ ಮಾಳವೊಂದರಲ್ಲಿ ಕಿಚ್ಚಾಯಿಸುವುದು ಒಂದು ಸಂಪ್ರದಾಯ. ಆದರೆ ಇಲ್ಲಿ ಸವರ್ಣೀಯರ ಪಶುಗಳನ್ನು ಕಿಚ್ಚಾಯಿಸಿ ನಂತರ ಮತ್ತೆ ಬೆಂಕಿ ಹಾಕಿ ದಲಿತರು ತಮ್ಮ , ದನ, ಎಮ್ಮೆಗಳನ್ನ ಕಿಚ್ಚಾಯಿಸುವರು. ಈ ತಾರತಮ್ಯವನ್ನು ಕೆಂಪೇಗೌಡರು ಹೀಗೆ ಹೇಳುತ್ತಾರೆ. "ಊರ ದನಗಳೆಲ್ಲ ಒಂದಾಗಿ ಮೆರವಣಿಗೆಯಲ್ಲಿ ಬಂದು ಕಿಚ್ಚುಹಾಯ್ದು ಹಬ್ಬದ ಸಂಭ್ರಮ ಆಚರಿಸಲು ದನಗಳ ಅಡ್ಡಿಯೇನೋ ಇದ್ದಂತೆ ಕಾಣುವುದಿಲ್ಲ. ಆದರೆ ಜನಗಳು!?"[7] ಎಂದು ಆತಂಕಪಡುತ್ತಾರೆ. ಈ ಕಥೆಯಲ್ಲಿನ ಮಾರ್ಮಿಕತೆ ಏನೆಂದರೆ ಮಾನವನಿಗೆ ಹೋಲಿಸಿದರೆ ಪ್ರಾಣಿಗಳು ಅತೀ ಕನಿಷ್ಟ ಜೀವಿಗಳು. ಆದರೆ ಅವುಗಳಿಗಿರುವ ಸಾಮರಸ್ಯ ಮನವನಿಗಿಲ್ಲ. ಈತನದು ಬರೀ ಬೇಧ ಮತ್ತು ತಾರತಮ್ಯ ಅದೂ ತನ್ನಂತೆ ಇರುವ ಮಾನವನಲ್ಲಿ.

ದಲಿತ ಮಕ್ಕಳ ನಾಡಿ ಮಿಡಿತವನ್ನು ಅತ್ಯುತ್ತಮವಾಗಿ ಗ್ರಹಿಸಿರುವ ಕಥೆ "ನಾವು ಬತ್ತೀವಿ ನಿಲ್ಸಯ್ಯೋ" ವಾಚಕರಿಂದ ಅತ್ಯುತ್ತಮಪ್ರತಿಕ್ರಿಯೆಗೆ ಒಳಗಾಗಿರುವ ಕಥೆ. ಈ ಕಥೆಯನ್ನು ಕುರಿತು ಪ್ರೊ.ಸಿ.ಪಿ.ನಾಗರಾಜ ರವರು "ಶ್ರೀ ಶಿವಳ್ಳಿ ಕೆಂಪೇಗೌಡರ 'ನಾವು ಬತ್ತೀವಿ ನಿಲ್ಸಯ್ಯೋ' ಎಂಬ ಹೆಸರಿನ ಕಥೆಯನ್ನು ಓದಿ ಒಂದೆರಡು ದಿನಗಳ ಕಾಲ ನಾನು ತೀವ್ರವಾದ ತಲ್ಲಣಕ್ಕೆ ಒಳಗಾಗಿದ್ದೆನು. ಆಕಾಶದಲ್ಲಿ ಹಾರಿಹೋಗುತ್ತಿರುವ ವಿಮಾನವನ್ನ ಅಚ್ಚರಿ ತುಂಬಿದ ಕಣ್ಣುಗಳಿಂದ ನೋಡುತ್ತಾ, ಅದರಲ್ಲಿ ಕುಳಿತು ತಾವು ಪಯಾಣಿಸಬೇಕೆಂಬ ಆಸೆಯಿಂದ ಆ ವಿಮಾನವನ್ನ ನಿಲ್ಲಿಸುವಂತೆ ಕೈ ಬೀಸಿ ದೊಡ್ಡ ಧ್ವನಿಯಿಂದ ಕೂಗುತ್ತಿರುವ ದಲಿತ ಮಕ್ಕಳ ಚಿತ್ರಣ ನನ್ನ ಕಣ್ಮನಗಳಲ್ಲಿ ತುಂಬಿಕೊಂಡು, ನಾನಾ ಬಗೆಯ ಗ್ರಹಿಕೆಗಳನ್ನ ಇಂದಿಗೂ ನನ್ನಲ್ಲಿ ಮೂಡಿಸುತ್ತಿವೆ. ಅನ್ನ ಬಟ್ಟೆ ವಸತಿಗಳಿಂದ ವಂಚಿತರಾಗಿ ಮಣ್ಣಿನ ಧೂಳಿನಲ್ಲಿ ಒಂದಾಗಿ ಬಾಳುತ್ತಿರುವ ದಲಿತ ಮಕ್ಕಳು, ವಿಜ್ಞಾನ, ನಾಗರೀಕತೆ ಮತ್ತು ಶ್ರೀಮಂತಿಕೆಯ ಪ್ರತಿರೂಪವಾದ ವಿಮಾನವನ್ನು ನಿಲ್ಲಿಸುವಂತೆ ಕೂಗುತ್ತಿರುವ ಆ ಒಕ್ಕೊರಲ ಧ್ವನಿ, ನಮ್ಮ ಕಣ್ಣ ಮುಂದಿನ ಸಮಜದಲ್ಲಿ ಸಾಮಾಜಿಕವಾಗಿ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ನೆಲಕಚ್ಚಿರುವ ಶ್ರಮಜೀವಿಗಳೆಲ್ಲರ ಧ್ವನಿಯಾಗಬಹುದು"[8] ಎಂದಿದ್ದಾರೆ

ಊರಿಗೆ ಶ್ರೀಮಂತರಾದ ರಂಗೇಗೌಡನ ಮಗಳ ಮದುವೆಯಲ್ಲಿ ದಲಿತ ಕುಟುಂಬದ ಹುಡುಗಿ ಮಾದೇವಿಯು ಊಟಕ್ಕಾಗಿ ಸಹಪಂಕ್ತಿಗೆ ನುಗ್ಗಿ, ಅಲ್ಲಿಂದ ನಿಂದಿಸಿಕೊಂಡು ಅವಮಾನಿತಳಾಗಿ ದುಃಖಿಸಿಕೊಂಡು ಬಂದ ಕಥೆ. ದಲಿತ ಸಿದ್ದಿಯ ಮಗಳು ಮಾದೇವಿ. ಅನ್ನದ ಆಹಾಕಾರ. ಉಡಲು ಬಟ್ಟೆಯಿಲ್ಲದ ಸ್ಥಿತಿ, ಸವರ್ಣಿಯರ ಮನೆಯೊಳಗೆ ಊಟಕ್ಕೆ ಕೂರಲು ಹೋಗಿ, ಅಲ್ಲಿಂದ ತಲ್ಲಿಸಿಕೊಂಡು, ರಕ್ತಸಿಕ್ತಳಾಗಿ ಮನೆ ಸೇರುವಳು. ಈ ನಡುವೆ ಮಾದೇವಿಯನ್ನ ಕಂಡು ದಲಿತಕೇರಿಯ ಸೋಬಾನೆ ಹಾಡಲು ಬಂದಿದ್ದ ಹೆಂಗಸರುವಿ "ಅರೀದ್ಮಗ ಕಂಡಿದ್ದದ ನಾನಿಂತ ಜಾತಿ ವಳೀಕೆ ಹೊಗ್ಬಾರದು ಅಂತ. ಹಿಂಗೆ ಮೊಕ ಮುಸ್ಡಿ ಕೆಚ್ಚೋಗುವಂಗೆ ತಳ್ಳವ್ನಲ್ಲ ಅವನ ಕೈಗೆ ಕನ್ನಾಗರ ಕಡಿಯ. ಅವನ ಕಣ್ಗೊಂಬೆ ನೆಟ್ಟಾಗ"[9] ಎಂದೆಲ್ಲಾ ಶಪಿಸುವರು, ತಮಗಾದ ಶತಶತಮಾನಗಳ ನೋವನ್ನು ಬೈಗುಳಗಳ ಮೂಲಕ ಪ್ರತಿಭಟಿಸುವರು.

ಹಸಿದುಕೊಂಡೇ ಮನೆಗೆ ಬಂದ ಮಾದೇವಿ ಆಕಾಶದ ವಿಮಾನವನ್ನು ನೋಡಿ ಗುಡಿಸಲಿನಿಂದ ಹೊರಗೆ ಬಂದು 'ನಾವು ಬತ್ತೀವಿ ನಿಲ್ಸಯ್ಯೋ' ಎನ್ನುವಳು. ಈ ನಡುವೆ ಲೇಖಕರು ಸಿದ್ದನ ಬದುಕಿನ

ಕಿತ್ತುತಿನ್ನುವ ಬಡತನವನ್ನು ಸರಿಯಾಗಿ ಹಿಡಿದಿಟ್ಟಿದ್ದಾರೆ. ಇದೊಂದು ಉತ್ತಮ ದಲಿತ ಕಥೆ. ಕೆಂಪೇಗೌಡರ ಕಥಾಸಂಕಲನಗಳಲ್ಲಿನ ದಲಿತ ಕಥಾವಸ್ತುವನ್ನು ಒಳಗೊಂಡ ಕಥೆಗಳಲ್ಲಿ "ಚಮ್ಮಾವುಗೆ" ಪ್ರಮುಖವಾದುದು. ಶೀರ್ಷಿಕೆಯ ಕಥೆ. ಮೌನ ಪ್ರತಿಭಟನೆಯಲ್ಲೋ, ದುಃಖದಲ್ಲೋ, ಅಂತ್ಯವಾಗುವ ದಲಿತ ಪಾತ್ರಗಳಿಗೆ ವಿರುದ್ಧವಾದುದು ಇಲ್ಲಿನ ಪಾತ್ರ. ತಲತಲಾಂತರದಿಂದ ಮಾಡಿದ ಸೇವೆಯ ಅನರ್ಥತೆಯನ್ನು ಗ್ರಹಿಸಿದ ಯುವಕ ಇಡೀ ನಂಬಿಕೆ ಸಂಪ್ರದಾಯದ ವಿರುದ್ಧವೇ ಸಿಡಿದು ನಿಲ್ಲುತ್ತಾನೆ. ಇದೊಂದು ಉತ್ತಮ ಬಂಡಾಯ ಸ್ವರೂಪದ ದಲಿತ ಸಂವೇದನೆಯ ಕಥೆ.

ಮೌನವಾಗಿ ನೋವನ್ನು ನುಂಗಿದ ಮೌನ ಪ್ರತಿಭಟನೆ 'ಸಾವು ಬತ್ತೀವಿ ನಿಲ್ಸಯ್ಯೋ' ಕಥೆಯಲ್ಲಿದ್ದರೆ, ಮನುಷ್ಯರೆಲ್ಲ ಒಂದೇ ಆದರೆ ದಲಿತರನ್ನು ಮಾತ್ರ ತಮ್ಮ ಸೇವೆಗೆ ಪಶುಗಳಂತೆ ಬಳಸಿಕೊಳ್ಳುವ ಉಳ್ಳವರು, ಸವರ್ಣೀಯರ ವಿರುದ್ಧ ಸಿಡಿದೇಳುವ ದಲಿತ ಯುವಕನ ಕಥೆ "ಚಮ್ಮಾವುಗೆ". ತಂದೆ ಊರಿನ ಜೀತ ಮಾಡಿ ಮುದಿಯಾಗಿ ಮೂಲೆ ಸೇರಿದ್ದಾನೆ. ತಾಯಿ ಕೂಲಿನಾಲಿ ಮಾಡುತಿದ್ದಾಳೆ. ತನ್ನ ಜಮೀನನ್ನು ಊರ ಗೌಡನಿಗೆ ಬರೆದು ಕೊಟ್ಟಾಗಿದೆ. ಈತ ಅದೇ ಗೌಡನ ಸೇವೆ ಮಾಡೆಂದು ಹೇಳುವ ತಂದೆಗೆ ತಿರುಗಿ ಬೀಳುವ ಯುವಕ. ಈ ನಡುವೆ ದಲಿತ ಮುದಿಜೀವ ತಿಮ್ಮನ ಕರುಣಾಜನಕ ಕೊನೆಯದಿನಗಳು. ಅಂತಿಮವಾಗಿ ತಿಮ್ಮನ ಸಾವು. ಈ ಸಾವು ದಲಿತರಿಗೆ ದುಃಖತಂದರೆ, ಊರಗೌಡನ ಮನೆಯ ಮದುವೆಗೆ ಅಪಶಕುನವಾಯಿತು. ಆದ್ದರಿಂದಲೇ ಸಾವಿನ ಮನೆಗೆ ಬಂದ ಗೌಡ "ಹಾಳನಿಷ್ಠ ಬಡ್ಡೀದು. ಇವತ್ತೇ ನೆಗೆತ್ಗೋ ಬೇಕಾ. ಹೊತುಕ್ಕೊಂಚೆ ತಕ್ಕಂಡೋಗಿ ಸೀದಗಬುಡುರ್‍ಲಾ" ಎಂದು ಉಪೇಕ್ಷೆಯ ಮಾತನಾಡುವನು.

ದಲಿತರ ಸಾವು ಪ್ರಾಣಿಗೆ ಸಮನಾದಂತೆ. ತಿಮ್ಮಜ್ಜನನ್ನು ವಯಸ್ಸಿದ್ದಾಗ ಚೆನ್ನಾಗಿ ದುಡಿಸಿಕೊಂಡವರು ಇಂದು ಅಮಾನುಷವಾಗಿ ಆತನ ಶವದೊಂದಿಗೆ ವರ್ತಿಸುತಿದ್ದಾರೆ. ಮನೆಯ ಮದುವೆಗೆ ತೊಂದರೆಯಾಗುತ್ತದೆ ಎಂದು ರಾತ್ರೋರಾತ್ರಿ ಸಂಸ್ಕಾರ ಮಾಡಿಸುವರು. ವ್ಯವಸ್ಥೆಯ ಅಮಾನವೀಯತೆ ಇಲ್ಲಿ ಶಿವಳ್ಳಿಯವರಿಂದ ಉತ್ತಮವಾಗಿ ಚಿತ್ರಿತವಾಗಿದೆ. ಇದರಿಂದ ಕೋಪಕೋಪಕ್ಕೊಳಗಾದವನು ಮಾತ್ರ ಕಥಾನಾಯಕ ದಲಿತ ಯುವಕ.

ಕರೀಗೌಡರ ಮಗನ ಮದುವೆಗೆ ಚಪ್ಪಲಿಯನ್ನು ಎತ್ತುವ ಸಂದರ್ಭವನ್ನು ಮಾತ್ರ ರುದ್ರ ಕಠಿಣವಾಗಿ ವಿರೋಧಿಸುತ್ತಾನೆ. ಊರಿನ ದಲಿತರು ಶರಣೆಂದು ಒಪ್ಪುವ ಈ ಜೀತವನ್ನು ರುದ್ರ ಉಗ್ರವಾಗಿ ವಿರೋಧಿಸುವನು. ದಲಿತ ಸಂಕೇತವಾದ ತಮಟೆಗಳನ್ನು ಈಗಾಗಲೇ ಸಾರ್ವಜನಿಕವಾಗಿ ದಹಿಸಿದನು. ಚಪ್ಪಲಿ ಎತ್ತುವುದನ್ನು ಖಡಕ್ ಆಗಿ ಪ್ರತಿಭಟಿಸಿದನು. "ಕಾಲ್ನೇಲಿ ಮೆಟ್ಟೋದ ಕೈಲೆತ್ತ್ಗಂಬೇಕಂತ ಯಾರೇಳಿದ್ದಾರು" ಎನ್ನುವನು. ಊರಿನ ದಲಿತರು ಅಂತಿಮವಾಗಿ ರುದ್ರನೊಂದಿಗೆ ದನಿಗೂಡಿಸುವುದು ಇಲ್ಲಿನ ವಸ್ತು. ಕೆಂಪೇಗೌಡರ ಅತ್ಯುತ್ತಮ ದಲಿತ ಸಣ್ಣ ಕಥೆ 'ಚಮ್ಮಾವುಗೆ'. ಈ ಕೃತಿಯನ್ನು ಕುರಿತು ದೇವಯ್ಯ ಹರವೆ "ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ – ಅಬಚೂರಿನ ಪೋಸ್ಟಾಫೀಸು, ಮುಸ್ಸಂಜೆಯ ಕಥಾ ಪ್ರಸಂಗ, ಒಂದು ಊರಿನ ಕಥೆ, ದ್ಯಾವನೂರು. ಒಡಲಾಳ, ಬೆಲ್ಜಿ, ಹುತ್ತ ಬಡಿದರೆ, ಪತ್ರೆ ಸಂಗಪ್ಪ, ಚಮ್ಮಾವುಗೆ ಮುಂತಾದ ಕೃತಿಗಳನ್ನು ಹೆಸರಿಸಬಹುದು" ಎಂದಿದ್ದಾರೆ. ಇದೊಂದು ದಲಿತ ಸಂವೇದನೆಯ

ಬಂಡಾಯ ವಸ್ತುವಿನ ಕಥೆ. ಪರಂಪರಾಗತವಾಗಿ ಪಂಚಮರಿಗೆ ಅಂಟಿದ್ದ ಜಾಡ್ಯವನ್ನು ಹೊರದೂಡುವ ಪ್ರಯತ್ನವಿದೆ. ಮಾನವೀವತೆಯನ್ನೇ ಮರೆಯುವ ಶೋಷಕರು. ಕಿತ್ತು ತಿನ್ನುವ ಸಮಸ್ಯೆಗಳ ನಡುವೆ ಮನುಷ್ಯತ್ವ ಮರೆಯುವ ರುದ್ರ. ಕೊನೆಗೆ ದಲಿತರೆಲ್ಲರೂ ಈತನೊಂದಿಗೆ ದನಿಗೂಡಿಸುವುದು ಆಶಾದಾಯಕ ಬದಲಾವಣೆಯ ಸಂಕೇತವಾಗಿದೆ.

ಶಿವಳ್ಳಿಯವರ ದಲಿತ ಸಂವೇದನೆಯ ಕಥೆಗಳಲ್ಲಿ 'ದೀವಳಿಗೆ' ಉತ್ತಮ ಕಥೆಯಾಗಿದೆ. ವಾಸ್ತವವಾಗಿ ಅನುಕೂಲಕರ ಸ್ಥಿತಿಯಲ್ಲಿ ಇರಬೇಕಾದ ಕುಟುಂಬ ಬಡತನಕ್ಕೆ ಜಾರಿದೆ. ಇದಕ್ಕೆ ಕಾರಣ ದಲಿತರ ದುರ್ವ್ಯಸನಗಳು. ಇದ್ದ ಜಮೀನನ್ನು ಉತ್ತು ಬಿತ್ತು ಸುಂದರ ಬದುಕನ್ನ ಕಟ್ಟಿಕೊಳ್ಳಲು ಎಲ್ಲ ಅನುಕೂಲ ಇದ್ದರೂ, ಕುಡಿತ, ಮೊದಲಾದ ವ್ಯಸನಗಳನ್ನು ಕಲಿತು ಭೂಮಿಯನ್ನು ಮಾರಿಕೊಂಡನು. ಮುಂದೆ ತಾನು ಮಾರಿದ ಜಮೀನನ್ನು ಕೊಂಡುಕೊಂಡವನ ಮನೆಯಲ್ಲೇ ಜೀತ. ಹಾಗೆಯೇ ಸಾಲ ಮಾಡಿಕೊಂಡು, ಸಾಲಗಾರನಾಗಿಯೇ ಕೊನೆ ಯುಸಿರೆಳೆಯುವನು. ಅಲ್ಲದೆ ತನ್ನ ಮಗ ಸಿದ್ದಣ್ಣನೂ, ಗೌಡರ ಮನೆಯಲ್ಲಿ ಕೂಲಿಕಾರ್ಮಿಕನಾಗಿ ದುಡಿಯ ಬೇಕಾಗುತ್ತದೆ. ಈ ಸಂದರ್ಭದಲ್ಲಿ ಭತ್ತದ ಗದ್ದೆಯ ಜಿಗಳನ್ನು ತೆಗೆಯುವಾಗ ಸಿದ್ದಣ್ಣನಿಗೆ ಈ ಸುಂದರ ಜಮೀನು ತನ್ನದೇ ಆಗಿತ್ತೆಂದು ನೆನನೆನೆದು ದುಃಖಿತನಾಗುವನು. ಇದಿಷ್ಟು 'ದೀವಳಿಗೆ'ಯ ವಸ್ತು. ಈ ಮೂಲಕ ಗ್ರಾಮೀಣ ದಲಿತ ಬದುಕಿನ ಅನೇಕ ಮುಖಗಳು ಗ್ರಹಿಕೆಗೆ ಒಳಗಾಗುತ್ತವೆ. ವಾಸ್ತವವಾಗಿ ದಲಿತನು ಬಡವನಲ್ಲ. ಬಡತನವನ್ನು ತನ್ನ ಅಜ್ಞಾನದಿಂದ ಬರಮಾಡಿಕೊಂಡಿದ್ದು. ಜೊತೆಗೆ ಅನಕ್ಷರತೆ ಮತ್ತು ಮುಂದಾಲೋಚನೆ ಇಲ್ಲದ ಬದುಕು ಈ ಪರಿಣಾಮಕ್ಕೆ ಕಾರಣವಾಗಿದೆ. ಇದರೊಂದಿಗೆ ಗಮನಿಸಬಹುದಾದ ಮತ್ತೊಂದು ಅಂಶವೆಂದರೆ ದಲಿತನ ವ್ಯಸನಗಳನ್ನು ಸರಿಪಡಿಸಲು ಯಾರೂ ಪ್ರಯತ್ನಿಸುವುದಿಲ್ಲ. ಬದಲಾಗಿ ಅದನ್ನೇ ಅನುಕೂಲ ಸಿಂಧುವಾಗಿಸಿ ಕೊಳ್ಳುವುದು ಕಂಡುಬರುತ್ತದೆ. ತನಗೆ ಒದಗಿಬಂದ ಬಡತನ. ಹೀನ ಬದುಕಿಗೆ ತನ್ನ ಹಣೆಯ ಬರಹವೇ ಕಾರಣವೆಂದು ಸ್ವಯಂ ಘೋಷಿಸಿಕೊಳ್ಳುತ್ತಾನೆ ದಲಿತ ಬಹುತೇಕ ಕಡೆ ಸಿಡಿದೇಳಲಾರ. ಇದಕ್ಕೂ ಕಾರಣಗಳಿಲ್ಲದಿಲ್ಲ. ಈ ನಿಟ್ಟಿನಲ್ಲಿ ಕಥೆ ಸಾಗುತ್ತದೆ.

ಒಂದೆರಡು ಅತ್ಯುತ್ತಮ ಸನ್ನಿವೇಶಗಳು ಈ ಕಥೆಯಲ್ಲಿದೆ. ಕಥಾನಾಯಕ ಸಿದ್ದಣ. ಇಂದು ಚಲುವೇಗೌಡನ ಮನೆಯ ಕಾರ್ಮಿಕ. ಕಪನೀಗೌಡ ಚಲುವೇಗೌಡರ ತಂದೆ. ಒಂದು ದಿನ ಕಪನೀಗೌಡರ ತಾಯಿ ದಲಿತಕೇರಿಗೆ ರಾತ್ರಿವೇಳೆ ಬಂದು, ಸಿದ್ದಣ್ಣನ ತಾಯಿ ಕಾಳಬೋರಿ ಹತ್ತಿರ ಕಣ್ಣೀರು ಹಾಕುತ್ತಾ "ಕಾಳಬೋರಿ ಅಳ್ಗೇಲಿ ಒಂದ್ಕಾಳೂ ರಾಗಿ ಇಲ್ಲ. ಮಕ್ಕಳು ಮರಿ ಎಲ್ಲ ಅಸ್ಗಂಡು ಸೊಪ್ಪಾಂಕ್ಟಂಗೆ ಬಿದ್ದವೆ, ನೀನು ದೊಡ್ಡ ಮನಸ್ಸು ಮಾಡಿ ನಾಕ್ ಮೊರ ರಾಗಿ ಕೊಟ್ರೆ ಬೀಸಿ ಮಕ್ಕಳಿಗೆ ಇಟ್ಮಾಡಿಕ್ತೀನಿ ಅಂದ್ಲು" ಈ ಸಂದರ್ಭದಲ್ಲಿ ಸಿದ್ದಣ್ಣನ ತಾಯಿ ಇಷ್ಟೊತ್ತಿನಲ್ಲಿ ರಾಗಿ ಕೊಡಲೋ ಬೇಡವೋ ನಮ್ಮನೆ ಲಕ್ಷ್ಮಿ ಅವರಮನೆಗೆ ಹೊರಟುಹೋದರೆ ಎಂದು ಹಿಂದು ಮುಂದು ನೋಡಿದರೆ. ಸಿದ್ದಣ್ಣನ ತಂದೆ "ಆ ನಮ್ಮವ್ವ ಆ ಕೇರಿಯಿಂದ ಈ ಕೇರಿಗೆ ಬಂದವ್ಳೆ, ಅವ್ಳು ಕೇಳೋದು ಹೆಚ್ಚೋ ನಾವ್ ಕೊಡೋದೆಚ್ಚೋ" ಎಂದು ಕೊಡಿಸುವುದು. ಇದು ದಲಿತನ ಹೆಮ್ಮೆ. ಸವರ್ಣಿಯನು ತನ್ನ ಕೇರಿಗೆ ಬಂದು ಕೈಯೊಡ್ಡಿದಾಗ ತಾನು ಕೊಡುವುದು ಬಹಳ

ಹೆಮ್ಮೆಯ ವಿಚಾರ. ಶಿವರಾತ್ರಿ ಸಂಪ್ರದಾಯ ಮೀರಿ ಕೊಡುವುದು ಮಾನವೀಯತೆ. ಆದರೆ ಇದೇ ದಲಿತನ ಜಮೀನನ್ನು ಇದೇ ರಾಗಿ ಬೇಡಿಹೋದ ಕುಟುಂಬದವರೆ ಕಿತ್ತುಕೊಂಡಿದ್ದು ದುರಂತವೇ ಸರಿ.

ಈ ಕಥೆಯಲ್ಲಿನ ಮತ್ತೊಂದು ಘಟನೆ ಸಿದ್ದಣ್ಣನ ಶುದ್ಧ ಮನಸ್ಸಿನ ಕಥೆ. ಆ ದಿನ ಗೌಡರ ಮನೆಯಲ್ಲಿ ದುಡಿದು ಬರುವ ದಿನ ಹಬ್ಬ. ಸಿದ್ದಣ್ಣನ ಹೆಂಡತಿಯಾದ ಪಾರ್ವತಿಯ ಅಣತಿಯಂತೆ ಗೌಡರ ಮನೆಯಿಂದ ಅಕ್ಕಿ, ಬೆಲ್ಲ, ಕಾಯಿಯನ್ನ ಪಡೆದು ಬರುವುದು. ಹೀಗೆ ತಾಯಿ ಚನ್ನವ್ವನಿಂದ ಇವುಗಳನ್ನು ಪಡೆದಾಗ ಒಂದು ಕ್ಷಣ ಸಿದ್ದಣ್ಣ ತನ್ನ ತಾಯಿ ತನಗೆ ಹೇಳಿದ ಕಥೆ ನೆನಪಿಗೆ ಬಂದು ಬಿಡುತ್ತದೆ. ಅದಿನ ರಾತ್ರಿ ಗೌಡರ ಮನಗೆ ರಾಗಿ ಕೊಟ್ಟು ರಾಗಿಯೊಂದಿಗೆ ನಮ್ಮ ಮನೆಯ ಲಕ್ಷ್ಮಿಯು ಅವರ ಮನೆಗೆ ಹೊರಟೋದಳು ಎಂದಿದ್ದು ನೆನಪಿಗೆ ಬಂದಿತು. ಇಂದು ಇವರು ಕೊಡುವ ಈ ಅಕ್ಕಿ, ಬೆಲ್ಲ, ಕಾಯಿಯ ಮೂಲಕ ಅದೇ ಲಕ್ಷ್ಮೀ ನಮ್ಮ ಮನೆಗೆ ವಾಪಸಾಗಲಿ ಎಂದು ಬಯಸಿದನು ಆದರೆ ತಕ್ಷಣ ತನ್ನ ದುರಾಸೆ ತನಗೆ ಹಿಡಿಸದೆ ಕನಸು ಮನಸ್ಸಿನಲ್ಲೂ ಬೇರೆಯವರಿಗೆ ಕೇಡೆಣಿಸದ ಈತ ತನಗ ಏವತ್ತೀಕೆ ಇಂತ ಕೆಟ್ಟ ಬುದ್ಧಿಬಂತು ಎಂದು ಪಶ್ಚಾತಾಪ ಪಡುವನು. “ಉಂಡು ಉಲಿಯೋರ ನೋಡಬೋದು, ಅಸ್ಟು ಅಲಿಯೋರ ನೋಡಾಕಾಗದು. ತಾನು ಕೆಟ್ರೂ ಬೇರೆಯವರು ಕೆಡೋದು ಬೇಡ”. ಎಂಬ ಘಟನೆ ಇಡೀ ಕಥೆಯಲ್ಲಿ ಕೇಂದ್ರ ಬಿಂದುಗಳಾಗಿವೆ.

ಸಿದ್ದಣ್ಣನ ಧರ್ಮಪತ್ನಿ ಪಾರ್ವತಿಯೊಂದಿಗಿನ ಸಾಮರಸ್ಯದ ಬದುಕು ಮಗನ ಉತ್ತಮ ಓದು. ತಾನು ಕೂಲಿಕಾರನಾದಂತೆ ತನ್ನ ಮಗ ಆಗಬಾರದು ಆತ ಓದಿ ವಿದ್ಯಾವಂತನಾಗಲೆಂಬ ಸಿದ್ದಣ್ಣನ ಹಂಬಲ ಇವೆಲ್ಲ ಕಥೆಯಲ್ಲಿನ ಸನ್ನಿವೇಶಗಳು ಈ ಕಥೆಯಲ್ಲಿ ದಲಿತ ಕುಟುಂಬದ ನೋವಿಗೆ ನೇರವಾಗಿ ಆತನೇ ಕಾರಣ ಎಂಬಂತೆ ಕಥೆಯನ್ನು ನೆಯ್ದಿದ್ದಾರೆ. “ನಿಮ್ಮ ಉದ್ದಾರ ನಿಮ್ಮಿಂದಲೇ” ಎಂಬ ಡಾ॥ ಬಿ.ಆರ್ ಅಂಬೇಡ್ಕರ್‌ರವರ ಮಾತು ಸಾರ್ವತ್ರಿಕ ಸತ್ಯವಾದುದು. ಕಥೆ ಒಂದು ಸುಂದರ ನದಿಯಂತೆ ಸಾಗುತ್ತದೆ. ಅಬ್ಬರವಿಲ್ಲ, ಆತಂಕ ಉದ್ವೇಗಗಳು ಕಥೆಯಲ್ಲಿ ಎಲ್ಲು ಬರುವುದಿಲ್ಲ. ಬಡತನ, ಬಡತನಕ್ಕೆ ಕಾರಣ, ಇವಿಷ್ಟು ಪ್ರಧಾನ ಅಂಶಗಳು.

ಶಿವಳ್ಳಿ ಕೆಂಪೇಗೌಡರ ‘ನಾವು ಬತ್ತೀವಿ ನಿಲ್ಲಯ್ಯೋ’ ‘ಚಮ್ಮಾವುಗೆ’ ‘ದೀವಳಿಗೆ’ ಉತ್ತಮ ದಲಿತ ಸಂವೇದನೆಯ ಕಥೆಗಳು. ಮೂರು ಕಥೆಗಳು ಮೂರು ದಲಿತ ಬದುಕನ್ನು ಚಿತ್ರಿಸಿದೆ. ಮೊದಲ ಕಥೆಯಲ್ಲಿ ಮಕ್ಕಳು ಮರಿ ಎನ್ನದೆ ಊಟಕ್ಕೆ ಕುಳಿತ ದಲಿತ ಮಗು ಮಾದೇವಿಯನ್ನ ಮನೆಯಿಂದ ಹೊರಹಾಕಿದ ಅಮಾನವೀಯತೆ. ಎರಡನೆಯ ಕಥೆಯಲ್ಲಿ ರುದ್ರನ ರೌದ್ರರೂಪ. ಬದಲಾಗಬೇಕಾದ ಅನಿವಾರ್ಯ ದಲಿತ ಬದುಕು, ಬಂಡಾಯದ ಕಹಳೆಗಳ ಠೇಂಕಾರ ಕಥೆಯಲ್ಲಿದೆ. ದೀವಳಿಗೆ ಮಾತ್ರ ಯಾವುದೇ ಆತಂಕ ಉದ್ವೇಗಗಳಿಲ್ಲದೆ ಪ್ರಶಾಂತ ನದಿಯಂತೆ ಸಾಗುವ ಕಥೆ. ತನ್ನ ಸ್ಥಿತಿಗೆ ತನ್ನ ತಂದೆಯನ್ನು ಶಪಿಸಿ ತಾನು ಒಡೆಯನಾಗಬೇಕಿದ್ದ ಭೂಮಿಯಲ್ಲಿ ತಾನೇ ಜೀತದಾಳಾಗಿ ದುಡಿಯುವ ದೌರ್ಭಾಗ್ಯವಿದೆ. ಈ ಮೂಲಕ ಕೆಂಪೇಗೌಡ ಒಬ್ಬ ಉತ್ತಮ ದಲಿತ ಕಥಾ ಬರಹಗಾರರಾಗಿ ನಿಲ್ಲುವುದು.

೪.೬ ಕೆಂಪೇಗೌಡರ ವೃತ್ತಿ ಮತ್ತು ಪ್ರವೃತ್ತಿ ನಡುವಿನ ಸಂಘರ್ಷದ ಕಥೆಗಳು

ಅನೇಕ ಮಂದಿ ಆಸಕ್ತಿಯ ಕ್ಷೇತ್ರವನ್ನು ಗೌಣವಾಗಿಸಿಕೊಂಡು. ಆಸಕ್ತಿ ಇಲ್ಲದಿದ್ದರೂ ಬದುಕಿಗಾಗಿ ಕೆಲವು ಕ್ಷೇತ್ರಗಳನ್ನು ಆರಿಸಿಕೊಂಡು ಅಲ್ಲಿ ಉದ್ಯೋಗದಲ್ಲಿ ತೊಡಗುತ್ತಾರೆ. ವೈಯಕ್ತಿಕವಾಗಿ ಸಾಹಿತ್ಯ. ಸಂಗೀತ. ಚಿತ್ರಕಲೆ ಕ್ಷೇತ್ರದಲ್ಲಿ ಆಸಕ್ತಿ ಇರುವ ಕಲಾವಿದರು ಆರ್ಥಿಕ ಭದ್ರತೆ ಇಲ್ಲದ ಈ ಕ್ಷೇತ್ರಗಳನ್ನು ಪ್ರವೃತ್ತಿಯಾಗಿಸಿಕೊಂಡು. ಇತರೆ ಬೇರೆ ಕ್ಷೇತ್ರಗಳಲ್ಲಿ ದುಡಿಯುತ್ತಾ ಜೀವನ ಸಾಗಿಸುತ್ತಾರೆ. ಈ ನಡುವೆ ಅವರ ಯಾಂತ್ರಿಕ ದುಡಿಮೆಯಿಂದ ಚಿತ್ತಚಾಂಚಲ್ಯ, ಅನಾಸಕ್ತಿ, ಬೇಸರಗಳು ಕಾಡುತ್ತವೆ. ಇಂತಹ ಸಂದಿಗ್ಧತೆಗಳನ್ನು ಕೆಂಪೇಗೌಡರ ಕೆಲವು ಕಥೆಗಳು ವಸ್ತುವಾಗಿಸಿಕೊಂಡಿದೆ ಈ ಮುಂದೆ ಅವುಗಳ ವಿಶ್ಲೇಷಣೆಯನ್ನು ಮಾಡಲಾಗಿದೆ.

'ಬಾಡಿದ ಹೂಗಳು' ಕಥೆ ಸಾಹಿತ್ಯ ಸೇವೆ. ಕಲಾಸೇವೆ ಮಾಡಿದ ಅನೇಕರ ಬಡತನದ ಬದುಕಿನ ಕಥೆಯಾಗಿದೆ. ಪತ್ರಿಕೋದ್ಯಮವನ್ನು ಆರಂಭಿಸಿ ನಷ್ಟ ಅನುಭವಿಸಿದ ಆನಂದೇಗೌಡರು, ಅನೇಕ ಕೃತಿಗಳನ್ನು ಬರೆದು ಮುದ್ರಿಸಿ ಮಾರಾಟವಾಗದೆ, ಕೈಸುಟ್ಟುಕೊಂಡ ಮಹದೇವಪ್ಪ, ಅಲ್ಲದೆ ಚಿತ್ರಕಲಾವಿದ ಮೂರ್ತಿ ಅನಾಥ ಹೆಣವಾಗಿ ಸಂಸ್ಕಾರವಾದದ್ದು ಮುಖ್ಯವಾಗಿ ಬರುವ ಘಟನೆಗಳು. ಮೂರ್ತಿ ಒಳ್ಳೆಯ ಪ್ರಸಿದ್ಧ ಚಿತ್ರಕಲಾವಿದ. ಆತನ ಬರಹಗಳು ಸುತ್ತಮುತ್ತಲ ಹಳ್ಳಿಗಳ ಎತ್ತಿನಗಾಡಿಯಲ್ಲಿ ರಾರಾಜಿಸುತ್ತಿವೆ. ಆದರೆ ಆತನ ಬದುಕಿನ ಅಂತ್ಯ ಮುಸುಕು ಮುಸುಕಾಗಿತ್ತು.

ಹೀಗೆ ಸಾಗಿದ ಕಥೆ ತನ್ನ ಪಥವನ್ನು ಬದಲಾಯಿಸಿಕೊಂಡು ಮತ್ತೊಂದು ತಿರುವನ್ನು ಪಡೆಯುತ್ತದೆ. ಅಂದು ಕನ್ನಡ ರಾಜ್ಯೋತ್ಸವ ಸಭಾಂಗಣದಲ್ಲಿ ವಿರಳವಾಗಿ ಸೇರಿ ಜನ, ಶಿಲ್ಪಿ ಶಾಮಾಚಾರ್, ನಾಟಕದ ಮೇಸ್ಟ್ರು ಸೂರಪ್ಪನವರಿಗೆ, ಸಾಹಿತಿ ಮಹದೇವಪ್ಪನಿಗೆ ಹಾಗೂ ನಟಿ ರತ್ನಮ್ಮರಿಗೆ ಸನ್ಮಾನ ಸಮಾರಂಭ. ಇದನ್ನು ನಡೆಸಿಕೊಟ್ಟ ಸ್ಥಳೀಯ ಕೈಗಾರಿಕೋದ್ಯಮಿಯ ಭಾಷಣ ಬೆಚ್ಚಿಬೀಳಿಸಿತು. ಸನ್ಮಾನಿತರಿಗೋ ಬಡತನ, ಈ ಸನ್ಮಾನದ ಬದಲು ಅವರಿಗೆ ಬಟ್ಟೆಯನ್ನಾದರೂ ಕೊಡಬಹುದಿತ್ತು ಎಂಬುದು ನಿರೂಪಕನ ಅಳಲು. ಭಾಷಣದಲ್ಲಿ ತೊಡಗಿದ ಉದ್ಯಮಿ ಆ ಎಲ್ಲಾ ಕಲಾವಿದರ ಬಡತನವನ್ನು ನೋಡಿ, ನೀವು ಈ ಕ್ಷೇತ್ರಕ್ಕೆ ಬರುವ ಬದಲು ಗಾರೆಕೆಲಸ, ಅಂಗಡಿ, ಬೀದಿ ವ್ಯಾಪಾರಗಳಲ್ಲಿ ತೊಡಗಿಕೊಂಡಿದ್ದರೆ ನಿಮಗೆ ಇಂತಹ ಸ್ಥಿತಿ ಬರುತ್ತಿರಲಿಲ್ಲ ಎಂದನು. ಆತ ಕಲಾ ಸೇವೆಯನ್ನು ಆರ್ಥಿಕ ಮಾನದಂಡದಿಂದ ಮಾಪನ ಮಾಡಿದನು. ತನ್ನ ಕ್ಷೇತ್ರ ಆರ್ಥಿಕ ಸಭಲತೆಗೆ ಸರಿಯಾದುದು ಎಂಬುದು ಉದ್ಯಮಿಯ ಅಭಿಮತ. ಇದರಿಂದ ನಿರೂಪಕರು ಭಾವುಕರಾಗಿ ನೊಂದಿಹೋದರು. ಕಲಾವಿದರ ಬದುಕಿನ ಬಡತನವನ್ನು ಚಿತ್ರಿಸಿದ್ದಾರೆ. ಕಲಾಪೋಷಕರಾದ ಇವರ ವೃತ್ತಿ ಮತ್ತು ಪ್ರವೃತ್ತಿಗಳ ಸಂಘರ್ಷವನ್ನ ಇಲ್ಲಿ ಕಾಣಬಹುದಾಗಿದೆ. ಅವರು ವೃತ್ತಿಯಾಗಿ ಕಲಾಕ್ಷೇತ್ರ ಬಿಟ್ಟು ಬೇರೆ ಕ್ಷೇತ್ರವನ್ನ ಆರಿಸಿಕೊಂಡಿದ್ದಾರೆ ಬಹುಶಃ ಆರ್ಥಿಕವಾಗಿ ದೃಢವಾಗುತಿದ್ದರು.

'ಪಯಣ ಕಥೆ' ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸುವವರ ಸಂಕಟಗಳನ್ನು ಚಿತ್ರಿಸಿರುವ ಕಥೆ. ನೈತಿಕತೆ ಪ್ರಾಮಾಣಿಕತೆಗಳ ಜೆನ್ನ ಹತ್ತಿದವರಿಗೆ ಸಿಗಲಿರಬಹುದಾದ ಕಷ್ಟಗಳನ್ನ ಇಲ್ಲಿ ಲೇಖಕರು ಚಿತ್ರಿಸಿದ್ದಾರೆ. ಕಥೆಯ ನಿರೂಪಕನೊಂದಿಗೆ ಉಲ್ಲೇಖವಾಗಿರುವ ಏಕಮಾತ್ರ ಪಾತ್ರ 'ಅನಂತ' ನದು. ಪತ್ರಿಕಾರಂಗದಲ್ಲಿ ದುಡಿದ

ಅಪಾರ ಅನುಭವ ಈತನಿಗಿದೆ. ಆದರೆ ಬದುಕೆಲ್ಲ ದುಃಖದಲ್ಲೇ ಸಾಗಿದೆ. ಕೊನೆಯದಾಗಿ ಬೀದಿ ಹೆಣವಾಗಿ ಕೊನೆಯುಸಿರೆಳೆಯುತ್ತಾನೆ. ಇಲ್ಲಿ ಬಯಸೀ ಬಯಸೀ ಪತ್ರಿಕಾರಂಗಕ್ಕೆ ಕಾಲಿಟ್ಟವರು ಮಾನಸಿಕ ಸಂಘರ್ಷಗಳನ್ನು ಲೇಖಕರು ಬಿಡಿಸಿದ್ದಾರೆ ಅಲ್ಲದೆ ಸಿಗರೇಟು, ಸರಾಯಿಗಳ ವ್ಯಸನಕ್ಕೆ ಒಳಗಾದವನಿಗೆ ಒದಗಲಿರುವ ಕೊನೆಯ ದಿನಗಳನ್ನು ನೆನಪಿಸುತ್ತಾರೆ.

ಕೌಟುಂಬಿಕ ಕಥೆಯಂತೆ ಚಿತ್ರಿತವಾಗಿರುವ ಮತ್ತೊಂದು ಸುಂದರವಾದ ಕಥೆ 'ಕುಹೂ....ಕುಹೂ....' ಇದೂ ಕೂಡ ಮಾನಸಿಕ ಸಂಘರ್ಷಗಳನ್ನು ಎದುರಿಸುವ ಪಾತ್ರಗಳಿಂದ ರಚಿತವಾಗಿದೆ. ಕಥೆಯ ಪ್ರಮುಖ ಪಾತ್ರಧಾರಿ ಹವ್ಯಾಸಿ ಹಾಡುಗಾರ. ಆತನ ಹೆಸರು ಗೋಪಾಲ. ಊರೂರು ಸುತ್ತಿಕೊಂಡು ಮನೆಯ ಕೆಲಸವನ್ನೆಲ್ಲಾ ಬಿಟ್ಟು ಹಾಡಾಡುತ್ತಾ ನಿಂತಿದ್ದಾನೆ. ಈತನ ತಮ್ಮ 'ತಮ್ಮಯ್ಯ' ವ್ಯವಸಾಯ ಮಾಡಿ ಮನೆಯ ಜವಾಬ್ದಾರಿಯನ್ನು ಹೊತ್ತಿಕೊಂಡಿದ್ದಾನೆ. ಅಣ್ಣನನ್ನು ಕರೆದು ಬುದ್ಧಿಹೇಳಿ ಮನೆಯ ಕೆಲಸದಲ್ಲಿ ತೊಡಗಿಕೊಳ್ಳುವಂತೆ ತಿಳಿಸುತ್ತಾನೆ. ಗೋಪಾಲ ಭತ್ತದ ಗದ್ದೆಯ ಕೊಕ್ಕರೆ ಕಾಯಲು ಹೋಗುವನು. ಇಲ್ಲಿಂದ ಮುಂದೆ ಭಾವಜೀವಿಯಾದ ಗೋಪಲ ತನ್ನ ಭಾವನೆಗಳನ್ನು ಪಕ್ಷಿಗಳೊಂದಿಗೆ ಹಂಚಿಕೊಳ್ಳುವನು ಪದೇ ಪದೇ ಆತನ ಮನಸ್ಸಿನಲ್ಲಿ ತನ್ನ ಆಸಕ್ತಿಯ ಹಾಡುಗಳೇ ಅವರ್ತನಗೊಳ್ಳುವವು. ಈತನ ಆಸಕ್ತಿ ಕ್ಷೇತ್ರ ಹಾಡುಗಾರಿಕೆ, ಆದರೆ ಕುಟುಂಬದವರು ಈತನಿಂದ ಬಯಸಿದ್ದು ಬೇಸಾಯ. ಬೇಸಾಯವಲ್ಲಿ ತೊಡಗಿಕೊಂಡರೂ ಗೋಪಲ ಹಾಡಿನ ಗುಂಗಿನಲ್ಲೇ ಬದುಕುತ್ತಾನೆ. ತನ್ನ ಮನದ ತುಮುಲವನ್ನು ಮಾತುಬಾರದ ಪಕ್ಷಿಗಳೊಂದಿಗೆ ಹಂಚಿಕೊಂಡನು. ಹಾಗಾಗಿ ಇದೊಂದು ಮಾನಸಿಕ ಸಂಘರ್ಷದ ಕಥೆಯಾಗಿ ನಿಲ್ಲುತ್ತದೆ.

'ಕುಡುಕನೂ ಕನ್ನಡ ಬಾವುಟವೂ' ಕವಿಯೊಬ್ಬನ ಬರಡಾದ ಬದುಕನ್ನು ಚಿತ್ರಿಸಿದ ಕಥೆ. ಓದುಗರಿಲ್ಲದ ಕನ್ನಡ ಪುಸ್ತಕಗಳ ಧೂಳಿಡಿದ ಸ್ಥಿತಿ. ಮೂರು ಹೊತ್ತು ಓದು, ಬರಹ ಹೀಗೆ ತಿರುಗುತ್ತಿದ್ದ ಕಲ್ಲಣ್ಣ. ಬರೆದ ಪುಸ್ತಕಗಳನ್ನು ಮುದ್ರಿಸಿದ್ದಾನೆ, ಮಾರಾಟವಾಗಿಲ್ಲ, ಹೆಂಡತಿಯಿಂದ ಚಾಟಿ ಏಟು. ಮನನೊಂದು ಊರೂರು ಸುತ್ತುವುದು. ಒಂದಿಷ್ಟು ಕುಡಿಯುವುದು. ಊರೂರು ಸುತ್ತುವ ಈ ಪಾತ್ರ, ಅಲ್ಲಲ್ಲಿ ಸಮಾನ ದುಃಖಿಗಳನ್ನು ಸಂಧಿಸುತ್ತದೆ. ನೋವುಗಳನ್ನು ಹಂಚಿಕೊಳ್ಳುತ್ತದೆ. ಕುಡುಕನಾದರೂ. ಸೋಮಾರಿಯಾದರೂ ಕನ್ನಡ ಗೌರವವನ್ನು ಬಿಡಲಿಲ್ಲ. ಇಲ್ಲಿಯ ಕಥೆಯ ವಸ್ತು ಇದು. ಕನ್ನಡ ವಾಗ್ದೇವಿಯ ಕೈಂಕರ್ಯದಲ್ಲಿ ತೊಡಗಿದವರ ಬದುಕಿನ ಕಥೆ. ವಾಸ್ತವವಾಗಿ ಸಾಹಿತ್ಯದ ಗೀಳು, ಆದರೆ ಭದ್ರತೆಯಿಲ್ಲದ ಬದುಕು. ಚಿಂತೆ ಮರೆಯುವುದಕ್ಕೆಂದು ಸರಾಯಿ ಸಹವಾಸ. ಈ ಎಲ್ಲದರ ನಡುವೆ ಆತ ಮೆರೆಯುವ ಕನ್ನಡ ಪ್ರೇಮ ಈ ಅಂಶಗಳನ್ನು ಈ ಕಥೆಯಲ್ಲಿ ಕಾಣಬಹುದು. ಸಾಹಿತಿ, ಬರಹಗಾರರು ನೈತಿಕತೆ, ಪ್ರಮಾಣಿಕತೆಗಳ ಸೋಗಿನಲ್ಲಿ ಬಡತನದಲ್ಲಿ ನಲುಗಬೇಕಾದ ಸ್ಥಿತಿ. ಇದರಿಂದ ಇಡೀ ಕುಟುಂಬ ಅನುಭವಿಸುವ ನೋವುಗಳನ್ನ ಚಿತ್ರಿಸಿದೆ.

ಬರಹಗಾರನ ಗೋಳನ್ನು ಬಿಡಿಸಿರುವ ಮತ್ತೊಂದು ಕಥೆ 'ಅಂಚೆ ಚೀಟಿ'. ಬರಹಗಾರನ ಬರವಣಿಗೆಗೆ ಸಲ್ಲದ ಗೌರವ. ಸಾಹಿತ್ಯದ ಮಹತ್ವ ಅರಿಯದ ಜನ. ವ್ಯಕ್ತಿ ಕೊನೆಯುಸಿರೆಳೆದಾಗ ಅನಾಥವಾದ ಆತನ ಸಾಹಿತ್ಯ ಸಂಪತ್ತು ತಾನು ಹೆತ್ತ ಮಕ್ಕಳನ್ನು ತಾನೇ ಮಾರಿದಂತೆ, ತಾನು ಸಂಗ್ರಹಿಸಿ ಓದಿದ

ಪುಸ್ತಕಗಳನ್ನು ತಾನೇ ಗುಜರಿಗೆ ಮಾರುವ ಧಾರುಣ ಘಟನೆಗಳು ಇಲ್ಲಿವೆ. ಯುವ ಬರಹಗಾರರ ಬರವಣಿಗೆಯಲ್ಲಿನ ಉತ್ಸುಕಥೆ, ಇವಕ್ಕೆ ಅನುಭವಿ ಬರಹಗಾರನಿಂದ ಬದುಕನ್ನು ಕಟ್ಟಿಕೊಳ್ಳುವ ಸಲಹೆಗಳಿವೆ. ತಾನು ಬರೆದ ಕಥೆಯನ್ನು ಅಂಚೆಯ ಮೂಲಕ ಪತ್ರಿಕೆಗಳಿಗೆ ರವಾನಿಸಲು ಹಣವಿಲ್ಲದ ಕಠಿಣ ಸ್ಥಿತಿ. ತನ್ನ ಸ್ನೇಹಿತನ ಕುಟುಂಬದವರು ಸ್ನೇಹಿತನ ಸಾವಿನೊಂದಿಗೆ ಆತನ ಪುಸ್ತಕ ಸಂಪತ್ತನ್ನು ಮೂಲೆಗುಂಪುಮಾಡಿದ್ದು ಈ ಕಥೆಯ ವಸ್ತು ಮೈಸೂರು-ಮಂಡ್ಯ ನಗರದ ಏಳ್ಗೆಯಲ್ಲಿ ಹಬ್ಬಿಕೊಂಡಿರುವ ಕಥೆ. ಈ ಕಥೆಯ ಮೂಲಕ ಲೇಖಕ ಕೆಂಪೇಗೌಡರು ಕನ್ನಡಿಗರ ಪುಸ್ತಕದ ಬಗೆಗಿನ ಅನಾಸಕ್ತಿಯನ್ನು ಲೇವಡಿ ಮಾಡಿದ್ದಾರೆ. ಅಲ್ಲದೆ ನಮ್ಮಲ್ಲಿ ಪುಸ್ತಕ ಸಂಸ್ಕೃತಿ ಬೆಳೆಯುವುದು. ಭಾರತ-ಪಾಕಿಸ್ತಾನ ಮಿತ್ರರಾಷ್ಟ್ರಗಳಾಗುವುದೂ ಎರಡೂ ಒಂದೇ ಎಂದು ಹೇಳಿದ್ದಾರೆ. ಒಟ್ಟಾರೆ ಬರಹಗಾರನ ಬದುಕಿನ ಸಮಸ್ಯೆಗಳನ್ನು ಇಲ್ಲಿ ಚಿತ್ರಿಸಿದೆ.

೪.೭ ಶಿವಳ್ಳಿಯವರ ಸಂಕೀರ್ಣ ಕಥೆಗಳು

ಕೆಂಪೇಗೌಡರ ಸಾಹಿತ್ಯ ಕೃಷಿಯಲ್ಲಿನ ವಸ್ತುಗಳನ್ನು ಪರಿಶೀಲಿಸಿದಾಗ ಅವರ ಕವನಗಳಿಗಿಂತ ವೈವಿಧ್ಯತೆ ಅವರ ಕಥೆಗಳಲ್ಲಿದೆ. ಕವಿತೆಗಳಾದರೋ ಬಹುತೇಕ ರೈತ ಸಂಸ್ಕೃತಿಯದೇ ಕಾರುಬಾರು. ಆದರೆ ಕತೆಗಳಲ್ಲಿ ರೈತ, ದಲಿತ, ಸ್ತ್ರೀ ಅಲ್ಲದೆ ಬರಹಗಾರರ. ಪತ್ರಿಕೋದ್ಯಮಿಗಳ. ದುಶ್ಚಟದ ಪರಿಣಾಮ, ಮೊದಲಾದ ವಸ್ತುಗಳನ್ನು ಹೊಂದಿದೆ. ಕೆಲವು ಕಥೆಗಳನ್ನು ಸಂಕೀರ್ಣ ಕಥೆಗಳೆಂದು ಭಾವಿಸಿ ಈ ಮುಂದೆ ವಿಶ್ಲೇಷಿಸಲಾಗಿದೆ. ಇಲ್ಲಿ ನಾಲ್ಕು ಕಥೆಗಳಿದ್ದು ವೈವಿಧ್ಯಮಯವಾದ ವಸ್ತುವನ್ನು ಹೊಂದಿವೆ. 'ಅಂತ್ಯ' ಎಂಬುದು ಈ ಗುಂಪಿನ ಒಂದು ಕಥೆ.

'ಅಂತ್ಯ' ಸಾಂಪ್ರದಾಯಿಕ ಕಥಾ ತಂತ್ರದಂತೆ ಕಂಡರೂ ಕಥೆಯ ಬೆಳವಣಿಗೆಯ ಹಂತದಲ್ಲಿ 'ಅಸಂಗತ' ಕಥೆಯಂತೆ ಭಾಸವಾಗುತ್ತದೆ. ಇಲ್ಲಿ ವ್ಯಕ್ತಿಯ ಬದುಕಿನ ಸಂಕೀರ್ಣತೆಯನ್ನು ಕಾಣಬಹುದು. ಬಯಸದೇ ಒದಗಿಬಂದ ಪರಿಸ್ಥಿತಿಯಿಂದ ವ್ಯಕ್ತಿಯ ಜೀವನದಲ್ಲಿ ಉಂಟಾಗುವ ಬದಲಾವಣೆಗಳನ್ನು ಇಲ್ಲಿ ಕಾಣಬಹುದು. ಎರಡು ಪಾತ್ರಗಳ ಕಥೆ, ಒಂದು ಪಾತ್ರದ ಹೆಸರು ಕಥೆಯ ಅಂತ್ಯದಲ್ಲಿ ಕನವರಿಕೆಯಲ್ಲಿ ಉಲ್ಲೇಖಿಸಲಾಗಿದೆ. ತನ್ನ ತಂದೆಯ ಸಾವು, ಚಿಕ್ಕಪ್ಪನ ಮೋಸ, ತಾನು ಕೂಲಿ ಜೀವನದಲ್ಲಿ ತೊಡಗಿಸಿಕೊಳ್ಳುವುದು, ಆಕಸ್ಮಿಕವಾಗಿ ಕಾಲು ಮುರಿಯುತ್ತದೆ. ಪ್ರಜ್ಞಾಹೀನವಾಗಿ ಬಿದ್ದಿರುವಾಗ ದಾರಿಹೋಕರು ಭಿಕ್ಷುಕನೆಂದು ಬಗೆದು ಪುಡಿಗಾಸು ಹಾಕುವರು. ಮುಂದೇ ಇದೇ ವೃತ್ತಿಯನ್ನು ಮುಂದುವರೆಸುವನು. ಈಗ ಮೈಯೆಲ್ಲಾ ಕಜ್ಜಿ, ಬಟ್ಟೆಯಲ್ಲಿ ಕೂರೆ, ತಲೆಯಲ್ಲಿ ಹೇನು ಕೊಳೆತು ನಾರುವ ಮೈ ಸಾದಾಸೀದ ಭಿಕ್ಷುಕ.

ಮತ್ತೊಂದು ಪಾತ್ರ ಅನುಸಂಗಿಕವಾಗಿ ಬಂದಿದೆ. ಆದರೆ ಕಥಾನಾಯಕನ 'ಅಂತ್ಯ' ಈತನಿಂದಲೇ ಆಗುತ್ತದೆ. ಪಾರ್ಕಿನಲ್ಲಿ ಈ ಭಿಕ್ಷುಕ ಕುಳಿತಿದ್ದಾಗ, ಕುಡಿದು ಬಂದು ಧೊಪ್ಪನೆ ಉರುಳುವ ದಢೂತಿ ವ್ಯಕ್ತಿ. ಆತನ ಗೊರಕೆ. ಕನವರಿಕೆಗಳು. ಈನಡುವೆ ದಢೂತಿ ವ್ಯಕ್ತಿಯ ಬಳಿ ಬಿದ್ದಿರುವ ಸಿಗರೇಟಿನ ಮೇಲೆ ಭಿಕ್ಷುಕನ ಕಣ್ಣು. ಯಾರಾದರೂ ನೋಡಿಯಾರೆಂದು ಸುತ್ತಲೂ ಗಮನಿಸುವನು. ಯಾರಗಮನವೂ ಇತ್ತ ಇಲ್ಲವೆಂದು ತಿಳಿದು ಪ್ರಜ್ಞಾಹೀನನಾಗಿ ಬಿದ್ದಿರುವ ದಢೂತಿ ವ್ಯಕ್ತಿಯ ಸಿಗರೇಟನ್ನು ಎತ್ತಿಕೊಳ್ಳಲು ಹೋಗುವನು. ಸಿಗರೇಟು

ಎತ್ತಿಕೊಂಡ ಈತನ ಕೈಯನ್ನು ದಢೂತಿ ವ್ಯಕ್ತಿ ಬಿಗಿಯಾಗಿ ಹಿಡಿದನು. ಇದರೊಂದಿಗೆ ಭಿಕ್ಷುಕನ ಅಂತ್ಯವಾಯಿತು.

ಕಥೆಯ ಹೆಸರು 'ಅಂತ್ಯ'. ವ್ಯಕ್ತಿಯ ಅಂತ್ಯ ಹೇಗಾಗುತ್ತದೆಂದು ಯಾರೂ ಊಹಿಸಲಾರರು. 'ಹುಟ್ಟು ಉಚಿತ ಸಾವು ಖಚಿತ' ಎಂಬ ಮಾತಿದೆ. ಸಾವಿಗೊಂದು 'ನೆಪ' ಎಂಬ ಮಾತೂ ಇದೆ. ಸಿಗರೇಟು ಅನಾಥವಾಗಿ ಬಿದ್ದಿರುತ್ತದೆ. ಆದರೆ ಅದರ ಮಾಲೀಕ ಅಲ್ಲೇ ಬಿದ್ದಿದ್ದಾನೆ. ಆತ ಕಾಣದಂತೆ ಸಿಗರೇಟನ್ನು ಅಪಹರಿಸಲು ಹಾಕಿದ ಕೈ ಪ್ರಾಣವನ್ನೇ ತೆಗೆದುಕೊಂಡಿತು. ವ್ಯಕ್ತಿಯ ಬದುಕಿನ ಅನಿರೀಕ್ಷಿತಗಳು ಈ ಕಥೆಯಲ್ಲಿದೆ. ಬಯಸದೇ ಬಂದ ಬಡತನ, ಅಂತೆಯೇ ಬಂದ ಭಿಕ್ಷಾಟನೆ, ಅಂತಿಮವಾಗಿ ಅನಿರೀಕ್ಷಿತ ಸಾವು. ಒಟ್ಟಾರೆ ಯಾವುದೋ ಸಾವು ಎಣಿಸಿದಂತಾಗದು ಎಂಬ ವ್ಯಕ್ತಿಗಳನ್ನು ಗಮನದಲ್ಲಿಟ್ಟು ಈ ಕಥೆಯನ್ನು ಲೇಖಕರು ರಚಿಸಿದ್ದಾರೆ.

ಗ್ರಾಮೀಣ ಜನರು ಅಕ್ಷರಹೀನರು. ಊರ ಶ್ರೀಮಂತನಿಗೆ ಹೆದರಿಕೊಂಡು ಶೋಷಣೆಯನ್ನು ಸಹಿಸಿಕೊಂಡು, ಕಷ್ಟವನ್ನು ಕತ್ತೆಯಂತೆ ಹೊತ್ತು ಬಾಳುವ ಜನರು ಹೆಚ್ಚಾಗಿರುತ್ತಾರೆ. ಮೇಲು ನೋಟಕ್ಕೆ ಒಳ್ಳೆಯವನಂತೆ, ಬಡವರ ಹಿತೈಷಿಯಂತೆ ನಟಿಸುವ ಗೋಮುಖವ್ಯಾಘ್ರಗಳಿಂದ ಈ ಜನರಿಗೆ ನಿರಂತರ ಶೋಷಣೆ. ಈ ನಡುವೆ ಸಾಹುಕಾರನ ಮಾತನ್ನು ಉಂ ಗುಟ್ಟುವ ಹಿಂಬಾಲಕರು. ಈ ಶ್ರೀಮಂತ ಮತ್ತು ಅವನ ಹಿಂಬಾಲಕರಿಂದ ಅದೆಷ್ಟೋ ಕುಟುಂಬಗಳು ನಾಶವಾಗಿವೆ. ಇಂತಹ ಕಥೆಯನ್ನು 'ಒಂದು ಹಳೆಯ ಕಥೆ' ಹೊಂದಿದೆ. 'ಹಾಳೂರಿಗೆ ಉಳಿದವನೇ ಗೌಡ' ಎಂಬಂತೆ ಬಾಯಿಗೆ ಬಂದಂತೆ ಭಾಷಣ ಬಿಗಿಯುವ ಈ ಶ್ರೀಮಂತನಿಗೆ ಪಡಬಾರದ ಕಷ್ಟ ಪಡುವ ಬಡವ ಕಣ್ಣಿಗೆ ಕಾಣುವುದಿಲ್ಲ. ಕೊಡಬೇಕಾದ ಹಣವನ್ನು ಕೊಟ್ಟೆ ಎನ್ನುವುದು, ಕೊಟ್ಟಿರುವ ಹಣವನ್ನು ಕೊಡಲಿಲ್ಲ ಎನ್ನುವುದು ಸಾಮಾನ್ಯ ವಿಚಾರ. ಇವನ ಚೇಲಾಗಳು ಇವನ ಅಣತಿಯಂತೆ ವರ್ತಿಸುತ್ತಾರೆ. ಅದನ್ನೇ ಲೇಖಕರು "ತಾನು ಮಾಡುತ್ತಿದ್ದ ಅಕೃತ್ಯಗಳಿಗೆಲ್ಲಾ 'ಸೈ' ಎನ್ನುವ ಒಂದೆರಡು ನರಕುನ್ನಿಗಳನ್ನು ಮೂಳೆಹಾಕಿ ಇಟ್ಟುಕೊಂಡಿದ್ದ ಕೆಂಪೇಗೌಡ ತನ್ನ ಕಲ್ಲುಹಕುವ ಕೈಗೆ ಸಿಕ್ಕವರ ತಲೆಯನ್ನು ತಿರುಪತಿಯಲ್ಲಿನ ಹಂಗೆ ನುಣ್ಣಗೆ ಬೋಳಿಸುತಿದ್ದನು". ಎನ್ನುವರು.

'ಒಂದು ಹಳೆಯ ಕಥೆ' ಸಣ್ಣಕಥೆಯ ಸಾಂಪ್ರದಾಯಿಕ ಆರಂಭ ಪಡೆದಿದೆ. ಅಂತ್ಯವೂ ಅಂತೆ. ಆದರೆ ದುಃಖಾಂತವಾಗಿದೆ. ಕಾಡೂರಿನ ಕೆಂಪೇಗೌಡನ ಹಣದಾಹವನ್ನು, ಮೋಸವನ್ನು, ಮೊಸಳೆ ಅನುಕಂಪವನ್ನು ಲೇಖಕರು ಈ ಕಥೆಯಲ್ಲಿ ಚಿತ್ರಿಸಿದ್ದಾರೆ. ಈ ಪುಟ್ಟ ಕಥೆಯು ಓದುಗನನ್ನು ಸೆಳೆಯುವ ಗುಣದಿಂದ ಕೂಡಿದೆ. ಸಾಮಾನ್ಯ ಕಥಾವಸ್ತುವನ್ನು ಹೊಂದಿದೆ. ಕಥೆಯ ಪೇಲವತೆಯನ್ನು ಇಲ್ಲಿನ ಭಾಷೆ ಮರೆಸುತ್ತದೆ. ಗ್ರಾಮೀಣ ಬದುಕಿನ ಒಂದು ಸಹಜ ಚಿತ್ರಣ ಇಲ್ಲಿದೆ.

'ಅವನು ಮತ್ತು ನಾನು ಮತ್ತು....' ಶಿವಳ್ಳಿಯವರ ಸೊಗಸಾದ ಒಂದು ಕಥೆ. ವಸ್ತುವಿನ ದೃಷ್ಟಿಯಿಂದ, ಕಥಾತಂತ್ರದ ದೃಷ್ಟಿಯಿಂದ, ಭಾಷಾ ಬಳಕೆಯ ಕಾರಣಗಳಿಂದ ಇದೊಂದು ಉತ್ತಮ ಕಥೆಯಾಗುತ್ತದೆ. ದಿಢೀರ್ ಆರಂಭ ಮತ್ತು ಅನಿರೀಕ್ಷಿತ ಅಂತ್ಯವನ್ನು ಕಥೆಹೊಂದಿದೆ. ಲೇಖಕರ ಬದುಕಿನ ಸಾಮಾಜಿಕ ಆರ್ಥಿಕ ಅಭದ್ರತೆ ಹಾಗೂ ಓದಿಕೊಂಡು ನಿಂತಿರುವವನ ಬಗೆಗಿನ ಜನರ ತಾತ್ಸಾರ ಇವುಗಳ

ಚಿತ್ರಣದೊಂದಿಗೆ ಕಳೆದುಹೋದ ವ್ಯಕ್ತಿ ಮತ್ತು ಕಳೆದುಹೋದ ಸೈಕಲ್‌ಗಳನ್ನು ಅರಸುವುದರೊಂದಿಗೆ ಕಥೆ ಅನಿರೀಕ್ಷಿತ ಮುಕ್ತಾಯ ಪಡೆದಿದೆ. ಈ ನಡುವಿನ ಸನ್ನಿವೇಶಗಳು ಕಥೆಗೆ ಸಹಜ ಕಾಂತಿಯನ್ನು ತಂದಿದೆ.

ನಿರೂಪಕರ ಸ್ನೇಹಿತ ಜಗದೀಶ ಕಾಲೇಜು ವಿದ್ಯಾರ್ಥಿ. ಈತನ ತಮ್ಮ ಶಿವರಾಮನಿಂದಲೇ ಕುಟುಂಬದ ಗಾಡಿ ಸಾಗುತ್ತಿರುವುದು. ಒಮ್ಮೆ ಇದ್ದಕ್ಕಿದಂತೆ ಕಾಣೆಯಾದ ಶಿವರಾಮು. ಇಡೀ ಕುಟುಂಬದ ಹೊಣೆಯನ್ನು ಹಾಗೂ ತನ್ನ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಹೊತ್ತಿದ್ದ ಶಿವರಾಮು ಕಾಣೆಯಾದದ್ದು ಜಗದೀಶನಿಗೆ ಅಪಾರವಾದ ದುಃಖತರುತ್ತದೆ. ವಿದ್ಯಾಭ್ಯಾಸ ಮೊಟಕಾಗುತ್ತದೆ ಬೇಸಾಯವನ್ನು ಅವಲಂಬಿಸಿ ತಮ್ಮನ ಜವಾಬ್ದಾರಿಯನ್ನು ತಾನೇ ಹೊರುತ್ತಾನೆ. ಮತ್ತೊಂದು ಸನ್ನಿವೇಶ ನಿರೂಪಕರು ನಿಲ್ಲಿಸಿದ ಸೈಕಲ್ ಕಳುವಾಗುವುದು. ಇವರಿಬ್ಬರೂ ಸ್ನೇಹಿತರು. ಒಬ್ಬ ತಮ್ಮನನ್ನು ಮತ್ತೊಬ್ಬ ಸೈಕಲನ್ನು ನಿಂತ ನಿಂತ ಕಡೆಯಲ್ಲಾ ಪೋಲೀಸ್ ಕಣ್ಣಿನಿಂದ ಅರಸುವರು. ಬಹಳ ದಿನಗಳಾದರೂ ಈ ಅರಸುವಿಕೆ ನಿರಂತರವಾಗಿತ್ತು. ಇದು ಅವರಿಬ್ಬರು ಕಳೆದುಕೊಂಡ ವ್ಯಕ್ತಿ ಮತ್ತು ವಸ್ತು ಬಗ್ಗೆ ಹೊಂದಿದ್ದ ಭಾವನಾತ್ಮಕ ಸಂಬಂಧವನ್ನು ಸಂಕೇತಿಸುತ್ತದೆ. ಬಹಳ ಬೇಸರದ ಬಾಳನ್ನು ಉಭಯರೂ ನಿಭಾಯಿಸುತ್ತಿದ್ದಾರೆ. ಇಬ್ಬರೂ ಅಮಾನ ದುಃಖಿಗಳೆ. ವಾಸ್ತವವಾಗಿ ಈ ಇಬ್ಬರೂ ಸಾಹಿತ್ಯಾಭಿರುಚಿಯುಳ್ಳವರು. ತಾವು ಬರೆದದ್ದು ಪತ್ರಿಕೆಯಲ್ಲಿ ಬಂದಾಗ ಬಹಳಷ್ಟು ಆನಂದಭರಿತರಾಗುತಿದ್ದವರು. ಇಂದು ಇಬ್ಬರೂ ಸಮಾನ ದುಃಖಿಗಳಾಗಿದ್ದಾರೆ. ಇದು ಕೆಂಪೇಗೌಡರು ಉತ್ತಮ ಕಥೆ. ಇಲ್ಲಿ ದೇವರನ್ನು ಪೂಜಿಸಿ ಹೊಟ್ಟೆ ದುಂಬಿಸುತ್ತಿರುವವರನ್ನು ವ್ಯಂಗ್ಯವಾಗಿ ಟೀಕಿಸಿದ್ದಾರೆ. ದೇವರನ್ನು ಬಂಡವಾಳ ಮಾಡಿಕೊಂಡಿರುವ ಪೂಜಾರಿಯನ್ನು ಕುಹಕಿಸಿದ್ದಾರೆ.

ಕ್ರೌರ್ಯ ಕೆಂಪೇಗೌಡರ ಸಣ್ಣಕಥೆಗಳಲ್ಲೇ ದೊಡ್ಡಕಥೆ. ಇದೊಂದು ಹೆಣ್ಣು ಹೆತ್ತ ಬಡ ರೈತನ ಬಾಳಿನ ಗೋಳು. ಸಾಮಾಜಿಕ ಪಿಡುಗು ಆಗಿರುವ ವರದಕ್ಷಿಣೆಯೇ ಇಲ್ಲಿನ ದುರಂತಕ್ಕೆ ಕಾರಣವಾಗಿದೆ. ಮುದ್ದಪ್ಪ ಬಡರೈತ. ಮಳೆಯಿಲ್ಲದೆ ಬೆಳೆ ಒಣಗಿ ನಿಂತಿದೆ ಅದನ್ನು ನೋಡಿ ಹತಾಶನಾಗಿ ಆಕಾಶವನ್ನು ದಿಟ್ಟಿಸಿ ನಿರಾಶೆಯಿಂದ ಕಾಲ ನೂಕುತಿದ್ದಾನೆ. ಪಡೆದ ಸಾಲದ ಬಡ್ಡಿಯನ್ನು ತೀರಿಸಲಾಗದೆ ಒದ್ದಾಡುತಿದ್ದಾನೆ. ಮನೆಯ ಒಡವೆ ಗಿರವಿ ಅಂಗಡಿಯಲ್ಲಿದೆ. ಅಡಿಗೆಗೆ ಬೇಕಾದ ಒಂದು ಸಾಮಾನು ಮನೆಯಲಿಲ್ಲ. ಮನೆಗೆ ಇಂಥಹ ಸಮಯದಲ್ಲೇ ವಕ್ಕರಿಸಿಕೊಂಡ ಅಳಿಯ. ಹಣಕ್ಕಾಗಿ ಬಂದ ಅಳಿಯ, ಮಗಳು ಮಂಜುಳ ಅಪ್ಪನನ್ನು ಹಣ ಕೇಳಿದಾಗ, ಅಪ್ಪ ಸಂಕಟವನ್ನು ತೋಡಿಕೊಂಡನು. ಅಳಿಯ ಮುನಿಸಿಕೊಂಡು ತನ್ನ ಹೆಂಡತಿಯನ್ನು ಕರೆದುಕೊಂಡು ಹೋದನು. ಮುದ್ದಪ್ಪನ ಜೀಗತಿ ಪರಿಪರಿಯಾಗಿ ಶಿಕ್ಷೆಗಳನ್ನು ಸೊಸೆಗೆ ನೀಡುತ್ತಾಳೆ. ಮಾನಸಿಕ ಕಿರುಕುಳ, ದೈಹಿಕ ಹಲ್ಲೆ ಗಂಡನಿಂದ ಉಂಟಾಗುತ್ತದೆ. ಈ ನಡುವೆ ಪರಸ್ತ್ರೀ ಸಂಬಂಧವೂ ಉಂಟಾಗುತ್ತದೆ. ಸೊಸೆಯನ್ನು ಕೂಲಿಗೂ ಕಳಿಸುವರು. ಈ ಎಲ್ಲಕ್ಕೂ ಕಾರಣ ಮುದ್ದಪ್ಪ ಹಣ ಕೊಡದಿದ್ದುದು. ಅಂತಿಮವಾಗಿ ಮಂಜುಳ ಬಟ್ಟೆ ಒಗೆಯಲು ಬಾವಿಗೆ ಹೋಗುವಳು. ಆಕೆಯ ಗಂಡ ಕಾಳಪ್ಪ ಹಿಂದಿನಿಂದ ಬಂದು ಆಕೆಯನ್ನು ಬಾವಿಗೆ ತಳ್ಳುವನು.

ಇತ್ತ ಮುದ್ದಪ್ಪನನ್ನ ಅವನ ಊರಿನವರು ಬಲವಂತಮಾಡಿ ನಾಟಕಕ್ಕೆ ಸೇರಿಸಿಕೊಂಡರು, ಧರ್ಮರಾಯನ ಪಾತ್ರವನ್ನು ನೀಡಿದರು. ಅಂದು ನಾಟಕ. ಅಭಿಮನ್ಯುವಿನ ಮರಣ. ದುಃಖಿತರಾದ

ಪಾಂಡವರು. ಧರ್ಮರಾಯನ ಶೋಕಾವಳಿ ಇದರೊಂದಿಗೆ ಮುದ್ದಪ್ಪನ ನಾಟಕ ಮುಗಿದಾಗ. ತನ್ನ ಮಗಳು ಬಾವಿಗೆ ಕಾಲುಜಾರಿ ಬಿದ್ದು ಆತ್ಮಹತ್ಯೆ ಮಾಡಿಕೊಂಡ ಸುದ್ದಿ.

ಈ ಸಣ್ಣಕಥೆ ದುರಂತದಲ್ಲಿ ಮುಕ್ತಾಯವಾಗಿದೆ. ಕಥಾಸನ್ನಿವೇಶಗಳು ಅತ್ಯುತ್ತಮ ತಂತ್ರದಿಂದ ಕೂಡಿದೆ. ಕಥೆಯಲ್ಲಿ ನಾಟಕದ ಅಂತರ್ ಪ್ರವೇಶ ತಂದು ಧರ್ಮರಾಯನ ದುಃಖಕ್ಕೆ ಮುದ್ದಪ್ಪನ ದುಃಖವನ್ನು ಐಕ್ಯಗೊಳಿಸಿದುದು ಉತ್ತಮ ತಂತ್ರವಾಗಿದೆ. ಸಾಮಾಜಿಕ ಸಮಸ್ಯೆಯಾದ ವರದಕ್ಷಿಣೆಯನ್ನು ವಸ್ತುವಾಗಿ ತೆಗೆದುಕೊಂಡು ಅದರಿಂದಾಗುವ ಅನಾಹುತವನ್ನು ಮನಮುಟ್ಟುವಂತೆ ರಚಿಸಿದ್ದಾರೆ. 'ಹೆಣ್ಣಿಗೆ ಹೆಣ್ಣೇ ವೈರಿ' ಎಂಬ ಮಾತಿಗೆ ಇಲ್ಲಿ ನಿದರ್ಶನವಿದೆ. ಪುರುಷನ ಕ್ರೌರ್ಯ ಇಲ್ಲಿ ನರ್ತನ ಮಾಡಿದೆ. ಮುದ್ದಪ್ಪನ ಗೋಳು ಹೆಣ್ಣುಹೆತ್ತ ಎಲ್ಲ ತಂದೆಯರ ಗೋಳಾಗಿದೆ.

ಒಟ್ಟಾರೆ ಶಿವಳ್ಳಿ ಕೆಂಪೇಗೌಡರು ಇಷ್ಟೊಂದು ಉತ್ತಮ ಸಣ್ಣಕಥೆಗಳನ್ನು ರಚಿಸಿದ್ದಾಗ್ಯೂ ಅಲಕ್ಷಿತರಾಗಿದ್ದಾರೆ. ಇವರು ೨೨ ಸಣ್ಣ ಕಥೆಗಳನ್ನು ರಚಿಸಿದ್ದಾರೆ. ಬಹುತೇಕ ವೈವಿಧ್ಯ ವಸ್ತುವನ್ನು ಈ ಕಥೆಗಳು ಒಳಗೊಂಡಿವೆ. ದಲಿತರ ಬದುಕನ್ನು ಸಹಜವಾಗಿ ಅನಾವರಣಗೊಳಿಸಿದ 'ಚಮ್ಮಾವುಗೆ', 'ನಾವು ಬತ್ತೀವಿ ನಿಲ್ಸಯ್ಯೋ' ಅತ್ಯುತ್ತಮವಾದ ದಲಿತ ಕಥೆಗಳಾಗಿ ನಿಲ್ಲುತ್ತವೆ. ದಲಿತನ ಸ್ವಜವಾದ ಅನುಭವ ಇಲ್ಲದ ಶಿವಳ್ಳಿಯವರು, ದಲಿತರ ನಡುವೆಯೇ ಬಾಳಿದವರಾದುದರಿಂದ ಅವರ ಕಥೆಗಳು ಸಹಜ ಘಟನೆಗಳಿಂದ ಕೂಡಿದವುಗಳಾಗಿವೆ. ಬಂಡಾಯ, ಸ್ತ್ರೀ ಸಂವೇದನೆ, ಸಾಮಾಜಿಕ ಕಳಕಳಿ ಇವರ ಹಲವು ಕಥೆಗಳ ವಸ್ತುವಾಗಿದೆ. ಇದರೊಂದಿಗೆ ಬರಹಗಾರರ ಬದುಕಿನ ಆರ್ಥಿಕ ಸಂಕಷ್ಟಗಳು, ಕಲಾವಿದ, ನಾಟಕದ ಮೇಷ್ಟ್ರು ಹಾಗೂ ಪತ್ರಿಕೋದ್ಯಮಿಗಳ ಬದುಕಿನ ಸಂಕಷ್ಟಗಳನ್ನು ಅತ್ಯುತ್ತಮವಾಗಿ ಚಿತ್ರಿಸಿದ್ದಾರೆ. ತಮ್ಮ ಬದುಕನ್ನು ಕಲಾರಂಗಕ್ಕೆ ಮುಡುಪಾಗಿಟ್ಟು ಬಾಳಿದವರ ಬವಣೆಗಳನ್ನು ಇಲ್ಲಿ ಲೇಖಕರು ಬಹಳ ಸಹಜವಾಗಿ ಹಿಡಿಸಿದ್ದಾರೆ. ಅಲ್ಲದೆ ವ್ಯಸನಿಗಳಿಗೆ ದಾಸನಾದವನಿಗೆ ಬದುಕಿನಲ್ಲಿ ದುಃಖ ಖಂಡಿತ ಎಂಬುದು ಇವರ ಕೆಲ ಕಥೆಗಳ ತಿರುಳಾಗಿದೆ. ಈ ಮೂಲಕ ಸಮಾಜದ ಈ ಎಲ್ಲಾ ಸಂಕಷ್ಟಗಳನ್ನು ಸಾಹಿತ್ಯದ ಮೂಲಕ ಚಿತ್ರಿಸಿ ಉಂಟಾಗಬೇಕಾದ ಪರಿವರ್ತನೆಯನ್ನು ಸಂಕೇತಿಸಿದ್ದಾರೆ. ಶಿವಳ್ಳಿ ಕೆಂಪೇಗೌಡರು ಆಧುನಿಕ ಕನ್ನಡ ಸಾಹಿತ್ಯದ ಒಬ್ಬ ಉತ್ತಮ ಸಣ್ಣ ಕಥೆಗಾರರಾಗಿದ್ದಾರೆ.

ಅಡಿ ಟಿಪ್ಪಣಿ :-

೧. ಕನ್ನಡ ಕಥನ ಸಾಹಿತ್ಯ : ಸಣ್ಣಕಥೆ. ಜಿ.ಎಸ್.ಆಮೂರ, ಪುಟ ೨.

೨. ಹೊಸಗನ್ನಡ ಸಾಹಿತ್ಯ ಚರಿತ್ರೆ : ಎಲ್ ಎಸ್ ಶೇಷಗಿರಿರಾವ್, ಪುಟ ೧೮೫.

೩. ಸಾಹಿತ್ಯ ವಾರ್ಷಿಕ ೧೯೭೫, ಬೆಂಗಳೂರು ವಿ ವಿ, ಬರಗೂರು ರಾಮಚಂದ್ರಪ್ಪ.

೪. ಗೀಜಗನಗೂಡು ಪುಟ ೧೬೭.

೫. ಅಲ್ಲೆ ಪುಟ ೨೯.

೬. ಅಲ್ಲೆ ಪಟ ೧೬೭.

೭. ಅಲ್ಲಿ ಪುಟ ೪೧.

೮. ಅಲ್ಲೇ ಪುಟ ೧೬೬.

೯. ಅಲ್ಲೇ ಪುಟ ೫೧.

೧೦.ಅಲ್ಲೇ ಪುಟ ೭೪.

೧೧. ಅಲ್ಲೇ ೧೬೭.

ಅಧ್ಯಾಯ – ೫

ಕೆಂಪೇಗೌಡರ ಸಾಹಿತ್ಯದ ಭಾಷೆ ಮತ್ತು ಅಭಿವ್ಯಕ್ತಿ.

ಕೆಂಪೇಗೌಡರದು ಹಳ್ಳಿ ಭಾಷೆ. ಓದುಗರನ್ನು ಗಮನದಲ್ಲಿ ಇಟ್ಟುಕೊಂಡಿದ್ದರೂ ಸಾರ್ವತ್ರಿಕ ಮನ್ನಣೆಗೋಸ್ಕರ ಶಿಷ್ಟರೂಪದಲ್ಲಿ ಬರೆದಿಲ್ಲ. ಕವನಗಳಲ್ಲಿ ಅಲ್ಲಲ್ಲಿ ಶಿಷ್ಟರೂಪ ವಿರಳವಾಗಿದೆ. ಆದರೆ ಅವರ ಸಹಜಗುಣ ಗ್ರಾಮ್ಯಭಾಷೆ. ಅದೂ ಮಂಡ್ಯ ಜಿಲ್ಲೆಯ ಗ್ರಾಮ್ಯ ಭಾಷೆ. ಅಪರೂಪದ ಸೊಗಸುಗಳನ್ನು ಚಿತ್ರಿಸುವ ನುಡಿಗಟ್ಟುಗಳು, ಗಾದೆಮಾತುಗಳು ಇವರ ಬರಹದಲ್ಲಿ ಲೀಲಾಜಾಲವಾಗಿ ಮೂಡಿಬಂದಿದೆ. ಕವನಗಳಲ್ಲಿ ಮತ್ತು ಸಣ್ಣ ಕಥೆಗಳಲ್ಲಿ ಬಳಸಿದ ಭಾಷೆ ಅಪ್ಪಟ ಮಂಡ್ಯದ ನೆಲದ ಸೊಗಡನ್ನು, ಭಾಷೆಯ ಬಳುಕುಗಳನ್ನು ನಮ್ಮ ಮುಂದೆ ಚಿತ್ತಾರ ಮೂಡಿಸಿದಂತಿವೆ. ಈ ಕಾರಣಗಳಿಂದಾಗಿ ಮಂಡ್ಯ ಜಿಲ್ಲೆಯ ವಿಶೇಷ ಬರಹಗಾರರೆನಿಸಿಕೊಂಡಿದ್ದಾರೆ. ಪು.ತಿ.ನ, ಕೆ.ಎಸ್.ನ. ಬೆಸಗರಹಳ್ಳಿ ರಾಮಣ್ಣ, ಸು.ಜ.ನಾರಾಯಣಶೆಟ್ಟರು. ಎ.ಎನ್.ಮೂರ್ತಿರಾಯರುಗಳಿಗಿಂತ ಭಿನ್ನ ನೆಲೆಯಲ್ಲಿ ಕೆಂಪೇಗೌಡರ ಬರಹಗಳನ್ನು ವಿಶ್ಲೇಷಿಸಬೇಕು. ಅಪ್ಪಟ ಗ್ರಾಮೀಣ ಪರಿಸರದ ಮಂಡ್ಯ ಭಾಷೆ ಗಡಸು ಸ್ವಭಾವದಿಂದ ಕೂಡಿದೆ. ಅನ್ಯಭಾಷೆಯ ಪ್ರಭಾವ ವಿರಳ. ಹಾಗೆಂದು ಮಡಿಯೇನು ಇಲ್ಲ. ಮಂಡ್ಯದ ಕನ್ನಡ ಪ್ರಾದೇಶಿಕ ಭಾಷೆಗಳ ಗುಂಪಿನಲ್ಲಿ ಮೈಸೂರು ಕನ್ನಡದ ಗುಂಪಿಗೆ ಸೇರಿದೆ. ಆದರೆ ಮೈಸೂರು ಕನ್ನಡಕ್ಕಿಂತ ಅನೇಕ ಅಂಶಗಳಲ್ಲಿ ಭಿನ್ನತೆ ಈ ನೆಲದ ನುಡಿಗಿದೆ.

ಕೆಂಪೇಗೌಡರ ಕವನಗಳಲ್ಲಿ ವ್ಯವಸಾಯ ಸಲಕರಣೆಗಳ ಹೆಸರನ್ನು ಸೂಚಿಸುವ ಏಷ್ಟೋಪದಗಳು ಗುಣಾವಾಚಕಗಳಾಗಿ ನಿಲ್ಲುವುದುಂಟು. ಮತ್ತು ಗೌಡರೇ ರೂಪಿಸಿಕೊಂಡಿರುವ ಕೆಲನುಡಿಗಟ್ಟುಗಳು ಇವರ ಬರಹಕ್ಕೆ ಮತ್ತಷ್ಟು ಸೊಗಸನ್ನು ತಂದಿದೆ. “ಸಿಡಿದು ಚೂರಾಗುವ ತಲೆಗೆ ಕಡೆ ನೀರಿನ ಬಯಕೆ” ಎಂಬ ಪಾದವು ಸಾವನ್ನು ಅಪೇಕ್ಷಿಸುತ್ತಿರುವುದನ್ನು ಸೂಚಿಸುತ್ತದೆ. ‘ಗುಳ’, ‘ಮೇಳಿಹಾಲು’, ‘ಮಣ್ಣೊಕ್ಕಲು’, ‘ಅನ್ನೇಕಾರ’, ಇಂತಹ ಅನೇಕ ಪದಗಳ ವಿಶೇಷ ಬಳಕೆ ಗೌಡರ ಭಾಷಾಬಳಕೆಯಲ್ಲಿ ಸೊಗಸನ್ನು, ಸಹಜಕಾಂತಿಯನ್ನು ತಂದಿದೆ. ಎಲ್ಲೂ ಯಾಂತ್ರಿಕತೆಗೆ ಒಳಗಾಗದ ಇವರ ಬರಹ ಕಾಂತೀಯಗುಣ ಮತ್ತು ಸಹಜತೆಯಿಂದ ಕೂಡಿದೆ ‘ಆಳು’ ಕಥೆಯಲ್ಲಿನ ಒಂದು ವಾಕ್ಯ ಹೀಗಿದೆ “ಅಯ್ಯ ಶಂಕ್ರುಮಾವಂಗೆ ಈ ಹಸೀಸ್ತುಪ್ಪ ಕೊಟ್ಬುಡು, ಅವ್ವ ಕೊಟ್ಲು” ಎಂಬ ರಂಗಪ್ಪನ ಮೊಮ್ಮಗಳ ಮಾತು ಪ್ರತಿ ಮಂಡ್ಯ ಹಳ್ಳಿಯ ಮಗುವಿನ ಸಹಜ ಸಂಭಾಷಣೆಯಂತಿದೆ. ಇನ್ನು ‘ನಾವು ಬತ್ತೀವಿ ನಿಲ್ಲಯ್ಯೋ’ ಕಥೆಯಲ್ಲಿ ದಲಿತ ಹೆಂಗಸರು ಮಾದೇವಿಯನ್ನು ಸಮಾಧಾನ ಪಡಿಸಿ. ಸವರ್ಣಿಯರನ್ನು ಶಪಿಸುವುದು ಸಹಜವಾಗಿ ಮೂಡಿಬಂದಿದೆ. “ಅರೀದ್ಮಗ ಕಂಡಿದಾದ ನಾನಿಂತ ಜಾತಿ ವಳೀಕೆ ಹೋಗಬ್ಯಾಡ್ದು ಅಂತ. ಹಿಂಗೆ ಮೊಕ ಮುಸ್ಡಿ ಕೆಚ್ಚೋಗುವಂಗೆ ತಳ್ಳವ್ನಲ್ಲ, ಅವನ ಕೈಗೆ ಕನ್ನಾಗರ ಕಡಿಯ. ಅವನ ಕಣ್ಣೊಂಬೆ ನೆಟ್ಟಾಗ. ನಮ್ಮಕ್ಕಳಿಗೆ ಬಂದಂತೆ ಕಷ್ಟ ಅವರ ಮಕ್ಕಳಿಗೂ ಒಂದಿನ ಬರದೆ ಹೋದಾತಾ” ಎಂದು ನಡುವಯಸ್ಸಿನ ಹೆಂಗಸೊಬ್ಬಳು ನೂರನೂರನೆ ನಟಿಕೆ ಮುರಿದಳು” ಶಪಿಸುವ ಹೆಂಗಸಿನ ಭಾಷೆಯ ನಿರೂಪಣೆ ಆಕರ್ಷಕವಾಗಿದೆ. ಇನ್ನು ‘ಎಳನೀರು’ ಕಥೆಯಲ್ಲಿ ಸುಮಿತ್ರಾ ತನ್ನ ಕುಡುಕ, ಇಸ್ಪೀಟು ಆಡುವ ಗಂಡನನ್ನು ತರಾಟೆಗೆ ತೆಗೆದುಕೊಂಡಿರುವುದು ಗಟವಾಣಿ ಹೆಂಗಸಿನ ಬೈಗುಳಗಳಂತಿದೆ. “ಇವನ್ಗೆ ದೊಡ್ರೋಗ ತಗ್ಲ, ಬಾಯ್ಗೆ ನೆಚ್ಚಿರ ಮುತ್ತ” ಎಂಬುದು ಜೊತೆಗೆ

"ಮನಸ್ಸ ಕುಲವಾ ನೀನು? ಕಂಡಿಪ್ಪಿ ಕನ ಹೋಗು ತಿರ್ಗ್ಮೊಕ ಹೊತ್ಕೊಂಡು ಮಾತಾಡ್‌ಬ್ಯಾಡ" ಎಂಬ ಮಾತು ಕಥೆಯಲ್ಲಿ ಸೊಗಸನ್ನು ಲೇಪಿಸಿದಂತಿದೆ.

ಮಂಡ್ಯಜಿಲ್ಲೆ ಜನಪದ ಕಲೆಗಳ ಬೀಡು. ಜನಪದ ಸಾಹಿತ್ಯದ ವೇದವಂತಿರುವ ಗಾದೆ ಮತ್ತು ಒಗಟುಗಳನ್ನು ಈ ಜಿಲ್ಲೆಯ ಜನಪದರು ಬಹಳವಾಗಿ ಬಳಸುತ್ತಾರೆ. ಶಿವಳ್ಳಿಯವರ ಕಥೆಗಳಲ್ಲಿ ಅಂತಹ ಜಾಣ್ನುಡಿ ಮತ್ತು ಗಾದೆಗಳ ಬಳಕೆ ಹೇರಳವಾಗಿದೆ. "ಜೇಬು ಖಾಲಿಯಾಗಿ ಎದೆಗೂಡು ನಗಾರಿಯಾಯಿತು". ಎಂಬುದು ಹೃದಯ ಬಡಿತದ ವೇಗವನ್ನು ಸೂಚಿಸುವುದಾಗಿದೆ.. "ಕರೆಯದ ಹಸು ಕಟ್ಕೊಂಡು ಯಾರು ಹುಲ್ಲಾಕ್ತಾರೆ". ತರಗು ತಿನ್ನೋರ ಮನೆಗೆ ಹಪ್ಪಳಕ್ಕೆ ಬಂದಂಗಾಯಿತು". "ಜೀಸಲಾರದ ಮುಕ್ಕ ಬಾಯಿಗೆ ಬಿತ್ತು". "ಅಡೀಲಿ ಹತ್ತಿ ಮೇಲೆ ಸೀಯ್ತಿದ್ರೆ". "ಉಂಡು ಉಲಿಯೋರ ನೋಡಬಹುದು. ಅಷ್ಟು ಅಲಿಯೋರ ನೋಡಕ್ಕಾಗದು". "ಆಕಾಶ ನೋಡೋಕೆ ನೂಕು ನುಗ್ಗಲು ಯಾಕೆ". "ಈ ಊರಲ್ಲಿ ಪುಸ್ತಕ ಸಂಸ್ಕೃತಿ ಬೆಳೆಯೋದು. ಭಾರತ ಪಾಕಿಸ್ತಾನ ಮಿತ್ರರಾಗೋದು ಒಂದೆ". ಎಂಬಂತಹ ಅನೇಕ ಬಳಕೆಗಳನ್ನು ಗುರುತಿಸಬಹುದಾಗಿದೆ.

ಅವರ ಮೂವತ್ತಾಲ್ಕು ಕವನಗಳಲ್ಲಿ. ಇಪ್ಪತ್ತೆರಡು ಕಥೆಗಳಲ್ಲಿ ಒಂದಲ್ಲಾ ಒಂದುಕಡೆ ಮಂಡ್ಯ ಜನರ ನಿತ್ಯ ಬಳಕೆಯ ಭಾಷೆಯನ್ನು ಬಳಸಿದ್ದಾರೆ. ಅಲ್ಲದೆ ರೈತಾಪಿವರ್ಗದ ನುಡಿಗಟ್ಟುಗಳು, ವ್ಯವಸಾಯ ಕ್ಷೇತ್ರದ ಗ್ರಾಮ್ಯ ಪರಿಭಾಷೆಗಳನ್ನು ಹೇರಳವಾಗಿ ಗುರುತಿಸಬಹುದು. ಆದ್ದರಿಂದಲೇ ಪ್ರೊ॥ಶಿವರಾಮು ಕಾಡನಕುಪ್ಪೆ ಯವರು "ಶಿವಳ್ಳಿ ಕೆಂಪೇಗೌಡರ ಕೃತಿಗಳು ಈ ಮಣ್ಣಿನ ಕಂಪನ್ನು ಸೂಸುತ್ತವೆ. ಈ ನೆಲದ ಜನರ ಬವಣೆ ಪಾತ್ರರ್ರ, ಅಂತರ್ಯಗಳು ಶಿವಳ್ಳಿ ಕೆಂಪೇಗೌಡರ ಲೇಖನಿಯಲ್ಲಿ ಅದ್ಭುತವಾಗಿ ಮೂಡಿ ಬಂದಿದೆ". ಎಂದಿದ್ದಾರೆ.

ಮನಮುಟ್ಟುವ ಸಂಭಾಷಣೆಗಳು ಇವರ ಅಭಿವ್ಯಕ್ತಿಯ ವಿಶೇಷಗಳಾಗಿವೆ "ಪೆಟ್ಟಿಗೆ ಅಂಗಡಿ ಶೆಟ್ಟಿಗೆ ದಮ್ಮಯ್ಯ ಗುಡ್ಡೆಹಾಕಿ ಕಾಫಿಪುಡಿ ಕಡತಂದು ಹೆಂಡತಿ ಕೈಗೆ ಕೊಟ್ಟ. ಯಾರಾರ ಹೆಚ್ಚುಗಟ್ಲೆ ಮಾಡಿಯೇನು? ಅಂದಾಗ ಪುಟ್ಟತಾಯಕ್ಕ "ಬಾಡು ಕಡಿಸ್ಕಾಬನ್ನಿ" ಎಂದಳು. ಮುದ್ದಪ್ಪ "ತೆಂಬಿಟ್ಟಾಗಲ್ವ" ಅಂದನು. ಪುಟ್ಟತಾಯಕ್ಕ ಹಿಂದೊಂದ್ಸಲ ಅಳಿಮಯ್ಯ ಬಂದ್‌ಬಂದಾಗೆಲ್ಲಾ ಅದೇಯ ಉಜ್ಜೋದು ಉಂಡೆ ಕಟ್ಟೋದು ಉಜ್ಜೋದು ಉಂಡೆ ಕಟ್ಟೋದಂತ ಹೇಡ್ತಿಜೊತೆಲೇಲ್ಕಂಡು ಗೇಲಿ ಮಾಡಿದ್ರಂತೆ" ಎಂದಾಗ ಬರಿದಾದ ಮನೆ ಕೋಳಿಗಳು ನೆನಪಾಗಿ ಮೈ ಉರಿದು ಅನ್ನೋರ್ಗೇನು? ಎಂದು ಪಟಗುಟ್ಟಿ ಜೀದಿಗಿಳಿದ" ಎಂಬ ನವಿರಾದ ಸಹಜ ಅಭಿವ್ಯಕ್ತಿ ಇಲ್ಲಿದೆ.

ಕೆಂಪೇಗೌಡರ ಶೈಲಿಯನ್ನು ಕುರಿತಂತೆ ಒಂದೆರಡು ಮಾತುಗಳನ್ನು ಪ್ರಸ್ತಾಪಿಸಬೇಕಾಗಿದೆ. ಕೆರೂರರ ಸಣ್ಣಕಥೆಯ ತಂತ್ರ ಮರಾಠಿಯಲ್ಲಿಯ 'ಸಂಪೂರ್ಣಕತೆ'ಯ ತಂತ್ರದ ಅನುಕರಣವಾಗಿದೆ. ಹತ್ತೊಂಭತ್ತನೆಯ ಶತಮಾನದ ಕೊನೆಯ ಭಾಗದಿಂದ ಇಪ್ಪತ್ತನೆಯ ಶತಮಾನದ ಪ್ರಾರಂಭದವರೆಗೆ ಇಂಗ್ಲೀಷ್ ಸಾಹಿತ್ಯದಲ್ಲಿ ಇಂತಹ ಕಥೆಗಳನ್ನು ಕಾಣಬಹುದು. ಅನಿರೀಕ್ಷಿತವಾಗಿ ಮೈತುಂಬಿ ಜೆಳೆದು ಬರುವುದೇ ಇದರ ತಂತ್ರವಾಗಿದೆ. ಆಧುನಿಕ ಸಣ್ಣಕಥೆಯ 'ಪಳಚ್ಚನೆ' ಮಿಂಚುವ ಅನಿರೀಕ್ಷಿತ ಸೌಂದರ್ಯ ಕೆಲವು ಕಡೆ ಇದೆ. ಮತ್ತೆ ಅನೇಕ ಕಥೆಗಳಲ್ಲಿ ದಿಢೀರ್ ಆರಂಭ ಮತ್ತು ಅನಿರೀಕ್ಷಿತ ಮುಕ್ತಾಯಗಳಿವೆ. ಈ ಅನಿರೀಕ್ಷಿತ ಮುಕ್ತಾಯ ಮತ್ತು ಆರಂಭ ಶಿವಳ್ಳಿಯವರ ಅನೇಕ ಕಥೆಗಳಲ್ಲಿದೆ. ದಿಢೀರ್ ಆರಂಭ ಓದುಗನ ಕುತೂಹಲಕ್ಕೆ ನಾಂದಿ ಹಾಡಿದರೆ. ದಿಢೀರ್ ಮುಕ್ತಾಯ ಅಥವಾ ಅನಿರೀಕ್ಷಿತ ಮುಕ್ತಾಯ ಕಥೆಯ ಮುಂದಿನ ನಡೆಯ ಪಕಳಿಗಳು ಓದುಗನ ವಿವೇಚನೆಗೆ ಬಿಟ್ಟಿರುತ್ತದೆ.

ಗೌಡರ ಕವನಗಳ ಭಾಷೆಯೂ ಅತ್ಯಂತ ಸರಳವಾದವು. ತಂತ್ರ ಮತ್ತು ರಚನೆಯಲ್ಲಿಯೂ ಸಂಪೂರ್ಣ ಸ್ವಾತಂತ್ರ್ಯ ಘೋಷಿಸಿಕೊಂಡಿವೆ. ಅಂದರೆ ಯಾವುದೇ ಛಂದೋನಿಯಮಗಳಿಗೆ ಒಳಗಾಗದೆ ನಿರ್ಬಂಧ ರಹಿತವಾಗಿ ಕವಿತೆಗಳನ್ನು ರಚಿಸಿದ್ದಾರೆ. ಮುವತ್ತ ನಾಲ್ಕು ಕವಿತೆಗಳು ಈ ಮಾತಿಗೆ ಬದ್ಧವಾಗಿವೆ. ಸರಳತೆಯೇ ಇವುಗಳ ಬಹುಮುಖ್ಯ ಗುಣವಾಗಿದೆ.

ಉಪಸಂಹಾರ

ಶಿವಳ್ಳಿ ಕೆಂಪೇಗೌಡರ 'ಬದುಕು ಮತ್ತು ಬರಹ' ಕುರಿತ ಕಿರು ಸಂಶೋಧನ ಪ್ರಬಂಧದ ಫಲಿತಗಳನ್ನು ಉಲ್ಲೇಖಿಸುವ ಸಂದರ್ಭವಿದು. ಗ್ರಾಮೀಣ ಪ್ರದೇಶದ ಈ ಬರಹಗಾರ ಒಬ್ಬ ಅಲಕ್ಷಿತ ಉತ್ತಮ ಬರಹಗಾರ. ಆರ್ಥಿಕ ಸಂಕಷ್ಟದಿಂದ ನಲುಗಿ ಹೋಗಿದ್ದ ಕಾರಣ ಮತ್ತಷ್ಟು ಸಾಹಿತ್ಯ ಕೃತಿಗಳು ಬರದಾಗಿವೆ ಎನ್ನಬಹುದು. ಇವರ ಬಹುತೇಕ ಕಥೆ, ಕವನಗಳು 'ಸ್ವಗತ'. ಅಂದರೆ ಸ್ವಾನುಭವದ ಬರಹಗಳು. ಪುರಾಣ. ಇತಿಹಾಸ. ಕಾಲ್ಪನಿಕ ಕಥೆಗಳನ್ನು ಶ್ರೇಷ್ಠವಾಗಿ ಬರೆದವರಿಗಿಂತ. ಸಾಧಾರಣವಾಗಿ ಗ್ರಾಮೀಣ ನೆಲೆಯನ್ನು ಬರೆದ ಗೌಡರೇ ಶ್ರೇಷ್ಠ. ತಮ್ಮ ಬರಹಗಳ ಮೂಲಕ ತಮ್ಮ ಕಾಲದ ಸಾಮಾಜಿಕ ಆರ್ಥಿಕ ಜೀವನದ ಒಳಿತು ಕೆಡಕುಗಳಿಗೆ ಕನ್ನಡಿ ಹಿಡಿಯುವುದು ಅವರ ಸಾಹಿತ್ಯದ ಮುಖ್ಯ ಉದ್ದೇಶವಾಗಿತ್ತು. ಇವಲ್ಲದೆ ಮತ್ತೆ ಕೆಲವು ಕಥೆಗಳ ಮೂಲಕ ವಿಶಿಷ್ಟವಾದ ನೀತಿಬೋಧೆಯನ್ನು ಉಂಟುಮಾಡಿದ್ದಾರೆ. ಅನೇಕ ಕವನಗಳಲ್ಲಿ ಸಾಮಾಜಿಕ ಅವ್ಯವಸ್ಥೆ. ಶೋಷಣೆಯ ವಿರುದ್ಧ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ರಾಜಕೀಯ ಜೀವನದ ಅಂತರಂಗವನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. 'ಕುಹೂ.. ಕುಹೂ..' ಇನಂತಹ ಕತೆಗಳು ತೀವ್ರವಾದ ಭಾವನಾವಶತೆಯ ಮೂಲಕ ಕೃತ್ರಿಮವಾಗಿದೆ. ಮತ್ತು ಬಡತನದ ವಿಷಮತೆ ರಣರಣಿಸುವ ಬಿಸಿಲಿನಷ್ಟು ದುಃಸಹವಾಗಿದೆ. ದಲಿತರ ಬದುಕನ್ನು ಅನುಭವಿಸಿದ ಲೇಖಕನ ಎತ್ತರಕ್ಕೆ ಕೆಂಪೇಗೌಡರ ದಲಿತ ಬರಹಗಳು ನಿಲ್ಲುತ್ತವೆ. ಇವುಗಳೊಂದಿಗೆ ಕೆಂಪೇಗೌಡರ ಮುಖ್ಯ ಭೂಮಿಕೆ ಪತ್ರಿಕೋದ್ಯಮ. ರೈತರ ಬದುಕಿಗೆ ಪ್ರಥಮ ಆದ್ಯತೆ ನೀಡಿರುವ ಇವರ ಬರಹಗಳಲ್ಲಿ ಕವಿ, ಕಲಾವಿದ, ಪತ್ರಿಕೋದ್ಯಮಿಗೆ ಎರಡನೇ ಸ್ಥಾನವನ್ನು ಕಲ್ಪಿಸಿದ್ದಾರೆ. ಉಳಿದಂತೆ ದಲಿತ ಬರಹಗಳು, ಸ್ತ್ರೀಸಂವೇದನೆ. ಬಂಡಾಯ ಪ್ರಜ್ಞೆಗಳನ್ನು ಗುರುತಿಸಬಹುದು. ಒಟ್ಟಾರೆ ಇವರ ಬರಹಗಳ ಕೇಂದ್ರ ಗ್ರಾಮೀಣನೆಲೆ. ಇದರೊಂದಿಗೆ ಇವರ ಬಹು ಮುಖ್ಯವಾದ ಮಾನವತಾವಾದವಾಗಿದೆ, ಹೆಣ್ಣಿಗೆ ವಿದ್ಯಾಭ್ಯಾಸವನ್ನು ನೀಡದ ಪರಂಪರೆಯನ್ನು ಕಠಿಣವಾಗಿ ಟೀಕಿಸಿದ್ದಾರೆ. ದೇವರ ಹೆಸರಿನಲ್ಲಿ ಮಾಡುವ ಹಗಲು ದರೋಡೆಯನ್ನು ಖಂಡಿಸಿದ ನಾಸ್ತಿಕನಂತೆ ಕಾಣಬರುತ್ತಾರೆ. ಮತ್ತೊಂದು ಮುಖ್ಯವಾಗಿ ಪ್ರಸ್ತಾಪಿಸಬೇಕದ ಅಂಶವೆಂದರೆ ಗೌಡರ ಭಾಷೆ ಮತ್ತು ಅಭಿವ್ಯಕ್ತಿ. ಇವೆರಡು ಕಥೆಗಳು ಅಪೇಕ್ಷಿಸುವಂತೆ ಔಚಿತ್ಯಪೂರ್ಣವಾಗಿ ಮೂಡಿ ಬಂದಿವೆ. ಶಿವಳ್ಳಿಯವರು ರಚಿಸಿರುವ ಇದಿಷ್ಟು ಸಾಹಿತ್ಯವು ವಾಸ್ತವಕ್ಕೆ ಹತ್ತಿರವಾಗಿದೆ. ಪ್ರಸ್ತುತ ದೇಶದಾದ್ಯಂತ ರೈತಸಮಸ್ಯೆ ತಾಂಡವವಾಡುತ್ತಿದೆ. ಕೆಂಪೇಗೌಡರು ಮೂರು-ನಾಲ್ಕು ದಶಕಗಳ ಹಿಂದೆಯೇ ರೈತನ ಸಮಸ್ಯೆಗಳನ್ನು ಸಾಹಿತ್ಯದ ಮೂಲಕ ಜಾಹೀರುಗೊಳಿಸಿದ್ದಾರೆ. ಇವರ ಸಾಹಿತ್ಯದಲ್ಲಿ ಪ್ರಸ್ತಾಪಿಸಿರುವ ಇಲ್ಲಾ ರೈತ ಸಮಸ್ಯೆಗಳು ಭಾರತದ ಮಟ್ಟಿಗೆ ಕಾಲಾತೀತವಾದ ಸಮಸ್ಯೆಯಾಗಿಯೇ ಉಳಿದುಕೊಂಡಿದೆ. ಬಹುಶಃ ಇವರ ಸಾಹಿತ್ಯದಂತೆಯೇ ರೈತನ ನೋವುಗಳನ್ನು ಈ ಸಮಾಜ ಅಲಕ್ಷಿಸಿದೆ. ಇವರ ಸಮಗ್ರ ಸಾಹಿತ್ಯವನ್ನು ಸಂಶೋಧನೆಗೆ ಒಳಪಡಿಸಿದ ನನಗೆ ಕಂಡುಬಂದ ಬಹುಮುಖ್ಯ ಸತ್ಯಗಳು ಮೇಲಿನ ಅಂಶಗಳಾಗಿವೆ. ಸಾಹಿತ್ಯಿಕವಾಗಿ ಲಭಿಸದ ಗೆಲುವು ಗೌಡರ ಸಾಮಾಜಿಕ ಕಳಕಳಿಗಾದರೂ ಲಭಿಸಬೇಕಾಗಿದೆ.

ಗ್ರಂಥ ಋಣ

1. ಕನ್ನಡದಲ್ಲಿ ಭಾವಗೀತೆ : ಪ್ರಭುಶಂಕರ, ನಿವೇದಿತಾ ಪ್ರಕಾಶನ ಮಾನಸಗಂಗೋತ್ರಿ, ಮೈಸೂರು–1981.
2. ಯುಗಧರ್ಮ ಹಾಗೂ ಸಾಹಿತ್ಯದರ್ಶನ : ಕೀರ್ತಿನಾಥ ಕುರ್ತಕೋಟಿ, ಕನ್ನಡ & ಸಂಸ್ಕೃತ ಇಲಾಖೆ–1983.
3. ಕನ್ನಡ ಕಥನ ಸಾಹಿತ್ಯ : ಕಾದಂಬರಿ, ಜಿ.ಎಸ್. ಅಮೂರ, ಶ್ರೀಹರಿ ಪ್ರಕಾಶನ ಧಾರವಾಡ 1994
4. ಸಾಹಿತ್ಯ ವಿಮರ್ಶೆ : ರಹಮತ್ ತರೀಕೆರೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು–1994.
5. ಕನ್ನಡ ಕಥನ ಸಾಹಿತ್ಯ : ಸಣ್ಣಕಥೆ : ಜಿ.ಎಸ್. ಅಮೂರ, ಪ್ರಿಯದರ್ಶಿನ ಪ್ರಕಾಶನ, ಬೆಂಗಳೂರು–2000.
6. ದಲಿತಮಾರ್ಗ : ಸಂ ಡಾ॥ ಅರವಿಂದ ಮಾಲಗತ್ತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–2002.
7. ಗೀಜಗನಗೂಡು(ಶಿವಳ್ಳಿ ಕೆಂಪೇಗೌಡರ ಸಮಗ್ರ ಕಥೆ ಕವನ ಸಂಪುಟ) ಡಾ॥ ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ ಬೆಂಗಳೂರು–2012
8. ಹೊಸಗನ್ನಡ ಸಾಹಿತ್ಯ ಚರಿತ್ರೆ: ಎಲ್.ಎಸ್.ಶೇಷಗಿರಿರಾವ್, ಕರ್ನಾಟಕ ಬುಕ್ ಏಜೆನ್ಸಿ ಬೆಂಗಳೂರು–2013
9. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ : ಸಂಪಾದಕರು, ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ, ಅಭಿನವ ಪ್ರಕಾಶನ ಬೆಂಗಳೂರು–2014.
10. ಕನ್ನಡ ಸಾಹಿತ್ಯ ಚರಿತ್ರೆ : ರಂ.ಶ್ರೀ ಮುಗಳಿ, ಗೀತಾ ಬುಕ್ ಹೌಸ್, ಮೈಸೂರು –2014.